Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–25 | ಜೂನ್ 16–22, 2025 | ಪುಟ 16 | ರೂ.10/–
Volume-19 | Issue-25 | June 16-22, 2025 | Pages 16 | Price 10/-



ಅಂತ್ಯವಿಲ್ಲದ ಯುದ್ಧ: ಮೋದಿಯವರ ಹೊಸ ಸಿದ್ಧಾಂತ!

ಕೃತಕ ಬುದ್ಧಿಮತ್ತೆ: ಭವಿಷ್ಯದ ಸವಾಲುಗಳು




ಒಳ ಮೀಸಲಾತಿ ಸಮೀಕ್ಷೆ: ಸಾಮಾಜಿಕ ವೈರುದ್ಯಗಳ ಮುಖಾಮುಖಿ



ಇಸ್ರೇಲ್ ನರಮೇಧದ ವಿರುದ್ಧ ಜಾಗತಿಕ ನಡಿಗೆ

'ಅಶ್ವತ್ಥಾಮ ನಾಟ್ ಔಟ್' : ಸಮಕಾಲೀನ ರಾಜಕಾರಣದ ಜಿಜ್ಞಾಸೆ



ಸೈನ್ಯದೊಳಗೆ ಪ್ರಜಾಪ್ರಭುತ್ವ: ಸೈನಿಕರೇ ಆರಿಸಿಕೊಂಡ ಸೇನಾಧಿಪತಿಗಳು

ಭಾಗ 29

ಜಿ.ಎನ್. ನಾಗರಾಜ್

ಏಪ್ರಿಲ್ 1647, ವಿಶ್ವದ ಸೇನಾ (ಮಿಲಿಟರಿ) ಚರಿತ್ರೆಯಲ್ಲಿ ಒಂದು ಹೊಸ ಪುಟ. ಬ್ರಿಟನ್‌ನ ಪಾರ್ಲಿಮೆಂಟ್ ಪರ ಸೈನ್ಯದಲ್ಲಿ ಒಂದು ಕ್ರಾಂತಿಕಾರಿ ಹೆಜ್ಜೆ. ಪಾರ್ಲಿಮೆಂಟ್ ಪರ ರಾವುತ ಸೈನ್ಯದ ಎಂಟು ತುಕಡಿಗಳ ಸೈನಿಕರು ತಮ್ಮ ಒಂದೊಂದು ತುಕಡಿಗಳಿಂದಲೂ ಇಬ್ಬರು ಪ್ರತಿನಿಧಿಗಳನ್ನು ಆಯ್ಕೆ ಮಾಡಿದರು. ಈ ಮಾದರಿಯನ್ನು ಕಾಲ್ದಳ ಸೈನ್ಯದ ತುಕಡಿಗಳೂ ಅನುಸರಿಸಿದವು. ನಂತರ ಈ ಪ್ರತಿನಿಧಿಗಳಿಂದ ಕೂಡಿದ ಸೈನ್ಯ ಮಂಡಳಿಯನ್ನು ರಚಿಸಿಕೊಂಡವು.

ಇದು ಅಲ್ಲಿಯವರೆಗೆ ವಿಶ್ವದ ಯಾವ ಸೈನ್ಯದ ಸೈನಿಕರೂ ಯೋಚಿಸಲೂ ಸಾಧ್ಯವಿಲ್ಲದ ಕ್ರಾಂತಿಕಾರಿ ಕ್ರಮ. ಪ್ರಜಾಪ್ರಭುತ್ವ ಕ್ರಾಂತಿಗಾಗಿ ನಡೆದ ಯುದ್ಧದಲ್ಲಿ ಸೈನ್ಯದ ಪ್ರಜಾಪ್ರಭುತ್ವೀಕರಣ. ಸಾಮಾನ್ಯ ಸೈನಿಕರು ಮತ್ತು ಕೆಳ ಹಂತದ ಸೇನಾಧಿಕಾರಿಗಳ ನಡುವೆ ಲೆವಲರ್ಸ್‌ಗಳ ಪ್ರಜಾಪ್ರಭುತ್ವವಾದಿ ಚಿಂತನೆ, ಹಿಂದಿನ ಲೇಖನದಲ್ಲಿ ವಿವರಿಸಿದ ವಿಚಾರಗಳು ಪಸರಿಸಿದ್ದವು. ಪ್ರಭಾವ ಬೀರಿದ್ದವು. ಅದರ ಪರಿಣಾಮ ಸೈನಿಕರು ಈ ದಿಟ್ಟ ಕ್ರಮ ಕೈಗೊಳ್ಳಲು ಮನಸ್ಸು ಮಾಡಿದರು.

ಸೈನ್ಯವೆಂದರೆ ಶಿಸ್ತು, ಕಠಿಣ ಶಿಸ್ತು. ಮೇಲಿನವರ ಆದೇಶವನ್ನು ಕೆಳಗಿನವರು ಪಾಲಿಸಲೇಬೇಕು. ಒಂದು ಚೂರು ಉಲ್ಲಂಘಿಸುವಂತಿಲ್ಲ. ಅದು ಯಾವುದೇ ಇರಲಿ. ಸೈನಿಕರು ಸ್ವಂತ ಯೋಚನೆ ಮಾಡುವಂತಿಲ್ಲ. ಉಲ್ಲಂಘಿಸಿದರೆ ಕಠಿಣ ಶಿಕ್ಷೆಗಳು. ಮಿಲಿಟರಿ ಸೇನಾಧಿಕಾರಿಗಳ ಕೋರ್ಟ್‌ನಲ್ಲಿಯೇ. ಈಗಲೂ ವಿಶ್ವದ ನೂರಾರು ದೇಶಗಳ ಸೈನ್ಯಗಳು ಅನುಸರಿಸುತ್ತಿರುವ ವಿಧಾನ ಇದು.

ಆದರೆ ಪಾರ್ಲಿಮೆಂಟ್ ಪರ ಸೈನ್ಯದಲ್ಲಿ ಮೊತ್ತ ಮೊದಲು ಸೈನಿಕರು ತಮ್ಮ ಸೇನಾಧಿಪತಿಗಳ ಆಜ್ಞೆಯನ್ನು ಕೇವಲ ಉಲ್ಲಂಘಿಸಲಿಲ್ಲ, ಧಿಕ್ಕರಿಸಿದರು. ತುಕಡಿಯ ಸೈನಿಕರ ಅಭಿಪ್ರಾಯಕ್ಕೆ ವಿರುದ್ಧವಾದ ಸೇನಾಧಿಕಾರಿಗಳನ್ನು ಕಿತ್ತು ಹಾಕಿದರು. ಹೊಸ ಸೇನಾಧಿಕಾರಿಗಳನ್ನು ಸೈನಿಕರ ಒಳಗಿನಿಂದಲೇ ಆಯ್ಕೆ ಮಾಡಿಕೊಂಡರು.

ಪಾರ್ಲಿಮೆಂಟ್ ಪರ ಹೋರಾಡಿದ ಸೈನ್ಯವನ್ನು ವಿಸರ್ಜಿಸುವ ಆಜ್ಞೆಯ ಧಿಕ್ಕಾರ:

ರಾಜನ ಸೈನ್ಯವನ್ನು ಪಾರ್ಲಿಮೆಂಟ್ ಪರ ಸೈನ್ಯ ಸೋಲಿಸಿತು. ಈ ಗೆಲುವಿನಲ್ಲಿ ರೈತರು, ಜೀತಗಾರರು, ಕುಶಲಕೆಲಸಗಾರರಿಂದ ಕೂಡಿದ ಸೈನ್ಯ ದೃಢತೆಯಿಂದ ಮಾಡಿದ ಹೋರಾಟ ಮತ್ತು ಅದಕ್ಕೆ ಕ್ರೋಮ್‌ವೆಲ್ ಎಂಬ ಒಬ್ಬ ಸಣ್ಣ ಜಮೀನುದಾರ, ಸಂಸತ್ ಸದಸ್ಯರ ನೇತೃತ್ವ ಮುಖ್ಯ ಕಾರಣ. ಪಾರ್ಲಿಮೆಂಟ್ ಸದಸ್ಯರಾಗಿದ್ದ ಶ್ರೀಮಂತ ವರ್ಗಗಳ ಅರೆ ಮನಸ್ಸಿನ ಹೋರಾಟವನ್ನು ನೋಡಿದ ಕ್ರೋಮ್‌ವೆಲ್‌ಗೆ ಇಂತಹ ಸೇನೆಯಿಂದ ರಾಜನ ತರಬೇತಿ ಪಡೆದ ಸೈನ್ಯವನ್ನು ಸೋಲಿಸಲಾಗುವುದಿಲ್ಲ. ರಾಜಾಡಳಿತದ ದಬ್ಬಾಳಿಕೆಯಿಂದ ಬಹುವಾಗಿ ಸಂಕಟ ಪಡುತ್ತಿದ್ದ ಈ ವರ್ಗಗಳು, ರಾಜಾಡಳಿತವನ್ನು ಕೊನೆಗೊಳಿಸುವದಕ್ಕೆ ಪ್ರಾಣ ಪಣಕ್ಕಿಟ್ಟು ಹೋರಾಡುವ ದೃಢ ಮನಸ್ಥಿತಿಯ ವರ್ಗಗಳು ಯುದ್ಧದಲ್ಲಿ ಪಾಲ್ಗೊಳ್ಳದೆ ಇದ್ದರೆ ಪಾರ್ಲಿಮೆಂಟ್ ಪರ ಸೈನ್ಯ ಗೆಲ್ಲುವುದು ಸಾಧ್ಯವಿಲ್ಲ ಎಂಬುದು ಕ್ರೋಮ್‌ವೆಲ್‌ಗೆ ಅರಿವಾಗಿತ್ತು. ಆದ್ದರಿಂದ ಈ ವರ್ಗದ ಜನರು ಸೈನ್ಯದಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದರು.

ರಾಜನ ಸೋಲಿನ ನಂತರ ಕ್ರೋಮ್‌ವೆಲ್‌ನ ಪ್ರಸಿದ್ಧಿ ಪಾರ್ಲಿಮೆಂಟಿನಲ್ಲಿ ಬಹುಮತ ಹೊಂದಿದ್ದ ಶ್ರೀಮಂತ ವರ್ಗಗಳ ಹಿತಾಸಕ್ತಿಗೆ ಬಹು ದೊಡ್ಡ ಅಡ್ಡಿಯಾಗಿ ಕಾಣಿಸಿತು. ಜೊತೆಗೆ ಅನುಭವಿಸುತ್ತಿದ್ದ ಸಂಕಟಗಳಿಂದಾಗಿ ಸಿಟ್ಟಿನಿಂದ ಕುದಿಯುತ್ತಿದ್ದ ದುಡಿಯುವ ವರ್ಗಗಳ ಮೂಲದ ಸೈನ್ಯದ ಬಗೆಗೂ ಅವರು ಭಯ ಪಟ್ಟರು.

ಆದ್ದರಿಂದ ತಮ್ಮ ಬಹುಮತವನ್ನು ಬಳಸಿ ಸೈನ್ಯವನ್ನು ವಿಸರ್ಜಿಸಿ ದುಡಿಯುವ ವರ್ಗಗಳನ್ನು ನಿಶ್ಶಸ್ತ್ರಗೊಳಿಸಲು ತವಕಿಸಿದರು. ಅಂದರೆ ಸೈನಿಕರಿಂದ ಶಸ್ತ್ರಾಸ್ತ್ರಗಳನ್ನು ಕಿತ್ತುಕೊಂಡು ಅವರವರ ಮನೆಗೆ ಓಡಿಸುವುದು. ಅವರಿಗೆ ನಾಲ್ಕರಿಂದ ಹತ್ತು ತಿಂಗಳವರೆಗೂ ಸಂಬಳ, ಸತ್ತವರ, ಅಂಗವಿಕಲರಾದವರ ಕುಟುಂಬಗಳಿಗೆ ಪೆನ್ಷನ್ ಕೂಡಾ ನೀಡದೆ ಓಡಿಸುವ ಈ ತಂತ್ರ ಶ್ರೀಮಂತರ ಶೋಷಕ ಮನಸ್ಸಿನ ಸಹಜ ವರ್ತನೆಯಲ್ಲವೇ!



ಆದರೆ ಸೈನಿಕರು ಹೀಗೆ ವಿಸರ್ಜನೆಗೊಳ್ಳಲು, ಶಸ್ತ್ರಾಸ್ತ್ರ ಒಪ್ಪಿಸಲು, ತುಕಡಿಗಳನ್ನು ಪುನರ್ ವಿಂಗಡಿಸಲು ನಿರಾಕರಿಸಿದರು. ಸ್ವತಃ ಕ್ರೋಮ್‌ವೆಲ್ ಈ ತುಕಡಿಗಳನ್ನು ವಿಸರ್ಜನೆಗೊಳ್ಳಲು ಒಪ್ಪಿಸುತ್ತೇನೆ ಎಂದು ಪಾರ್ಲಿಮೆಂಟಿನಲ್ಲಿ ಘೋಷಿಸಿ ಬಂದು ಪ್ರಯತ್ನ ಮಾಡಿದರೂ ಒಪ್ಪಲಿಲ್ಲ.

ಈ ತುಕಡಿಗಳು ತಮ್ಮದೇ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಂಡು ತಮ್ಮದೇ ಸೈನ್ಯಮಂಡಳಿಯನ್ನು ರಚಿಸಿಕೊಂಡರು ಮಾತ್ರವಲ್ಲ, ಅದೇ ತಿಂಗಳ ಕೊನೆಗೆ ಕ್ರೋಮ್‌ವೆಲ್ ಸೇರಿ ಪ್ರಧಾನ ಕಮ್ಯಾಂಡರ್‌ಗಳಿಗೆ ಎಲ್ಲ ತುಕಡಿಗಳ ಮುಖ್ಯರು ಸಹಿ ಹಾಕಿದ ಪತ್ರ ರವಾನಿಸಿದರು. ಅದರಲ್ಲಿ ವಿಸರ್ಜನೆಯ ವಿರೋಧ, ಸಂಬಳ, ಪೆನ್ಷನ್ ಮಾತ್ರವಲ್ಲದೆ ರಾಜನ ಬಂಧನಾನಂತರದ ಆಡಳಿತದ ರಾಜಕೀಯ ಪ್ರಶ್ನೆಗಳನ್ನು ಎತ್ತಿದರು. ಇಡೀ ಸೈನ್ಯದ ಒಂದು ಮಹಾ ಸಭೆ ನಡೆದು ಅಲ್ಲಿ ಈ ವಿಷಯಗಳು ಚರ್ಚೆಯಾಗಬೇಕೆಂದು ಒತ್ತಾಯಿಸಿದರು.

ಈ ಎಲ್ಲ ಪ್ರಕ್ರಿಯೆಗಳು ಸೈನ್ಯದಲ್ಲಿ ಕ್ರೋಮ್‌ವೆಲ್ ಗ್ರಾಂಡಿಗಳೆಂಬ ಕ್ರೋಮ್‌ವೆಲ್ ಪರ ಶ್ರೀಮಂತ ವರ್ಗ ಹಾಗೂ ದುಡಿಯುವ ವರ್ಗ ಮೂಲದ ಲೆವಲರ್ಸ್‌ಗಳ ವರ್ಗ ಭೇದವನ್ನು ಎತ್ತಿ ತೋರಿಸಿತು. ದೊಡ್ಡ ಶ್ರೀಮಂತರ ಪರವಾದ ಪಾರ್ಲಿಮೆಂಟ್ ಮಾತ್ರವಲ್ಲ ತಮ್ಮ ಸೈನ್ಯದ ಶ್ರೀಮಂತ ಕಮಾಂಡರ್‌ಗಳ ಸೈದ್ಧಾಂತಿಕ ಹಿಡಿತದಿಂದ ಬಿಡಿಸಿಕೊಳ್ಳುವ ಪ್ರಕ್ರಿಯೆಯ ಆರಂಭವಾಗಿತ್ತು.

ಈ ಮೂಲಕ ಲೆವೆಲರ್ಸ್‌ಗಳ ಮಿಲಿಟರಿ ವಿಭಾಗವೊಂದು ಅಸ್ತಿತ್ವಕ್ಕೆ ಬಂದಿತು. ಈ ಕ್ರಮ ಕೇವಲ ದುಡಿಯುವ ವರ್ಗದ ಪ್ರಜಾಪ್ರಭುತ್ವ ತುಡಿತದ ಅಭಿವ್ಯಕ್ತಿ ಮಾತ್ರ ಆಗಿರಲಿಲ್ಲ. ಈ ಕ್ರಮ ಬ್ರಿಟಿಷ್ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ, ಪ್ರತಿಗಾಮಿ ಶೋಷಕ ಶಕ್ತಿಗಳು ಕ್ರಾಂತಿಯನ್ನು ವಿಫಲಗೊಳಿಸುವ ಕುತಂತ್ರಗಳಿಂದ ರಕ್ಷಿಸುವಲ್ಲಿ ಹೆಜ್ಜೆ ಹೆಜ್ಜೆಗೂ ಬಹು ಮಹತ್ವದ ಪಾತ್ರ ವಹಿಸಿತು.

ಇದೇ ಸಮಯದಲ್ಲಿ ದುಡಿಯುವ ವರ್ಗದ ವೀರ ಲಿಲ್‌ಬರ್ನ್ ಸೈನಿಕರಿಗೆ ಒಂದು ವಿಶೇಷ ಮನವಿ ಮಾಡಿದ. ಇದೂ ಕೂಡಾ ಒಂದು ಪ್ರಥಮ ದಾಖಲೆಯಾಗಿತ್ತು. ಇಲ್ಲಿಯವರೆಗೆ ಲಿಲ್‌ಬರ್ನ್ ಮತ್ತು ಇತರ ಲೆವಲರ್ಸ್ ಮುಖ್ಯರು ರಾಜನ, ಲಾರ್ಡ್ಸ್‌ಗಳ ಸಭೆಯ ಅಸ್ತಿತ್ವವನ್ನೇ ನಿರಾಕರಿಸಿ ಲೋಕಸಭೆಯಂತಹ ಹೌಸ್ ಆಫ್ ಕಾಮನ್ಸ್‌ಗೆ ಮಾತ್ರ ತಮ್ಮ ಮನವಿಗಳನ್ನು ಮಾಡುತ್ತಿದ್ದರು. ಅದು ಮಾತ್ರವೇ ಬ್ರಿಟಿಷ್ ಜನರ ಅಧಿಕಾರಯುತ ಸಂಸ್ಥೆ ಎಂಬ ಅವರ ದಿಟ್ಟ ನಿಲುವಾಗಿತ್ತು ಅದು. ಆದರೆ ಈ ಕಾಮನ್ಸ್ ಸಭೆ ಅವರ ಆರು ಮನವಿಗಳನ್ನೆಲ್ಲಾ ನಿರಾಕರಿಸಿತು. ಅವರ ಸಮಗ್ರ ನಿಲುವನ್ನು ಮುಂದಿಟ್ಟ ಲಾರ್ಜ್ ಪೆಟಿಷನ್ ಎಂಬ ಇತ್ತೀಚಿನ ಮನವಿಯನ್ನು ರಾಜದ್ರೋಹ ಎಂದು ಪರಿಗಣಿಸಿ ಅದನ್ನು ಬಹಿರಂಗವಾಗಿ ಸುಡಲು ಆಜ್ಞೆ ಮಾಡಿತು.

ಇದರ ನಂತರ ಲೆವಲರ್ಸ್‌ಗಳು ಈ ಶ್ರೀಮಂತ ವಿಭಾಗಗಳಿಂದ ತುಂಬಿ ತುಳುಕುವ ಪಾರ್ಲಿಮೆಂಟ್ ಜನರ ಪ್ರತಿನಿಧಿಯಲ್ಲ ಎಂದು ನಿರಾಕರಿಸುವಂತೆ ನೇರವಾಗಿ ರಾಜನ ವಿರುದ್ಧ ವಿಜಯದ ಸಾಧನವಾಗಿದ್ದ ಸೈನಿಕರಿಗೇ ಮನವಿ ಮಾಡಿತು. ಆ ಮೂಲಕ ನಾಗರಿಕ ಲೆವಲರ್ಸ್ ಮತ್ತು ಸೈನ್ಯದ ಲೆವಲರ್ಸ್‌ಗಳ ನಡುವೆ ಹೆಚ್ಚು ಸಂಪರ್ಕ, ಸಹಮನಸ್ಕತೆ ಮೂಡಿತು.

ಲೆವಲರ್ಸ್‌ಗಳ ಹಿಡಿತದಲ್ಲಿ ರಾಜ:

ಪಾರ್ಲಿಮೆಂಟಿನ ಬಹುಮತದ ಸದಸ್ಯರು ರಾಜನಬಂಧನವಾದಂದಿನಿಂದಲೂರಾಜನೊಂದಿಗೆ ರಾಜಿ ಮಾಡಿಕೊಂಡು ಮತ್ತೆ ಅವನನ್ನು ಅಧಿಕಾರಕ್ಕೆ ತರುವ ಪ್ರಯತ್ನ ನಡೆಸುತ್ತಿದ್ದರು. ಕ್ರೋಮ್‌ವೆಲ್ ಮತ್ತವನ ಜೊತೆಗಾರರು ಕೂಡಾ, ಈ ಬಹುಮತದ ಸದಸ್ಯರಿಗಿಂತ ಭಿನ್ನವಾಗಿ ತಮ್ಮದೇ ಆದ ಶರತ್ತುಗಳೊಡನೆ ರಾಜ ಪ್ರಭುತ್ವವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಹೀಗೆ ರಾಜ ಪ್ರಭುತ್ವದ ವಿರುದ್ಧ ಯುದ್ಧದಲ್ಲಿ ಒಂದಾಗಿದ್ದ ಈ ಶಕ್ತಿಗಳು ಜನರ ಬೆನ್ನ ಹಿಂದೆ, ದುಡಿಯುವ ಜನರ ಹಿತಗಳ ಬಗ್ಗೆ ಒಂಚೂರು ಯೋಚಿಸದೆ ತಂತಮ್ಮ ಸ್ವಾರ್ಥವನ್ನು ಈಡೇರಿಸಿಕೊಳ್ಳಲು ನಡೆಸುತ್ತಿದ್ದ ಕುತಂತ್ರವನ್ನು ವಿಫಲಗೊಳಿಸಲು ಲೆವಲರ್ಸ್ ಸೈನಿಕರು ಯೋಚಿಸಿದರು. ಒಂದು ಲೆವಲರ್ಸ್ ಪರ ತುಕಡಿಯ ಮುಖ್ಯಸ್ಥ ಯಾರ ಆದೇಶವೂ ಇಲ್ಲದೆ ರಾಜನನ್ನು ಬಂಧಿಸಿದ್ದ ಆಕ್ಸ್‌ಫರ್ಡ್‌ಗೆ ತೆರಳಿ ರಾಜನನ್ನು ತನ್ನ ತುಕಡಿಯ ವಶಪಡಿಸಿಕೊಂಡ.

ಇದು ಎಲ್ಲ ರಾಜಿ ಕುತಂತ್ರಗಳಿಗೆ ಅಡ್ಡಿ ಉಂಟು ಮಾಡಿದ್ದು ಮಾತ್ರವಲ್ಲ ಲೆವಲರ್ಸ್ ಒಂದು ಮುಖ್ಯ ಶಕ್ತಿಯಾಗಿದೆ ಎಂಬುದನ್ನು ಸ್ಥಾಪಿಸಿತು. ಕೆಲವೇ ದಿನ ನಂತರ ನಡೆದ ಸೈನಿಕರ ಮಹಾ ಸಭೆಯಲ್ಲಿ ಇಡೀ ಸೈನ್ಯ ಪಾರ್ಲಿಮೆಂಟಿನ ವಿಸರ್ಜನೆಯ ಆಜ್ಞೆಯನ್ನು ತಿರಸ್ಕರಿಸಿತು. ಅದೇ ಸಭೆಯಲ್ಲಿ ಕ್ರೋಮ್‌ವೆಲ್ ಕೇವಲ ಮೇಲ್ ಹಂತದ ಸೇನಾಧಿಕಾರಿಗಳೇ ಇದ್ದ ವಾರ್ ಕೌನ್ಸಿಲ್ ಯುದ್ಧ ಮಂಡಳಿಗೆ ಸೈನಿಕರೇ ಆರಿಸಿದ ಇಬ್ಬರು ಪ್ರತಿನಿಧಿಗಳು ಮತ್ತು ಇಬ್ಬರು ಕೆಳ ಹಂತದ ಅಧಿಕಾರಿಗಳನ್ನೂ ಸೇರಿಸಿ ಹೊಸ ಸರ್ವ ಸೈನ್ಯ ಪರಿಷತ್ತನ್ನು ರಚಿಸಿದ. ಇದನ್ನು ಸೈನಿಕರು ಆರಿಸಿದ ಪ್ರತಿನಿಧಿಗಳು, ಲೆವಲರ್ಸ್‌ಗಳೇ ಇದ್ದ ಸೈನ್ಯ ಮಂಡಳಿಯನ್ನು ಪಕ್ಕಕ್ಕೆ ಸರಿಸಲು ರಚಿಸಲಾದರೂ ದುಡಿಯುವ ವರ್ಗದ ಸೈನಿಕರಿಗೆ ಇದೊಂದು ಗೆಲುವು ಮತ್ತು ಅವರ ಬಲಕ್ಕೆ ಸಿಕ್ಕ ಮನ್ನಣೆಯಾಗಿತ್ತು.

ಪಾರ್ಲಿಮೆಂಟ್ ಸೈನ್ಯದ ಪರವಾಗಿ ಸಲ್ಲಿಸಿದ್ದ ಮನವಿಗಳನ್ನು ತಿರಸ್ಕರಿಸಿದಾಗ ಲೆವಲರ್ಸ್‌ಗಳ ಸೈನ್ಯ ಮಂಡಳಿ ಮತ್ತೆ ಮತ್ತೆ ಸಭೆ ಸೇರಿತು. ತಮ್ಮ ಅಭಿಪ್ರಾಯಗಳನ್ನು ಜನರ ನಡುವೆ ಪಸರಿಸಲು ತಮ್ಮದೇ ಮುದ್ರಣಾಲಯವನ್ನು ಹೊಂದಬೇಕೆಂದು ತೀರ್ಮಾನಿಸಿದರು.

ನಾಲ್ಕಾರು ತಿಂಗಳು ಕಾದ ಮೇಲೆ ತಮ್ಮ ಸೈನ್ಯದ ಪ್ರಧಾನ ಕಮಾಂಡರ್‌ಗಳಿಗೆ "ಸೈನ್ಯದ ನೈಜ ವಿಚಾರಗಳ ಮಂಡನೆ" ಎಂಬ ಒಂದು ಪತ್ರ ಬರೆದರು. ಹಲವು ತಿಂಗಳುಗಳಿಂದ ಅವರು ಪ್ರತಿಪಾದಿಸಿದ ವಿಷಯಗಳು, ಈ ಯುದ್ಧ ಮತ್ತು ಅದರ ಕ್ರೌರ್ಯಗಳಿಗೆ ಮೂಲ ಕಾರಣರಾದ ರಾಜನನ್ನು ಮತ್ತವನ ಸೇನಾಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಿ ಶಿಕ್ಷಿಸಬೇಕು, ಈ ಶ್ರೀಮಂತ ಶೋಷಕರಿಂದ ತುಂಬಿದ ಪಾರ್ಲಿಮೆಂಟನ್ನು ವಿಸರ್ಜಿಸಬೇಕು. ತಕ್ಷಣ ಹೊಸದಾಗಿ ಚುನಾವಣೆ ನಡೆಸಬೇಕು ಇತ್ಯಾದಿಗಳು ಒಳಗೊಂಡಿದ್ದವು. ಆದರೆ ಕ್ರೋಮ್‌ವೆಲ್ ಮತ್ತವನ ಜೊತೆಗಾರರ ಗ್ರಾಂಡಿಗಳು ರಾಜನ ಜೊತೆ ಸಂಧಾನ ನಡೆಸಿ ಅವನನ್ನು ಅಧಿಕಾರಕ್ಕೆ ಮತ್ತೆ ತರುವ ಪ್ರಯತ್ನವನ್ನೇ ಮಾಡುತ್ತಿದ್ದರು. ಕ್ರೊಮ್ವೆಲ್ ಸ್ವತಃ ಪಾರ್ಲಿಮೆಂಟ್‌ನಲ್ಲಿ ರಾಜ ಪ್ರಭುತ್ವ ಇಲ್ಲದಿದ್ದರೆ ಆಸ್ತಿ ಸಂಪತ್ತುಗಳಿಗೆ ರಕ್ಷಣೆ ಇರುವುದಿಲ್ಲ ಎಂಬಂತಹ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದ. ಹೀಗಾಗಿ ಲೆವಲರ್ಸ್ ದಳದ ಈ ವಿಚಾರಗಳಿಗೆ ಅವನ ಸ್ಪಷ್ಟ ವಿರೋಧವಿತ್ತು.

ಕ್ರೋಮ್‌ವೆಲ್‌ನ ಈ ವರ್ತನೆಗಳು ಸೈನಿಕರಲ್ಲಿ ಹಲವಾರು ಸಂಶಯ ಹಾಗೂ ಅಸಮಾಧಾನಗಳಿಗೆ ಕಾರಣವಾಗಿದ್ದವು. ಆದರೆ ಸೈನ್ಯ ಒಗ್ಗಟ್ಟಾಗಿ ತನ್ನ ಬೆನ್ನ ಹಿಂದೆ ನಿಲ್ಲದಿದ್ದರೆ ಪಾರ್ಲಿಮೆಂಟಿನ ಬಹುಮತದ ಸದಸ್ಯರು ರಾಜನ ವಿರುದ್ಧ ವಿಜಯದ ಕೀರ್ತಿಯನ್ನೂ ಕಸದಂತೆ ಕಂಡು ತನ್ನನ್ನೂ ಮೂಲೆಗುಂಪು ಮಾಡುವರು ಎಂಬುದು ಅವನಿಗೆ ಅರಿವಿತ್ತು. ಏಕೆಂದರೆ ಈಗಾಗಲೇ ಅವನನ್ನು ಒಮ್ಮೆ ಬಂಧಿಸಲು ಪ್ರಯತ್ನ ನಡೆಸಿದ್ದರು. ಮುಂದೆಯೂ ಹಲವು ಬಾರಿ ಹೀಗೆ ಬೇರೆ ಬೇರೆ ಪ್ರಯತ್ನಗಳನ್ನು ಮಾಡಿದರು. ಇದರ ಅರಿವು ಕ್ರೋಮ್‌ವೆಲ್‌ಗೆ ಇದ್ದುದರಿಂದ ಲೆವಲರ್ಸ್‌ಗಳ ಒತ್ತಾಯಗಳಿಗೆ ಬಾಗುವುದು ಅವನಿಗೆ ಅನಿವಾರ್ಯವಾಗಿತ್ತು.

ಆದ್ದರಿಂದ ಸೈನ್ಯದ ಪ್ರತಿನಿಧಿಗಳ ಪತ್ರದ ವಿಷಯಗಳನ್ನು ಚರ್ಚಿಸಲು ಒಪ್ಪಿದ. ಕ್ರೋಮ್‌ವೆಲ್ ಈ ಪ್ರತಿನಿಧಿಗಳು ಮತ್ತು ಸೈನ್ಯದ ಹೊರಗಿದ್ದ ನಾಗರಿಕ ಲೆವಲರ್ಸ್‌ಗಳನ್ನೂ ಸೇರಿಸಿ ಪುಟ್ನೀ ಎಂಬ ಸ್ಥಳದಲ್ಲಿ ವಾರಗಟ್ಟಲೆ ಚರ್ಚೆ ನಡೆಯಿತು.

ಪುಟ 12 ಕ್ಕೆ

ಒಳ ಮೀಸಲಾತಿ-ಸಮೀಕ್ಷೆ: ಸಾಮಾಜಿಕ ವೈರುದ್ಯಗಳ ಮುಖಾಮುಖಿ

ಈ ವಾರ

ಎಸ್.ವೈ.ಗುರುಶಾಂತ್

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯ ಅವಕಾಶದೊಳಗೆ ಒಳ ಮೀಸಲಾತಿಯನ್ನು ಜಾರಿ ಮಾಡಲು ಅನುಮತಿ ನೀಡಿ ಸುಪ್ರೀಂ ಕೊರ್ಟಿರುವ ತೀರ್ಪಿನ ಆಧಾರದಲ್ಲಿ ರಾಜ್ಯ ಸರಕಾರವು ಪರಿಶಿಷ್ಟ ಜಾತಿಯ ಒಳಗೆ ಒಳ ಮೀಸಲಾತಿಯನ್ನು ಜಾರಿ ಮಾಡುವ ನಿರ್ಧಾರ ಕೈಗೊಂಡಿದೆ. ಈ ಸಂಬಂಧ ವಿವಿಧ ಪರಿಶಿಷ್ಟ ಜಾತಿಗಳ ಜಾತಿವಾರು ಜನಸಂಖ್ಯೆ, ಶೈಕ್ಷಣಿಕ-ಸಾಮಾಜಿಕ ಪ್ರಗತಿ-ಸ್ಥಿತಿಗತಿ ಮುಂತಾದ ಮಾಹಿತಿ ಸಂಗ್ರಹಿಸುವ ಸಮೀಕ್ಷೆ ನಡೆಸಿ ಶಿಫಾರಸ್ಸು ನೀಡಲು ರಾಜ್ಯ ಸರಕಾರ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಏಕ ಸದಸ್ಯ ಆಯೋಗವನ್ನು ನೇಮಿಸಿದೆ. ಸುಪ್ರಿಂ ಕೋರ್ಟಿನ ನಿರ್ದೇಶನಗಳನ್ನು ಲಕ್ಷಿಸಿ ಆಯೋಗವು ಡಾಟಾಗಳನ್ನು ಸಂಗ್ರಹಿಸಲು ವಿಶೇಷವಾದ ವ್ಯಾಪಕ ಸಮೀಕ್ಷಾ ಕ್ರಮಗಳನ್ನು ಅನುಸರಿಸುತ್ತಿದೆ. ಜನ ಜಾಗೃತಿಗೊಳಿಸಲು ಮಾಧ್ಯಮಗಳ ಮೂಲಕ ಪ್ರಚಾರ ಕಾರ್ಯ ಮಾಡುತ್ತಿದೆ. ಇವೆಲ್ಲಾ ಸ್ವಾಗತಾರ್ಹ.

ಇದೇ ಹೊತ್ತಿನಲ್ಲಿ ಪರಿಶಿಷ್ಟ ಪಂಗಡ (ಎಸ್.ಟಿ.) ಸಮುದಾಯಗಳಿಗೂ ಒಳ ಮೀಸಲಾತಿ ಸಿಗಬೇಕೆಂಬ ಕೂಗು ಸಹ ಕೇಳಿ ಬರುತ್ತಿರುವುದನ್ನು ಗಮನಿಸಬೇಕು.

ಸ್ಫೋಟಗೊಂಡ ಸಂಕೀರ್ಣ ಸಮಸ್ಯೆಗಳು

ಸಮಾಜದ ತಳಹದಿಯಲ್ಲಿ ದತ್ತಾಂಶ ಸಂಗ್ರಹಕ್ಕಾಗಿ ನಡೆಯುತ್ತಿರುವ ಈ ಸಮೀಕ್ಷಾ ಕಾರ್ಯದಲ್ಲಿ ಹಲವಾರು ಸಂಕೀರ್ಣವಾದ ಸಮಸ್ಯೆಗಳೂ ಎದುರಾಗುತ್ತಿರುವ ವರದಿಗಳಿವೆ. ಸಮೀಕ್ಷಾ ಕಾರ್ಯ ಎನ್ನುವುದು ಕೇವಲ ಮಾಹಿತಿಗಳ ಸುಲಭ ಸಂಗ್ರಹ ಅಲ್ಲ, ಬದಲಾಗಿ ಅಸಮಾನತೆಗಳನ್ನು ಒಳಗೊಂಡ ಸಾಮಾಜಿಕ-ಆರ್ಥಿಕ ಬಿಕ್ಕಟ್ಟುಗಳೊಂದಿಗಿನ ಮುಖಾಮುಖಿ. ಅಸ್ತಿತ್ವದಲ್ಲಿರುವ ವೈರುದ್ಯಗಳು ಈ ಸಂದರ್ಭದಲ್ಲಿ ಸಿಡಿದಿವೆ.

ರಾಜ್ಯದಲ್ಲಿ, ವಿಶೇಷವಾಗಿ ನಗರ-ಪಟ್ಟಣಗಳಲ್ಲಿ, ವಾಸಕ್ಕೆ ಮನೆ ಹುಡುಕುವ ದಲಿತರು ಎದುರಿಸುತ್ತಿರುವ ಸಮಸ್ಯೆಗಳು ಹೇಳಿಕೊಳ್ಳಲಾಗದ ಸಂಗತಿಗಳು. 'ಸಸ್ಯಾಹಾರಿಗಳಿಗೆ ಮಾತ್ರ' ಎಂದು ಮನೆಯ ಗೇಟಿನೆದುರು ನೇತಾಡುವ ಬೋರ್ಡ್‌ಗಳು ಮಾಂಸಾಹಾರಿಗಳಾದ ಶೂದ್ರ ಜಾತಿಗಳನ್ನೂ ಸೇರಿ ಕೆಳ ಜಾತಿಗಳಿಗೆ ಮನೆ ಇಲ್ಲ ಎನ್ನುವುದನ್ನು ಸಾರುತ್ತವೆ. ಅಂತಹ ಸಂದೇಶಗಳು ದಲಿತ-ಅಸ್ಪೃಶ್ಯರನ್ನು ಅಂಗಳದಿಂದಲೇ ಹೊರಗಟ್ಟುತ್ತವೆ. ಹೀಗಾಗಿ ಬಾಡಿಗೆ ಮನೆ ಸಿಗಬೇಕೆಂದರೆ ತಮ್ಮ ನಿಜ ಜಾತಿಗಳನ್ನು ಬಚ್ಚಿಡಬೇಕು. ಹೀಗೆ ಮನೆಯೂ ಸಿಗದೇ ಹೋಗುವ ಆತಂಕದಲ್ಲಿ ತಮ್ಮ ಜಾತಿ ಗುರುತುಗಳನ್ನು ಮರೆಮಾಚಿ ಬದುಕುತ್ತಿದ್ದ ಎಷ್ಟೋ ಜನ ದಲಿತರು ಸಮೀಕ್ಷೆಯಲ್ಲಿ ತಮ್ಮ ಕುರಿತು ನೈಜ ಮಾಹಿತಿಗಳನ್ನು ನೀಡಲಾಗದೇ ಪರಿತಪಿಸುತ್ತಿದ್ದಾರೆ. ಈ ಸ್ಥಿತಿ ಆಯೋಗದ ಅಧ್ಯಯನ ಮತ್ತು ನಿಜ ಮಾಹಿತಿಗಳ ಸಂಗ್ರಹ ಮಾಡುವ ಉದ್ದೇಶಕ್ಕೆ ಅಡ್ಡಿ ಆಗುವಂತಹದು.

ಬೆಂಗಳೂರಿನ ಬಸವನಗುಡಿಯ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯ ಬ್ಯಾಂಕ್ ನೌಕರರೊಬ್ಬರು ಮಗುವಿನ ಶಾಲೆಗೆ ಹತ್ತಿರವಾಗಿ ಮನೆ ಬಾಡಿಗೆಗೆ ಬೇಕೆಂದು ಹುಡುಕಿದಾಗ ಅವರಿಗೆ ಮನೆ ಸಿಗಲೇ ಇಲ್ಲ. ಅವರು ನಂತರ ಬೇರೆ 'ಮೇಲ್ಜಾತಿ'ಯೊಂದರ ಹೆಸರು ಹೇಳಿ ಮನೆ ಬಾಡಿಗೆಗೆ ಪಡೆದಿದ್ದರು. ಸಮೀಕ್ಷೆಗೆಂದು ಬಂದ ಶಿಕ್ಷಕರಿಗೂ ಅದೇ ಸುಳ್ಳನ್ನು ಹೇಳಿದರು. ಆದರೆ ನಂತರ ಸಮೀಕ್ಷಕರು ಬೇರೆ ಕಡೆ ಇದ್ದಾಗ ಬಂದು ತಮ್ಮ ನಿಜವಾದ ಜಾತಿಯ ಮಾಹಿತಿ ನೀಡಿದರು.



ಇನ್ನು ಜಯನಗರ, ವಿಜಯನಗರ, ಬ್ಯಾಟರಾಯನಪುರ ಮುಂತಾದ ನಾನಾ ಕಡೆಗಳಲ್ಲಿ ಇಂತಹ ಸಮಸ್ಯೆಗಳು ವರದಿಯಾಗಿವೆ. (28-ಮೇ, 2025 ಪ್ರಜಾವಾಣಿ-ವರದಿ) ಈ ಹಲವು ಕಡೆಗಳಲ್ಲಿ ಮನೆಯ ಮಾಲಿಕರು, ಅಪಾರ್ಟ್ಮೆಂಟ್‌ಗಳ ಮಾಲೀಕರೇ ತಮ್ಮ ಮನೆ, ಅಪಾರ್ಟ್ಮೆಂಟ್‌ಗಳಲ್ಲಿ ಯಾರೂ ಎಸ್.ಸಿ.ಗಳಿಲ್ಲ ಎಂದು ಹೇಳಿ ಸಮೀಕ್ಷೆಗೆ ಅವಕಾಶ ಕೊಡದೇ ತಡೆ ಒಡ್ಡಿರುವ ಘಟನೆಗಳೂ ನಡೆದಿವೆ. ಪರಿಶಿಷ್ಟ ಜಾತಿಯವರು ಇಲ್ಲದ ಮನೆಗಳಲ್ಲೂ ಸಮೀಕ್ಷೆಗಾಗಿ ಭೇಟಿ ನೀಡಬೇಕೆಂದರೂ ಅವಕಾಶ ನೀಡಿಲ್ಲ.

ಹಲವು ಬಾರಿ ಹೊಸ ಬಡಾವಣೆ ಅಥವಾ ಅಪಾರ್ಟ್ಮೆಂಟ್‌ಗಳನ್ನು ನಿರ್ಮಿಸುವವರು ಬಹುತೇಕ ನಮ್ಮ ಸಮಾಜದ ವ್ಯವಸ್ಥೆಯಲ್ಲಿ ಮೇಲಿನ ಜಾತಿಗೆ ಸೇರಿದವರಾಗಿರುತ್ತಾರೆ. ಅವರು ಪರಿಶಿಷ್ಟ ಜಾತಿ-ಪಂಗಡದ ಜನರು ತಮ್ಮ ನಿವೇಶನ, ಅಥವಾ ಮನೆಗಳನ್ನು ಖರೀದಿಸುವುದನ್ನು ಬಹಳ ಚಾಣಾಕ್ಷತೆಯಿಂದ ವ್ಯವಸ್ಥಿತವಾಗಿ ತಡೆಯುತ್ತಾರೆ. ಕೆಲವೊಮ್ಮೆ ಇಂತಹ ಬಡಾವಣೆ/ಅಪಾರ್ಟ್ಮೆಂಟ್‌ಗಳಲ್ಲಿ ಒಂದೇ ಜಾತಿಯವರೇ ಬಹಳಷ್ಟು ಜನರು ನಿವೇಶನ/ಮನೆ ಖರೀದಿಸುವುದರಿಂದ ಅವು ಆಧುನಿಕ ಕಾಲದ 'ಜಾತಿ-ದ್ವೀಪ'ಗಳಾಗಿರುವ ದುರಂತವು ನಮ್ಮ ಮುಂದೆ ಇದೆ. ಇದು ನಮ್ಮ ಸಮಾಜದಲ್ಲಿ ಅಸಮಾನತೆಯ ಮೇಲು-ಕೀಳು ಎಂಬ ಜಾತಿ ವ್ಯವಸ್ಥೆಯು ಎಷ್ಟು ಆಳವಾಗಿ ಬೇರು ಬಿಟ್ಟಿದೆ ಎಂಬುದರ ದ್ಯೋತಕವಾಗಿದೆ.

ವೈಜ್ಞಾನಿಕವಾದ ಒಳಮೀಸಲಾತಿ ನೀತಿಯನ್ನು ರೂಪಿಸುವುದು ಒಂದು ತುರ್ತು ಆಗತ್ಯವಾದರೂ, ಸರಕಾರ ಸಮಸ್ಯೆಯ ಸಂಕೀರ್ಣತೆಯನ್ನು ಇನ್ನಷ್ಟು ಅರಿತು ಸೂಕ್ತ ಕಾರ್ಯತಂತ್ರ ರೂಪಿಸಿ ಸರಿಯಾದ ಮಾಹಿತಿಗಳನ್ನು ಪಡೆದುಕೊಳ್ಳುವುದು ಅಗತ್ಯ. ಜೊತೆಗೆ ನಿರ್ದಿಷ್ಟ ಜಾತಿಗಳ ಹೆಸರಲ್ಲದೇ, ಈ ಹಿಂದೆ 'ಆದಿ ದ್ರಾವಿಡ', 'ಆದಿ ಕರ್ನಾಟಕ' ಎಂಬಂತಹ ವಿಶಾಲ ವಿಭಾಗಗಳಾಗಿ ವರ್ಗೀಕರಣ ಮಾಡಿರುವಾಗ ಆದ ತಪ್ಪುಗಳು ಈಗ ಹಲವು ಗೊಂದಲಗಳಿಗೂ ಕಾರಣವಾಗಿದೆ. ಇದಲ್ಲದೇ ಬೇಡ ಜಂಗಮ ಮುಂತಾದ ಹೆಸರುಗಳೂ ಗೊಂದಲಕರವಾಗಿ ಬಳಕೆಯಾಗಿವೆ. ವರ್ಗೀಕರಣ-ಹೆಸರುಗಳ ಗೊಂದಲಗಳ ನಡುವೆ ಸಾಮಾಜಿಕವಾಗಿ ಮುಂದುವರಿದಿರುವವರು, ಶೋಷಿತ ಜಾತಿಗಳ ಅವಕಾಶಗಳನ್ನು ಕಿತ್ತುಕೊಳ್ಳುವಂತಾಗಬಾರದು. ಈ ಗೊಂದಲ-ಗೋಜಲುಗಳನ್ನು ವಸ್ತುನಿಷ್ಠತೆಯ ಆಧಾರದಲ್ಲಿ ನಿವಾರಿಸಬೇಕಿದೆ.

ಒಡಕು ಬರಬಾರದು ವಂಚನೆ ಅರಿಯಬೇಕು

ಇದಲ್ಲದೇ, ಸಾಮಾಜಿಕ ನ್ಯಾಯದ ಮೇಲೆ ಜಾಗತೀಕರಣ-ಖಾಸಗೀಕರಣಗಳ ಬರ್ಬರ ದಾಳಿಯು ನಡೆಯುತ್ತಿರುವ ಈ ದುರ್ಬರ ಕಾಲದಲ್ಲಿ, ಶಿಕ್ಷಣ-ಉದ್ಯೋಗಾವಕಾಶಗಳ ಹೆಚ್ಚಳಕ್ಕಾಗಿ, ದಲಿತ ಸಬಲೀಕರಣಕ್ಕಾಗಿ ಒಗ್ಗಟ್ಟಾಗಿ ಹೋರಾಡ ಬೇಕಾದ ಪರಿಶಿಷ್ಟ ಜಾತಿಯ ಜನಸಮುದಾಯವನ್ನು 'ಎಡ-ಬಲ' ಎಂದು ವಿಭಜಿಸಲು ಸಂಕುಚಿತ ಜಾತಿವಾದಿ ಶಕ್ತಿಗಳು ಪ್ರಯತ್ನಿಸುತ್ತಿವೆ. ಸಂಘ ಪರಿವಾರದ ಶಕ್ತಿಗಳು ಪರದೆಯ ಹಿಂದೆ ನಿಂತು, ತುಳಿತಕ್ಕೊಳಗಾದ ದಲಿತ ಸಮುದಾಯದ ಐಕ್ಯತೆ ಒಡೆಯಲು ಪ್ರಯತ್ನಿಸುವುದು ಸಹ ಈಗ ಬಹಿರಂಗ ರಹಸ್ಯ.

ಎಡ(ಮಾದಿಗ)-ಬಲ(ಹೊಲೆಯ) ಎಂದು ಗುರುತಿಸಲಾಗುವ ಜಾತಿಗಳಿಗೆ ಆ ಸಮುದಾಯದ ಅನುಗುಣವಾಗಿ ಮೀಸಲಾತಿ ನಿಗದಿಯಾಗಬೇಕು. ಒಂದೇ ಸಮುದಾಯವೇ ಇರುವ ಅವಕಾಶಗಳಲ್ಲಿ ಹೆಚ್ಚಿನದನ್ನು ಪಡೆದುಕೊಳ್ಳುವಂತಾಗಬಾರದು ಎಂಬ ಪ್ರಶ್ನೆ ಒಂದು ಕಡೆ ಇದೆ. ಇದಲ್ಲದೇ ಪರಿಶಿಷ್ಟ ಜಾತಿಗಳಲ್ಲೆ, ಸುಮಾರು ನೂರರಷ್ಟು ಸಮಾಜದ ಅಂಚಿಗೆ ನೂಕಲ್ಪಟ್ಟ ಅವಕಾಶವಂಚಿತ ಜಾತಿಗಳಿದ್ದು, ಅವರಿಗೂ ಪ್ರಗತಿಯ ಅವಕಾಶಗಳು ದೊರೆಯಬೇಕು ಎಂಬ ಪ್ರಶ್ನೆಯೂ ಇದೆ.

ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ವೈಜ್ಞಾನಿಕ ಸಮೀಕ್ಷೆಯ ಆಧಾರದಲ್ಲಿ ಒಳ ಮೀಸಲಾತಿಯನ್ನು ಸರಕಾರ ಶೀಘ್ರ ಜಾರಿಗೊಳಿಸಬೇಕಿದೆ. ಉದ್ದೇಶಿತ ಗುರಿ ತಲುಪಲು ಸಮೀಕ್ಷಾ ಕಾರ್ಯದಲ್ಲಿ ಎದುರಾಗುವ ಸಂಕೀರ್ಣ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳಬೇಕು. ಬಿ.ಬಿ.ಎಂ.ಪಿ ಸೆಂಟರ್‌ಗಳಲ್ಲಿ ಟೋಲ್ ಫ್ರೀ ಮೂಲಕ ಹಾಗೂ ಆನ್ ಲೈನ್ ಮೂಲಕ ಸಹ ಮಾಹಿತಿ ನೀಡಲು ಇರುವ ಅವಕಾಶವನ್ನೂ ಬಳಸಬೇಕು. ವಾಸ್ತವತೆಗಳನ್ನು ಗಮನದಲ್ಲಿರಿಸಿ ಇನ್ನಷ್ಟು ಇಂತಹ ಕೆಲವು ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳಬೇಕು. ಸಮೀಕ್ಷಾ ಕಾರ್ಯದಲ್ಲಿ ನಾಗರೀಕರ ಸಹಕಾರ ಮತ್ತು ಸಮೀಕ್ಷೆಯ ಕಾರ್ಯಕರ್ತರ ಬದ್ಧತೆ ಸಹ ಅಷ್ಟೇ ಮುಖ್ಯವಾಗುತ್ತದೆ. ಈ ದತ್ತಾಂಶದ ಸಂಗ್ರಹದ ಮಹತ್ವವನ್ನು ಅರಿತು ಜನಸಂಘಟನೆಗಳು ಸಹ ಇದರ ಯಶಸ್ವಿಗೆ ಕೈ ಜೋಡಿಸಬೇಕು. ಅದೇ ಸಮಯದಲ್ಲಿ ಒಳ ಮೀಸಲಾತಿ ನೆಪದಲ್ಲಿ ಕೆಲವು ಸ್ಥಾಪಿತ ಹಿತಾಸಕ್ತಿಗಳು ಜನತೆಯಲ್ಲಿ ಒಡಕು ಬರದಂತೆ ಜನಚಳುವಳಿಗಳು ನೋಡಿಕೊಳ್ಳಬೇಕು.

ವಿಭಜನೆ ಸಲ್ಲದು

ದೇಶದಲ್ಲಿ ಅತಿ ಹೆಚ್ಚಿನ ಉದ್ಯೋಗಗಳನ್ನುನೀಡುತ್ತಿದ್ದ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳು ಮತ್ತು ಸರಕಾರಿ ಆಡಳಿತ ವ್ಯವಸ್ಥೆಯಲ್ಲಿ ಖಾಸಗೀಕರಣ, ಗುತ್ತಿಗೆ ಆಧಾರದ ಕೆಲಸಗಳ ವ್ಯವಸ್ಥೆಯಿಂದ ಇರುವ ಉದ್ಯೋಗಗಳು ನಾಶವಾಗಿ ಖಾಸಗಿ ಕ್ಷೇತ್ರದ ಮೇಲೆ ಬಹುದೊಡ್ಡ ರೀತಿಯಲ್ಲಿ ಅವಲಂಬಿತವಾಗಿರುವಾಗ ಮೀಸಲಾತಿಯ ಕನಿಷ್ಠ ಪ್ರಯೋಜನವನ್ನು ಪಡೆಯದೆ ಬಹುದೊಡ್ಡ ವಂಚನೆಯ ಸ್ಥಿತಿಯನ್ನು ಎದುರಿಸುತ್ತಿರುವವರು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನತೆ. ಹಾಗೆ ಇದರ ಪರಿಣಾಮ ಎಲ್ಲ ವಿಭಾಗಗಳ ಜನತೆಯ ಮೇಲೂ ಆಗಿದೆ. ಹೀಗೆ ಶಿಕ್ಷಣದ ಖಾಸಗಿಕರಣ-ಉದ್ಯೋಗಗಳ ಹರಣ ಖಾಸಗಿ ಕ್ಷೇತ್ರಗಳ ಬೆಳವಣಿಗೆ ಯಿಂದಾಗಿ ಮೀಸಲಾತಿ ಸೌಲಭ್ಯ ನಿಜಕ್ಕೂ ಯಾರಿಗೂ ಪ್ರಯೋಜನವನ್ನು ತರುತ್ತಿಲ್ಲ. ಅಂದರೆ, ನಿಜ ಅರ್ಥದಲ್ಲಿ ಮೀಸಲಾತಿಗಾಗಿ ನಡೆಯುತ್ತಿರುವ ಹಲವು ಚರ್ಚೆಗಳು ಸಂವಾದ ಮತ್ತು ಸಂಘರ್ಷಗಳು ಇಲ್ಲದ ಉದ್ಯೋಗ, ಶಿಕ್ಷಣದ ಅವಕಾಶಗಳಿಗಾಗಿ ನಡೆಯುತ್ತಿರುವ ಕಿತ್ತಾಟವಾಗಿದೆ. ಆದ್ದರಿಂದ, ಖಾಸಗಿ ಕ್ಷೇತ್ರದಲ್ಲಿಯೂ ಮೀಸಲಾತಿ ನೀತಿಯನ್ನು ಜಾರಿಗೆ ತರಬೇಕು ಎನ್ನುವುದನ್ನು, ಸಾರ್ವಜನಿಕ ವಲಯವನ್ನು ಬಲಪಡಿಸಬೇಕು ಎಂದು ಪ್ರಬಲವಾಗಿ ಅಗ್ರಹಿಸಬೇಕಾಗಿದೆ. ಆದರೆ ಇಂತಹ ವಾಸ್ತವಗಳನ್ನು ಮರೆಮಾಚಿ ಕೇವಲ ಜಾತಿಯ ಅಸ್ಮಿತೆಯನ್ನು ಉದ್ದೀಪನ ಗೊಳಿಸಿ, ಜನತೆಯನ್ನು ಜಾತಿ-ಉಪಜಾತಿಗಳ ನೆಲೆಗಳಲ್ಲಿ ಸಂಘಟಿಸುವುದರ ಮೂಲಕ ಶೋಷಿತ ಜನರ ವಿಭಜನೆಯನ್ನು ಗಟ್ಟಿಗೊಳಿಸುವ ಕೆಲಸವು ಮತ್ತೊಂದು ಕಡೆಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ನಡೆಸುತ್ತಿದ್ದಾರೆ. ಇಂತಹ ಪ್ರಕ್ರಿಯೆಯನ್ನು ಬಲಗೊಳಿಸುವಂತೆ ಬಿಜೆಪಿ, ಕಾಂಗ್ರೆಸ್, ಜನತಾದಳ ಎಸ್ ನಂತಹ ಪಕ್ಷಗಳು ತೀವ್ರಗೊಳಿಸುತ್ತಿವೆ ಮತ್ತು ಈ ಮೂಲಕವಾಗಿಯೇ ಯಥಾಸ್ಥಿತಿಯಲ್ಲಿಯೇ ಜನತೆ ಮತ್ತಷ್ಟು ನರಳುವಂತೆ ಮಾಡುತ್ತಿವೆ. ಆದರೆ ಅದು ಜಾತಿ ಅಸ್ಮಿತೆಯ ಮಂಕು ಬೂದಿಯಲ್ಲಿ ಅನ್ಯಾಯ, ವಂಚನೆ ಮನಗಾಣದಂತೆ ಮಾಡುತ್ತಿವೆ. ಈ ಒಳ ಮೀಸಲಾತಿಯ ಪ್ರಶ್ನೆಯನ್ನು ಬಳಸಿ ಈ ಶೋಷಿತ ಸಮುದಾಯವನ್ನು ಒಡೆಯದಂತೆ ನೋಡಿಕೊಳ್ಳುವುದು ಬಹಳ ಮುಖ್ಯವಿದೆ. ಆದ್ದರಿಂದ ಮೀಸಲಾತಿ ನೀತಿಯು ಅರ್ಥಪೂರ್ಣವಾಗಲು ಶಿಕ್ಷಣ-ಉದ್ಯೋಗದ ಅವಕಾಶಗಳನ್ನು ವ್ಯಾಪಕವಾಗಿ ಹೆಚ್ಚಿಸುವಂತೆ ಹೋರಾಟ ರೂಪಿಸುವುದು, ಐತಿಹಾಸಿಕವಾಗಿ ತುಳಿತಕ್ಕೊಳಗಾದ ಒಟ್ಟು ದಲಿತ ಸಮುದಾಯದ ಐಕ್ಯತೆಯನ್ನು ಕಾಪಾಡಿಕೊಳ್ಳುವುದು, ಸಾಮಾಜಿಕ ನ್ಯಾಯ, ದಲಿತ ಸಬಲೀಕರಣದ ಹೋರಾಟದಲ್ಲಿ ದಲಿತೇತರ ಸಮುದಾಯಗಳನ್ನೂ ಒಳಗೊಂಡು ವಿಶಾಲ ಐಕ್ಯತೆ ಬೆಸೆಯುವುದು ಪ್ರಜಾಸತ್ತಾತ್ಮಕ ಜನ ಚಳುವಳಿಗಳ ಅದ್ಯತೆಯಾಗಬೇಕಿದೆ.







ಜಮ್ಮು ಮತ್ತು ಕಾಶ್ಮೀರಕ್ಕೆ ಸಿಪಿಐ(ಎಂ) ನಿಯೋಗದ ಭೇಟಿ
ಸಾಂವಿಧಾನಿಕ ಹಕ್ಕುಗಳ ಮರುಸ್ಥಾಪನೆಗೆ ಮತ್ತೊಮ್ಮೆ ಆಗ್ರಹ

ಸಿಪಿಐ(ಎಂ) ನಾಯಕರ ಒಂದು ನಿಯೋಗವು ಜೂನ್ 10–11, 2025ರಂದು ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿತು. ಪಹಲ್ಗಾಮ್‌ನ ಭೀಕರ ಭಯೋತ್ಪಾದಕ ದಾಳಿಯ ಹಿನ್ನೆಲೆಯಲ್ಲಿ ಈ ಭೇಟಿಯನ್ನು ಕೈಗೊಳ್ಳಲಾಗಿತ್ತು.

ನಿಯೋಗದ ನೇತೃತ್ವವನ್ನು ಪಕ್ಷದ ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ವಹಿಸಿದ್ದರು. ನಿಯೋಗದ ಇತರ ಸದಸ್ಯರು: ಅಮ್ರಾ ರಾಮ್, ಪೊಲಿಟ್ ಬ್ಯೂರೋ ಸದಸ್ಯರು, ಸಂಸದ (ಲೋಕಸಭೆ); ಕೆ. ರಾಧಾಕೃಷ್ಣನ್, ಕೇಂದ್ರ ಸಮಿತಿ ಸದಸ್ಯ, ಸಂಸದ (ಲೋಕಸಭೆ); ಜಾನ್ ಬ್ರಿಟ್ಟಾಸ್, ಕೇಂದ್ರ ಸಮಿತಿಯ ಆಹ್ವಾನಿತರು, ಸಂಸದ (ರಾಜ್ಯಸಭೆ); ಬಿಕಾಶ್ ರಂಜನ್ ಭಟ್ಟಾಚಾರ್ಯ, ಸಂಸದ (ರಾಜ್ಯಸಭೆ); ಸು. ವೆಂಕಟೇಶನ್, ಸಂಸದ (ಲೋಕಸಭೆ) ಮತ್ತು ಎ.ಎ. ರಹೀಮ್, ಸಂಸದ (ರಾಜ್ಯಸಭೆ).

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯ ಸದಸ್ಯ ಮತ್ತು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಮೊಹಮ್ಮದ್ ಯೂಸುಫ್ ತಾರಿಗಾಮಿ ಕೂಡ ನಿಯೋಗದ ಜೊತೆಗಿದ್ದರು.

ಇತ್ತೀಚೆಗೆ ಉರಿಯಲ್ಲಿ ಗಡಿಯಾಚೆಗಿನ ಶೆಲ್ ದಾಳಿಯಿಂದ ಹಾನಿಗೊಳಗಾದವರ ಕುಟುಂಬಗಳನ್ನು ನಿಯೋಗ ಭೇಟಿ ಮಾಡಿ, ಗಡಿ ಪ್ರದೇಶಗಳಲ್ಲಿ ಜನರ ಸಂಕಷ್ಟಗಳ ಮೌಲ್ಯಮಾಪನ ಮಾಡಿತು.

ನಿಯೋಗ ಭಯೋತ್ಪಾದಕ ದಾಳಿಗೆ ಗುರಿಯಾಗಿದ್ದ ಪ್ರವಾಸಿಗರನ್ನು ರಕ್ಷಿಸುವಲ್ಲಿ ಸ್ವತಃ ಪ್ರಾಣಾರ್ಪಣೆ ಮಾಡಿದ ಕಾಶ್ಮೀರದ ನಿವಾಸಿ ಆದಿಲ್ ಶಾಹ್‌ರವರ ದುಃಖತಪ್ತ ಕುಟುಂಬವನ್ನೂ ಭೇಟಿ ಮಾಡಿತು.

ಸಾಂವಿಧಾನಿಕ ಹಕ್ಕುಗಳನ್ನು ಪುನಃಸ್ಥಾಪಿಸಲು ಸಮಾವೇಶ ಕರೆ

ಜೂನ್ 11 ರಂದು ಸಿಪಿಐ(ಎಂ)ನ ಜಮ್ಮು ಮತ್ತು ಕಾಶ್ಮೀರ ಸಮಿತಿಯು ರಾಜಧಾನಿ ಶ್ರೀನಗರದ ಟ್ಯಾಗೋರ್ ಸಭಾಂಗಣದಲ್ಲಿ ಒಂದು ದಿನದ ಸಮಾವೇಶವನ್ನು ಆಯೋಜಿಸಿತ್ತು. ಜಮ್ಮು ಮತ್ತು ಕಾಶ್ಮೀರದ ಜನರ ಕಾನೂನುಬದ್ಧ ಸಾಂವಿಧಾನಿಕ ಹಕ್ಕುಗಳನ್ನು ಪುನಃಸ್ಥಾಪಿಸಲು ಈ ಸಮಾವೇಶ ಕರೆ ನೀಡಿದೆ.

ಸಮಾವೇಶವನ್ನು ಉದ್ದೇಶಿಸಿ ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ; ಸಂಸತ್ ಸದಸ್ಯ ಮತ್ತು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡ ಆಮ್ರಾ ರಾಮ್; ಸಂಸತ್ ಸದಸ್ಯ ಬಿಕಾಶ್ ರಂಜನ್ ಭಟ್ಟಾಚಾರ್ಯ; ಮತ್ತು ಶಾಸಕ ಮತ್ತು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಎಂ.ವೈ. ತಾರಿಗಾಮಿ ಮಾತನಾಡಿದರು. ಈ ಸಮಾವೇಶದ ಅಧ್ಯಕ್ಷತೆಯನ್ನು ಹಿರಿಯ ಸಿಪಿಐ(ಎಂ) ನಾಯಕ ಗುಲಾಮ್ ನಬಿ ಮಲಿಕ್ ವಹಿಸಿದ್ದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಎಂ.ಎ. ಬೇಬಿಯವರು, ಏಪ್ರಿಲ್ 22, 2025 ರಂದು ಪಹಲ್ಗಾಮ್‌ನಲ್ಲಿ ನಿರಾಯುಧ ಪ್ರವಾಸಿಗರ ಭೀಕರ ಹತ್ಯೆಯ ವಿರುದ್ಧ ನಡೆದ ಸ್ವಯಂಪ್ರೇರಿತ ಪ್ರತಿಭಟನೆಗಳಿಗಾಗಿ ಕಾಶ್ಮೀರದ ಜನರನ್ನು ಶ್ಲಾಘಿಸಿದರು. ಅಸಾಮರಸ್ಯವನ್ನು ಬಿತ್ತಲು ಪ್ರಯತ್ನಿಸುವ ಶಕ್ತಿಗಳನ್ನು ವಿರೋಧಿಸಲು ಜನರಲ್ಲಿ ಒಗ್ಗಟ್ಟಿನ ಅಗತ್ಯವನ್ನು ಅವರು ಒತ್ತಿ ಹೇಳಿದರು. ಸಿಪಿಐ(ಎಂ)ನ ನಿಲುವನ್ನು ಪುನರುಚ್ಚರಿಸುತ್ತಾ, ಈ ಪ್ರದೇಶದಲ್ಲಿ ವಿಶ್ವಾಸವನ್ನು ಮತ್ತೆ ಮೂಡಿಸಲು ಮತ್ತು ಶಾಶ್ವತ ಶಾಂತಿಯನ್ನು ಸಾಧಿಸಲು 370ನೇ ವಿಧಿ, ರಾಜ್ಯದ ಸ್ಥಾನಮಾನ ಮತ್ತು ಇತರ ಸಾಂವಿಧಾನಿಕ ಹಕ್ಕುಗಳ ಪುನಃಸ್ಥಾಪನೆ ಅತ್ಯಗತ್ಯ ಎಂದು ಅವರು ಹೇಳಿದರು.

“ಪಹಲ್ಗಾಮ್ ಘಟನೆಯ ನಂತರ, ಜಮ್ಮು ಮತ್ತು ಕಾಶ್ಮೀರದಲ್ಲಿನ ಪ್ರಸ್ತುತ ಭದ್ರತಾ ಪರಿಸ್ಥಿತಿ ಮತ್ತು ಎರಡೂ ದೇಶಗಳ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯನ್ನು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯಬೇಕೆಂದು ನಾವು ಒತ್ತಾಯಿಸಿದ್ದೇವೆ. ಆದಾಗ್ಯೂ, ಸರ್ಕಾರ ಪ್ರತಿಪಕ್ಷಗಳನ್ನು ಎದುರಿಸಲು ಹಿಂಜರಿಯುತ್ತಿರುವಂತೆ ತೋರುತ್ತಿದೆ” ಎಂದು ಅವರು ಹೇಳಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಆಗಸ್ಟ್ 5, 2019ರಂದು ಜನರು ಅಥವಾ ಪಾಲುದಾರರೊಂದಿಗೆ ಸಮಾಲೋಚಿಸದೆ ಕೇಂದ್ರ ಸರಕಾರ ತನ್ನ ಮನಬಂದಂತೆ ರದ್ದುಪಡಿಸಿದ ಪ್ರಜಾಪ್ರಭುತ್ವ ಹಕ್ಕುಗಳ ಪುನಃಸ್ಥಾಪನೆಗಾಗಿ ಸಿಪಿಐ(ಎಂ) ನಿರಂತರವಾಗಿ ಪ್ರತಿಪಾದಿಸುತ್ತಿದೆ ಎಂದು ಅಮ್ರಾ ರಾಮ್ ಹೇಳಿದರು. ಪಹಲ್ಗಾಮ್ ಘಟನೆಯ ನಂತರದ ಘಟನೆಯನ್ನು ಉಲ್ಲೇಖಿಸಿ, ಗಡಿಗಳಲ್ಲಿ ಹಿಂಸಾಚಾರ ತೀವ್ರಗೊಂಡಿದೆ, ಇದು ಪೂಂಚ್, ರಾಜೌರಿ, ಉರಿ, ಕೇರನ್ ಮತ್ತು ತಂಗ್ಧರ್‌ನಲ್ಲಿ ವಸತಿ ಪ್ರದೇಶಗಳನ್ನು ಧ್ವಂಸಗೊಳಿಸಿದೆ, ಇದರ ಪರಿಣಾಮವಾಗಿ ಮುಗ್ಧ ಜೀವಗಳು, ಜಾನುವಾರುಗಳು ಮತ್ತು ಆಸ್ತಿ ನಷ್ಟವಾಗಿದೆ “ಪ್ರತಿ ಮನೆಗೆ ಕೇವಲ 1.30 ಲಕ್ಷ ರೂ. ಪರಿಹಾರವು ಸಂಪೂರ್ಣವಾಗಿ ಅಸಮರ್ಪಕವಾಗಿದೆ ಮತ್ತು ಕಣ್ಕಟ್ಟಿನದಾಗಿದೆ, ಇದನ್ನು ಗಣನೀಯವಾಗಿ ಹೆಚ್ಚಿಸಬೇಕು” ಎಂದು ಅವರು ಒತ್ತಾಯಿಸಿದರು.


“ಭಾರತದ ಸಾಂವಿಧಾನಿಕ ಇತಿಹಾಸದಲ್ಲಿ ಮೊದಲ ಬಾರಿಗೆ, ಒಂದು ರಾಜ್ಯವನ್ನು ವಿಭಜಿಸಿ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ಕೆಳದರ್ಜೆಗೆ ಇಳಿಸಲಾಯಿತು (ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್). ಇದು ಸಂವಿಧಾನದ ಪ್ರಜಾಪ್ರಭುತ್ವ ನೀತಿ ಮತ್ತು ಮನೋಭಾವಕ್ಕೆ ವಿರುದ್ಧವಾದ ಕೃತ್ಯವಾಗಿದೆ” ಎಂದು ಅವರು ಹೇಳಿದರು.

ಬಿಕಾಶ್ ರಂಜನ್ ಭಟ್ಟಾಚಾರ್ಯ ಅವರು ಮಾತನಾಡಿ, 1947ರ ವಿಭಜನೆಯ ರಕ್ತಪಾತದ ಸಮಯದಲ್ಲಿ, ಉಪಖಂಡದ ಬಹುಪಾಲು ಕೋಮು ಹಿಂಸಾಚಾರದಲ್ಲಿ ಮುಳುಗಿದ್ದಾಗ, ಕಶ್ಮೀರಿಯತ್ ಐತಿಹಾಸಿಕವಾಗಿ ಕಷ್ಟ–ನಷ್ಟಗಳನ್ನು ಎದುರಿಸಿದೆ ಎಂದು ಹೇಳಿದರು. "ಈ ಐಕ್ಯತೆಯ ಚೇತನವನ್ನು ಜಮ್ಮು ಮತ್ತು ಕಾಶ್ಮೀರದ ಜನರ ವಿಶಾಲ ಹಿತಾಸಕ್ತಿಯಲ್ಲಿ ಸಂರಕ್ಷಿಸಬೇಕು ಮತ್ತು ಬಲಪಡಿಸಬೇಕು" ಎಂದು ಅವರು ಹೇಳಿದರು, ಸಿಪಿಐ(ಎಂ) ಸಂಸತ್ತಿನಲ್ಲಿ ಈ ಪ್ರದೇಶದ ಜನರಿಗೆ ಸಾಂವಿಧಾನಿಕ ಹಕ್ಕುಗಳ ಪುನಃಸ್ಥಾಪನೆಗಾಗಿ ಬಲವಾಗಿ ಪ್ರತಿಪಾದಿಸುವುದನ್ನು ಮುಂದುವರಿಸುತ್ತದೆ ಎಂದು ಭರವಸೆ ನೀಡಿದರು.

ಆಗಸ್ಟ್ 5, 2019ರ ನಂತರದ ಕಠಿಣ ಅವಧಿಯಲ್ಲಿ, ಸಿಪಿಐ(ಎಂ) ರಾಷ್ಟ್ರೀಯ ಮಟ್ಟದಲ್ಲಿ, 370ನೇ ವಿಧಿಯ ಅಸಂವಿಧಾನಿಕ ರದ್ದತಿ ಮತ್ತು ಜಮ್ಮು ಮತ್ತು ಕಾಶ್ಮೀರವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ಕೆಳಮಟ್ಟಕ್ಕೆ ಇಳಿಸುವುದನ್ನು ತೀವ್ರವಾಗಿ ವಿರೋಧಿಸಿತ್ತು ಎಂದು ಎಂ.ವೈ. ತಾರಿಗಾಮಿ ನೆನಪಿಸಿದರು.

ಈ ಕ್ರಮವು ಭಾರತ ಒಕ್ಕೂಟದೊಂದಿಗಿನ ಈ ಪ್ರದೇಶದ ಸಾಂವಿಧಾನಿಕ ಸಂಬಂಧದ ಮೇಲೆ ಏಕಪಕ್ಷೀಯ ಮತ್ತು ನೇರ ದಾಳಿ ಎಂದು ಅವರು ಬಣ್ಣಿಸಿದರು. "ಭಾರತದಲ್ಲಿ ಕರ್ಫ್ಯೂ ಅಡಿಯಲ್ಲಿ ಮಾಧ್ಯಮಗಳ ಮೇಲೆ ನಿರ್ಬಂಧಗಳು ಮತ್ತು ರಾಜಕೀಯ ನಾಯಕರು ಮತ್ತು ಕಾರ್ಯಕರ್ತರ ಬಂಧನಗಳ ಅಡಿಯಲ್ಲಿ ರಾಜ್ಯದ ಗಡಿಗಳನ್ನು ಪುನರ್ರಚಿಸಿದ ಏಕೈಕ ಉದಾಹರಣೆ ಇದಾಗಿದೆ" ಎಂದು ಅವರು ಹೇಳಿದರು.

370ನೇ ವಿಧಿಯ ರದ್ಧತಿಯಿಂದ ಉದ್ಯೋಗಗಳ ಮಹಾಪೂರವೇ ಹರಿದು ಬರುತ್ತದೆ ಎಂಬ ಸರ್ಕಾರದ ದಾವೆಯನ್ನು ಪುಟ 14 ಕ್ಕೆ





ಕೇಂದ್ರ ಸರ್ಕಾರದ ಕೆಟ್ಟ ಆಮದು ನೀತಿಗಳಿಂದಾಗಿ ಭಾರತದ ರೈತರು ಸಂಕಷ್ಟಕ್ಕೆ

ಎಚ್.ಆರ್. ನವೀನ್‌ಕುಮಾರ್, ಹಾಸನ



ಭಾರತದ ಕೃಷಿಯು 2014 ರ ನಂತರ ಅತ್ಯಂತ ಗಂಭೀರವಾದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಬಿಜೆಪಿ ನೇತೃತ್ವದ ಕಳೆದ 11 ವರ್ಷಗಳಲ್ಲಿ ಸುಮಾರು 1.48 ಲಕ್ಷ ರೈತರು ಆತ್ಮಹತ್ಯೆಯ ಹಾದಿ ಹಿಡಿದಿದ್ದಾರೆ. ಇದಕ್ಕೆ ಕಾರಣಗಳನ್ನು ಹುಡುಕುತ್ತಾ ಹೋದರೆ ದೇಶದ ಶೇಖಡ 86 ರಷ್ಟು ರೈತರು ಸಾಲ ಬಾದೆಯಲ್ಲಿ ನರಳುತ್ತಿರುವುದು ಪತ್ತೆಯಾಯಿತು. ಇಂತಹ ಸಂಕಷ್ಟಮಯ ಪರಿಸ್ಥಿತಿಗೆ ನರೇಂದ್ರ ಮೋದಿ ಸರ್ಕಾರ ಅನುಸರಿಸುತ್ತಿರುವ ಅತ್ಯಂತ ಅಪಾಯಕಾರಿ ರೈತವಿರೋಧಿ ಕೃಷಿ ನೀತಿ ಮತ್ತು ಆಮದು ನೀತಿಗಳೇ ಕಾರಣ ಎಂದು ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರ ಕಾರ್ಯದರ್ಶಿಗಳಾದ ಕಾಮ್ರೇಡ್ ಡಿ. ರಂವೀಂದ್ರನ್‌ರವರು ಆರೋಪಿಸಿದರು. ಕರ್ನಾಟಕ ಪ್ರಾಂತ ರೈತ ಸಂಘ 14 ಜೂನ್ 2025 ರಂದು ಮಂಡ್ಯದ ಕರ್ನಾಟಕ ಸಂಘದ ಸಭಾಂಗಣದಲ್ಲಿ ಏರ್ಪಡಿಸಿದ್ದ "ಸಾಮ್ರಾಜ್ಯಶಾಹಿಗಳ ಸುಂಕ ಕಡಿತ ಮತ್ತು ಕರ್ನಾಟಕ ರಾಜ್ಯದ ರೈತರ ಮೇಲಿನ ದುಷ್ಪರಿಣಾಮಗಳ ಕುರಿತ" ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಇಂದಿಗೂ ಭಾರತದ ಶೇಕಡ 55 ರಷ್ಟು ಜನಸಂಖ್ಯೆ ಕೃಷಿಯ ಮೇಲೆ ಅವಲಂಬಿತವಾಗಿದೆ. ಗ್ರಾಮೀಣ ಪ್ರದೇಶದ ರೈತರ ಕೃಷಿ ಉತ್ಪನ್ನಗಳಿಂದಲೇ ದೇಶದ ಆಹಾರ ಸ್ವಾವಲಂಬನೆ ಸಾಧ್ಯವಾಗಿರುವುದು. 140 ಮಿಲಿಯನ್ ಎಕ್ಟೇರ್ ರಾಷ್ಟ್ರೀಯ ಸಂಪತ್ತಿನಲ್ಲಿ 112 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡಲಾಗುತ್ತಿದೆ. 2023 ರಲ್ಲಿ ಭಾರತದ ಒಟ್ಟು ಆಹಾರ ಉತ್ಪಾದನೆ 3000 ಮೆಟ್ರಿಕ್ ಟನ್, ಇಷ್ಟು ದೊಡ್ಡ ಪ್ರಮಾಣದಲ್ಲಿ ನಮ್ಮ ದೇಶದಲ್ಲೇ ಆಹಾರ ಉತ್ಪಾದನೆಯಾಗುತ್ತಿದ್ದರೂ, ಭಾರತ ವಿದೇಶಗಳಿಂದ ನಾವು ಬೆಳೆಯುವ ಕೃಷಿ ಉತ್ಪನ್ನಗಳನ್ನೇ ಆಮದು ಮಾಡಿಕೊಳ್ಳುತ್ತಿದೆ. ಇದರ ಲಾಭ ಮತ್ತು ನಷ್ಟ ಯಾರಿಗೆ ಆಗುತ್ತದೆ ಎಂಬುದರ ಕುರಿತು ನಾವುಗಳು ಗಂಭೀರವಾಗಿ ಆಲೋಚಿಸಬೇಕಿದೆ.

ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಕೆಟ್ಟ ಆಮದು ನೀತಿಯಿಂದಾಗಿ ಭಾರತದ ಖಾದ್ಯ ತೈಲ ಮತ್ತು ಎಣ್ಣೆ ಬೀಜಗಳ ಮೇಲೆ ಅತ್ಯಂತ ದುಷ್ಪರಿಣಾಮವನ್ನು ಬೀರಿದೆ. ಈಗಲೂ ಭಾರತಕ್ಕೆ ಶೇಕಡ 60 ರಷ್ಟು ಖಾದ್ಯ ತೈಲವನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಒಂದು ಸರ್ವೆಯ ಪ್ರಕಾರ ಭಾರತಕ್ಕೆ 2017 ರಿಂದ 2021 ರ ವರೆಗೆ 5 ವರ್ಷಗಳಿಗೆ 1254 ಮೆಟ್ರಿಕ್ ಟನ್‌ನಷ್ಟು ಖಾದ್ಯತೈಲದ ಅಗತ್ಯವಿತ್ತು. ದೇಶದಲ್ಲಿಯೇ ವರ್ಷಕ್ಕೆ 542 ಮೆಟ್ರಿಟ್ ಟನ್ ಎಣ್ಣೆ ಕಾಳುಗಳ ಉತ್ಪಾದನೆಯಾಗುತ್ತದೆ. ಆದರೆ 2023 ರ ಸಂಸತ್ ಅಧಿವೇಶನದಲ್ಲಿ ಕೇಂದ್ರ ಸಚಿವರೇ ಘೋಷಿಸಿರುವ ಪ್ರಕಾರ 712 ಮೆಟ್ರಿಕ್ ಟನ್ ಖಾದ್ಯ ತೈಲವನ್ನು ಭಾರತ ಆಮದು ಮಾಡಿಕೊಂಡಿದೆ. ಇದರಿಂದಾಗಿ ಸ್ಥಳೀಯ ಎಣ್ಣೆ ಕಾಳುಗಳ ಬೆಳೆಗಾರರಾದ ಶೇಂಗಾ ಬೆಳೆಯುವ, ಸೂರ್ಯಕಾಂತಿ ಬೆಳೆಯುವ, ತಾಳೆ ಬೆಳೆಯುವ ರೈತರು ಅತ್ಯಂತ ಸಂಕಷ್ಟದಲ್ಲಿದ್ದಾರೆ. ಇದಕ್ಕೆ ಮುಖ್ಯ ಕಾರಣ ಕೇಂದ್ರ ಸರ್ಕಾರದ ಆಮದು ನೀತಿ.

ಭಾರತದಲ್ಲಿ 2023-24 ರ ಸಾಲಿನಲ್ಲಿ 27 ಮಿಲಿಯನ್ ಹೆಕ್ಟೇರ್‌ನಲ್ಲಿ 25 ಲಕ್ಷ ಟನ್ ದ್ವಿದಳ ದಾನ್ಯಗಳನ್ನು ಬೆಳೆದರೂ ಕೇಂದ್ರ ಸರ್ಕಾರ ಅದೇ ವರ್ಷ ಸುಮಾರು 19 ಲಕ್ಷ ಟನ್ ದ್ವಿದಳ ದಾನ್ಯಗಳನ್ನು ಆಮದು ಮಾಡಿಕೊಂಡಿತು. ಭಾರತದಲ್ಲಿ 753 ಸಕ್ಕರೆ ಕಾರ್ಖಾನೆಗಳಲ್ಲಿ 243 ಸಾರ್ವಜನಿಕ ಉದ್ಯಮಗಳು, 490 ಕಾರ್ಖಾನೆಗಳು ಮಾತ್ರ ಕಬ್ಬನ್ನು ಅರೆಯುತ್ತಿವೆ, 280 ಕಾರ್ಖಾನೆಗಳು ಸಂಪೂರ್ಣ ಮುಚ್ಚಿವೆ. ನಮ್ಮ ದೇಶದಲ್ಲಿ ಅತಿ ಹೆಚ್ಚು ದ್ವಿದಳ ದಾನ್ಯಗಳು ಮತ್ತು ಸಕ್ಕರೆಯನ್ನು ಉತ್ಪಾದಿಸಲಾಗುತ್ತದೆ. ನರೇಂದ್ರ ಮೋದಿ ಸರ್ಕಾರದ ಕಾರ್ಪೊರೇಟ್ ಪರ ನೀತಿಗಳಿಂದಾಗಿ ದೇಶದ ರೈತರು ನಷ್ಟವನ್ನು ಅನುಭವಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಇದೇ ಸಂದರ್ಭದಲ್ಲಿ ಕರ್ನಾಟಕದಂತಹ ರಾಜ್ಯಗಳಲ್ಲಿ ಉತ್ಕೃಷ್ಟವಾದ ರೇಷ್ಮೆ ಬೆಳೆಯುತ್ತಿದ್ದರೂ ಚೈನದಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಹಾಲು ಉತ್ಪಾದನೆ ಮಾಡುತ್ತಿರುವ ರೈತರಿಗೂ ಇದೇ ರೀತಿಯ ಸಂಕಷ್ಟಗಳು ಎದುರಾಗಿವೆ. ಇತ್ತೀಚಿಗೆ ಭಾರತಕ್ಕೆ ಭೇಟಿನೀಡಿದ್ದ ಜೆ.ಡಿ. ವಾನ್ಸ್ ಜೊತೆಗೆ ಕೇಂದ್ರ ಸರ್ಕಾರ ಹಲವು ರೀತಿಯ ಒಪ್ಪಂದಗಳನ್ನು ನಡೆಸಿದೆ. ಕೇರಳದ ವೈನಾಡಿನ ಕಾಫಿ ಬೆಳೆಯುವ 6000 ಕ್ಕೂ ಹೆಚ್ಚು ಸಣ್ಣ ಕಾಫಿ ರೈತರು ಆತ್ಮಹತ್ಯೆಯ ದಾರಿ ತುಳಿದರು. ಹಿಂದೆ ರೈತರು ಬೆಳೆದ ಕಾಫಿ ಬೀಜಗಳನ್ನು ಖರೀದಿಸಲು ಕಾಫಿ ಮಂಡಳಿ ಜವಾಬ್ದಾರಿ ಯಾಗಿತ್ತು. ಆದರೆ ಈಗ ನವ ಉದಾರೀಕರಣ ಎಲ್.ಪಿ.ಜಿ ನೀತಿಗಳಿಂದಾಗಿ ಕಾಫಿ ಬೋರ್ಡ್ ರೈತರ ಕಾಫಿ ಬೀಜಗಳನ್ನು ಖರೀದಿಸುವುದನ್ನು ನಿಲ್ಲಿಸಿತು. ಈಗ ಎಲ್ಲವನ್ನು ಮುಕ್ತ ಮಾರುಕಟ್ಟೆಗೆ ತೆರೆದುಕೊಂಡು ಇದರಿಂದ ರೈತರಿಗೆ ದೊಡ್ಡ ಮಟ್ಟದದಲ್ಲಿ ನಷ್ಟ ಉಂಟಾಗಿದೆ.

ಆಹಾರ ಸಂಗ್ರಹಿಸುವ ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾ ಎಫ್‌ಸಿಐ ಗೋದಾಮುಗಳನ್ನು ಅಭಿವೃದ್ಧಿ ಪಡಿಸಿ ಅವುಗಳಿಂದ ಜನತೆಗೆ ಲಾಭವಾಗುವಂತೆ ಮಾಡಿ ಎಂದು ಬೇಡಿಕೆ ಇಟ್ಟರೆ, ಕೇಂದ್ರ ಸರ್ಕಾರ ಮೂರು ಕರಾಳ ಕೃಷಿ ಕಾನೂನುಗಳನ್ನು ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತಂದು ಈ ಗೋದಾಮುಗಳನ್ನು ಅದಾನಿ ಮತ್ತು ಅಂಬಾನಿಗೆ ವಹಿಸುವ ಹುನ್ನಾರವನ್ನು ನಡೆಸಿತು. ಇದರ ವಿರುದ್ಧ ದೆಹಲಿಯ ಗಡಿ ಭಾಗಗಳಲ್ಲಿ 13 ತಿಂಗಳುಗಳ ಕಾಲ ನಡೆದ ಐತಿಹಾಸಿಕ ರೈತ ಚಳುವಳಿಯಿಂದಾಗಿ ವಾಪಸ್ ಮಾಡಲು ಸಾಧ್ಯವಾಯಿತು. ಈರುಳ್ಳಿಯನ್ನು ಆಫ್ಘಾನಿಸ್ಥಾನದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಇದರಿಂದಾಗಿ ಸ್ಥಳೀಯವಾಗಿ ಈರುಳ್ಳಿ ಬೆಳೆದ ರೈತರು ಬೆಲೆ ಸಿಗದೆ ಈರುಳ್ಳಿಯನ್ನು ರಸ್ತೆಗೆ ಸುರಿದು ಪ್ರತಿಭಟಿಸುವಂತಾಗಿದೆ. ವಿದೇಶಗಳಲ್ಲಿ ಹೆಚ್ಚು ಸಬ್ಸಿಡಿಗಳನ್ನು ಬಳಸಿ, ಅತ್ಯಾಧುನಿಕ ಕೃಷಿ ತಂತ್ರಜ್ಞಾನದ ಮೂಲಕ ಕಡಿಮೆ ದರದಲ್ಲಿ ಅತಿ ಹೆಚ್ಚು ಉತ್ಪಾದನೆ ಮಾಡುವ ಕೃಷಿ ಉತ್ಪನ್ನಗಳು ಭಾರತಕ್ಕೆ ಸರಾಗವಾಗಿ ಬಂದರೆ ಇಲ್ಲಿಯ ರೈತರು ಇನ್ನಿಲ್ಲದ ನಷ್ಟವನ್ನು ಅನುಭವಿಸಬೇಕಾಗಿ ಬರುತ್ತದೆ. ನೂರು ರೂ ಇದ್ದ ಮಾವಿನ ಹಣ್ಣಿನ ಬೆಲೆಯು ಈಗ ಕೆಜಿಗೆ ಮೂರು ರೂಗೆ ಕುಸಿದಿದೆ. ಇಂತಹ ಸಂದರ್ಭದಲ್ಲಿ ರಾಜ್ಯ ಕೇಂದ್ರ ಸರ್ಕಾರಗಳು ಮಧ್ಯಪ್ರವೇಶ ಮಾಡಿ ರೈತರಿಗೆ ಒಂದು ಕೆಜಿ ಮಾವಿಗೆ ಕನಿಷ್ಠ 15 ರೂ ಪ್ರೋತ್ಸಾಹಧನ ನೀಡಬೇಕು ಮತ್ತು ಒಂದು ಹೆಕ್ಟೇರ್‌ಗೆ ಕನಿಷ್ಠ 50 ಸಾವಿರ ರೂ ಪರಿಹಾರ ನೀಡಬೇಕು.

ಇಂತಹ ಸಂಕಷ್ಟದಲ್ಲಿರುವ ಭಾರತದ ರೈತರುಗಳನ್ನು ಉಳಿಸಬೇಕಾದರೆ ದೇಶೀಯ ರೈತರಿಗೆ ಅನುಕೂಲವಾಗುವ ನೀತಿಗಳನ್ನು ಅನುಸರಿಸಬೇಕು. ರೈತರು ಬೆಳೆದ ಬೆಳೆಗಳನ್ನು ಶೇಖರಿಸಿಡಲು ಅಗತ್ಯವಾದ ಶೀತಾಗಾರಗಳನ್ನು ಗ್ರಾಮೀಣ ಪ್ರದೇಶಗಳಲ್ಲೂ ಸ್ಥಾಪಿಸಬೇಕು, ಸ್ಥಳೀಯ ಉತ್ಪಾದನೆಗಳನ್ನು ಪ್ರೋತ್ಸಾಹಿಸಿ, ಸರಿಯಾದ ಮಾರುಕಟ್ಟೆ ವ್ಯವಸ್ಥೆ ಮಾಡಬೇಕು, ಡಾ. ಎಂ.ಎಸ್ ಸ್ವಾಮಿನಾಥನ್ ಸಮಿತಿಯ ಶಿಫಾರಸ್ಸಿನಂತೆ ಉತ್ಪಾದನಾ ವೆಚ್ಚದ ಮೇಲೆ ಶೇಕಡ 50 ರಷ್ಟು ಲಾಭಾಂಶವನ್ನು ಸೇರಿಸಿ ಬೆಲೆ ನಿಗದಿ ಮಾಡುವ ಕಾನೂನನ್ನು ಖಾತ್ರಿಗೊಳಿಸಬೇಕು ಎಂದರು.

ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷರಾದ ಡಾ. ಪ್ರಕಾಶ್ ಕಮ್ಮರಡಿಯವರು ಮೋದಿಯ ಸ್ನೇಹಿತರಾದ ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದಿಂದ ರಫ್ತಾಗುತ್ತಿದ್ದ ಅಡಿಕೆ ಹಾಳೆಯ ತಟ್ಟೆ ಮತ್ತಿತರೆ ಉತ್ಪನ್ನಗಳನ್ನು ವಾಪಸ್ ಕಳುಹಿಸಿದ್ದಾರೆ, ಇದನ್ನು ವಾಪಸ್ ಕಳುಹಿಸುವಾಗ ಭಾರತದಿಂದ ಬಂದಿರುವ ಅಡಿಕೆ ಹಾಳೆಗಳಿಂದ ತಯಾರಾದ ತಟ್ಟೆಗಳಲ್ಲಿ ಆಹಾರವನ್ನು ಸೇವಿಸಿದರೆ ಕ್ಯಾನ್ಸರ್‌ನಂತಹ ಖಾಯಿಲೆಗಳು ಬರುತ್ತವೆ ಎಂದು ಯಾವುದೇ ಆಧಾರಗಳಿಲ್ಲದೆ ಆರೋಪಿಸಿದ್ದಾರೆ. ಇದು ಭಾರತದ ಗುಡಿಕೈಗಾರಿಕೆ ಮತ್ತು ಸಣ್ಣ ಉದ್ದಿಮೆ ಮೇಲೆ ದೊಡ್ಡ ಹೊಡೆತ ಬೀಳುತ್ತದೆ. ಇದರ ಮೇಲೆ ಅವಲಂಬಿತರಾಗಿರುವ ಅಡಿಕೆ ರೈತರಿಗೂ ಇದು ನಷ್ಟವನ್ನು ತಂದೊಡ್ಡುತ್ತದೆ. ಭಾರತದಿಂದ ಪ್ರತಿ ವರ್ಷ 3 ಸಾವಿರ ಟನ್ ಅಡಿಕೆ ಹಾಳೆಯ ಉತ್ಪನ್ನಗಳು ರಫ್ತಾಗುತ್ತಿದ್ದವು.

ಜಾಗತಿಕ ಒಪ್ಪಂದಗಳು ಭಾರತೀಯರಿಗೆ ಲಾಭವಾಗುವ ಬದಲು ನಷ್ಟವಾಗಿ ಪರಿಣಮಿಸುತ್ತಿವೆ. ಅಮೇರಿಕಾದಂತಹ ದೇಶಗಳು ಕೃಷಿ ಉತ್ಪನ್ನಗಳಿಗೆ ನಮ್ಮಂತಹ ರಾಷ್ಟ್ರಗಳ ಮೇಲೆ ಅವಲಂಭಿತವಾಗಿದ್ದರೂ ನಮ್ಮ ಉತ್ಪನ್ನಗಳಿಗೆ ವಿಪರೀತ ಆಮದು ಸುಂಕಗಳನ್ನು ವಿಧಿಸಿ ಅವರ ಉತ್ಪನ್ನಗಳಿಗೆ ಶೂನ್ಯ ಸುಂಕ ವಿಧಿಸಬೇಕೆಂದು ಶರತ್ತುಗಳನ್ನು ವಿಧಿಸಿದೆ. ಪುಟ 12 ಕ್ಕೆ





ಇಸ್ರೇಲ್‌ನ ನರಮೇಧದ ವಿರುದ್ಧ ಗಾಜಾದತ್ತ ಜಾಗತಿಕ ನಡಿಗೆ

"ಇದು ಕೇವಲ ಒಂದು ಗಡಿಯತ್ತ ನಡಿಗೆಯಲ್ಲ, ಇದು ವಿಶ್ವದ ಆತ್ಮಸಾಕ್ಷಿಯ ಕಡೆಗೆ ಒಂದು ನಡಿಗೆ, ನೇರ ಕಾರ್ಯಾಚರಣೆಯ ಶಕ್ತಿಯನ್ನು ಪುನರುಜ್ಜೀವನಗೊಳಿಸುವ ನಡಿಗೆ"

50ಕ್ಕೂ ಹೆಚ್ಚು ದೇಶಗಳ ಕಾರ್ಮಿಕ ಸಂಘಗಳು, ಸೌಹಾರ್ದ ಚಳುವಳಿಗಳು ಮತ್ತು ಮಾನವ ಹಕ್ಕುಗಳ ಸಂಘಟನೆಗಳನ್ನು ಒಳಗೊಂಡ ಅಂತರರಾಷ್ಟ್ರೀಯ ಮೈತ್ರಿಕೂಟ ಕಾಲ್ನಡಿಗೆಯಲ್ಲಿ ಗಾಜಾ ಪಟ್ಟಿಯನ್ನು ಪ್ರವೇಶಿಸುವ ಒಂದು ಕಾರ್ಯಕ್ರಮವನ್ನು ಪ್ರಾರಂಭಿಸಿವೆ. ಗಾಜಾ ಪಟ್ಟಿಗೆ ಇಸ್ರೇಲ್ ಹಾಕಿರುವ ದಿಗ್ಬಂಧನವನ್ನು ಕೊನೆಗೊಳಿಸಲು ಮತ್ತು ಕ್ಷಾಮ ಮತ್ತು ನಿರಂತರ ಬಾಂಬ್ ದಾಳಿಯ ನಡುವೆ ಗಾಜಾ ನಿವಾಸಿಗಳು ಅನುಭವಿಸುತ್ತಿರುವ ದುರಂತ ಪರಿಸ್ಥಿತಿಗಳ ಮೇಲೆ ಬೆಳಕು ಚೆಲ್ಲಲು ಕೈರೋದಿಂದ ರಫಾ ಕ್ರಾಸಿಂಗ್‌ವರೆಗೆ ನಡೆಯುವ ಕಾಲ್ನಡಿಗೆ ಜಾಥಾಕ್ಕೆ ಸಾವಿರಾರು ಅಂತರರಾಷ್ಟ್ರೀಯ ಸ್ವಯಂಸೇವಕರು ಸಜ್ಜುಗೊಳ್ಳುತ್ತಿದ್ದಾರೆ.

"ಗ್ಲೋಬಲ್ ಗಾಜಾ ಮಾರ್ಚ್" (ಜಾಗತಿಕ ಗಾಜಾ ಜಾಥಾ) ಎಂಬ ಈ ಅಭಿಯಾನವು ಪ್ಯಾಲೆಸ್ಟೈನ್‌ನೊಂದಿಗಿನ ಅಂತರರಾಷ್ಟ್ರೀಯ ಸೌಹಾರ್ದ ಚಳುವಳಿಯಲ್ಲಿ ಒಂದು ಮಹತ್ವದ ಕ್ಷಣ ಎನ್ನಲಾಗಿದೆ. ಗಾಜಾದಲ್ಲಿನ ಕ್ಷಾಮವನ್ನು ಕೊನೆಗೊಳಿಸುವುದು, ರಫಾ ಕ್ರಾಸಿಂಗ್‌ನಲ್ಲಿ ತಿಂಗಳುಗಟ್ಟಲೆ ನಿಲ್ಲಿಸಲ್ಪಟ್ಟಿರುವ ಸಾವಿರಾರು ನೆರವು ಟ್ರಕ್‌ಗಳ ಪ್ರವೇಶವನ್ನು ಸುಗಮಗೊಳಿಸುವುದು, ಸ್ಥಿರ ಮತ್ತು ಶಾಶ್ವತ ಮಾನವೀಯ ಪ್ರವೇಶವನ್ನು ಸ್ಥಾಪಿಸುವುದು, ಇಸ್ರೇಲ್‌ನ ಅಪರಾಧಗಳನ್ನು ಬಯಲಿಗೆಳೆಯುವುದು ಮತ್ತು ಇದಕ್ಕೆ ಕಾರಣರಾಗಿರುವವರ ಹೊಣೆಗಾರಿಕೆಯನ್ನು ಗ್ರಹಿಸುವುದು ಈ ಜಾಗತಿಕ ಮೆರವಣಿಗೆಯ ಪ್ರಮುಖ ಉದ್ದೇಶಗಳು ಎನ್ನಲಾಗಿದೆ.

ಕಳೆದ 20 ತಿಂಗಳುಗಳಿಂದ, ಗಾಜಾ ಜನರ ವಿರುದ್ಧ ಇಸ್ರೇಲ್ ನರಮೇಧವನ್ನು ನಡೆಸುತ್ತಿದೆ. ಅದರ ಎದುರು ಅಂತರರಾಷ್ಟ್ರೀಯ ಮೌನವೆಂದರೆ ಅದರಲ್ಲಿ ಶಾಮೀಲಾದಂತೆಯೇ– ಮತ್ತು ಪ್ರಪಂಚದಾದ್ಯಂತದ ಜನರು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತಾರೆ ಎಂಬ ಸ್ಪಷ್ಟ ಸಂದೇಶದೊಂದಿಗೆ ಕಾರ್ಮಿಕ ಸಂಘಗಳು, ಹಕ್ಕುಗಳ ಗುಂಪುಗಳು, ವೈದ್ಯಕೀಯ ವಲಯಗಳು ಮತ್ತು ನಾಗರಿಕ ಸಮಾಜದಿಂದ ಬಂದ ಸಾವಿರಾರು ಮಂದಿ ಒಗ್ಗೂಡಿದ್ದಾರೆ.

'ಜಾಗತಿಕ ಗಾಜಾ ಜಾಥಾ'ದ ಅಂತರರಾಷ್ಟ್ರೀಯ ಸಮಿತಿಯ ಸದಸ್ಯರಾದ ಸೈಫ್ ಅಬು ಕೆಶ್ಕ್, 'ಬ್ರೇಕ್‌ಥ್ರೂ ನ್ಯೂಸ್'ಗೆ ನೀಡಿದ ಸಂದರ್ಶನದಲ್ಲಿ, ಪ್ಯಾಲೆಸ್ಟೀನಿಯನ್ ಜನರ ವಿರುದ್ಧ ನಡೆಯುತ್ತಿರುವ ನರಮೇಧವನ್ನು ನಿಲ್ಲಿಸುವುದು, ಬೇಷರತ್ತಾಗಿ ಮತ್ತು ತಕ್ಷಣದ ಮಾನವೀಯ ನೆರವು ಲಭ್ಯವಾಗುವಂತೆ ನೋಡಿಕೊಳ್ಳುವುದು ಮತ್ತು ಗಾಜಾದ ಮೇಲೆ ವಿಧಿಸಲಾದ "ಅಮಾನವೀಯ" ದಿಗ್ಬಂಧನವನ್ನು ತೆಗೆದುಹಾಕುವಂತೆ ಒತ್ತಾಯಿಸುವುದು ಈ ಮೆರವಣಿಗೆಯ ಉದ್ದೇಶವಾಗಿದೆ ಎಂದು ಹೇಳಿದರು. ಈ ಉಪಕ್ರಮವು ಸಂಪೂರ್ಣವಾಗಿ ಮಾನವೀಯವಾಗಿದೆ, ಯಾವುದೇ ರಾಜಕೀಯ ಸಂಬಂಧಗಳು ಅಥವಾ ಅಧಿಕೃತ ಪ್ರಾಯೋಜಕತ್ವವಿಲ್ಲದೆ, ಎಲ್ಲಾ ಭಾಗವಹಿಸುವವರು ಸ್ವಯಂಸೇವಕರಾಗಿ ಮತ್ತು ಸ್ವಂತ ಹಣದಿಂದ ಇದರಲ್ಲಿ ಪಾಲ್ಗೊಂಡಿದ್ದಾರೆ, ಇದು ಜಾಗತಿಕ ಸೌಹಾರ್ದವನ್ನು ಬಲಪಡಿಸುವುದು ಮತ್ತು ಶಾಮೀಲಾಗಿರುವ ಅಥವಾ ಮೌನವಾಗಿರುವ



ಸರ್ಕಾರಗಳ ಮೇಲೆ ಸಾಮೂಹಿಕ ಒತ್ತಡ ತರುವ ವಿಶಾಲ ಪ್ರಯತ್ನದ ಭಾಗವಾಗಿದೆ ಎಂದು ಅವರು ಒತ್ತಿ ಹೇಳಿದರು.

ಕೈರೋದಿಂದ ರಫಾಗೆ

ವಿವಿಧ ದೇಶಗಳ ಸ್ವಯಂಸೇವಕರು ಜೂನ್ 12ರಂದು ಈಜಿಪ್ಟ್‌ನ ರಾಜಧಾನಿ ಕೈರೋಗೆ ಆಗಮಿಸಿ, ನಂತರ ಅರಿಶ್ ನಗರಕ್ಕೆ ಪ್ರಯಾಣಿಸುತ್ತಾರೆ. ಅಲ್ಲಿಂದ ಅವರು ಜೂನ್ 15ರಂದು ರಫಾಗೆ ತಮ್ಮ ಕಾಲ್ನಡಿಗೆಯನ್ನು ಪ್ರಾರಂಭಿಸುತ್ತಾರೆ. ರಫಾವನ್ನು ತಲುಪುವುದು ಮಾತ್ರವಲ್ಲದೆ, ಅದನ್ನು ತೆರೆಯಲು ಮತ್ತು ನರಳುತ್ತಿರುವ ಪ್ಯಾಲೆಸ್ಟೀನಿಯನ್ನರಿಗೆ ಬಂದಿರುವ ನೆರವಿನ ಸಾಮಗ್ರಿಗಳ ಪ್ರವೇಶಕ್ಕೆ ಅವಕಾಶ ನೀಡುವಂತೆ ಅಧಿಕಾರಿಗಳ ಮೇಲೆ ಒತ್ತಡ ತರಲು ಕ್ರಾಸಿಂಗ್‌ನಲ್ಲಿ ಧರಣಿ ನಡೆಸುವುದು ಸಹ ಉದ್ದೇಶವಾಗಿದೆ ಎಂದು ಸಂಘಟಕರು ಒತ್ತಿ ಹೇಳಿದ್ದಾರೆ. ಕಳೆದ ಹಲವಾರು ತಿಂಗಳುಗಳಿಂದ ಆಹಾರ, ನೀರು ಮತ್ತು ಔಷಧದಿಂದ ವಂಚಿತರಾಗಿರುವ ಮತ್ತು 20 ತಿಂಗಳುಗಳಿಂದ ನಿರಂತರ ಬಾಂಬ್ ದಾಳಿಗೆ ಒಳಗಾಗಿರುವ ಗಾಜಾ ನಿವಾಸಿಗಳೊಂದಿಗೆ ಸೌಹಾರ್ದದ ಅಭಿವ್ಯಕ್ತಿಯಾಗಿ ಅವರು ಈ ಕಷ್ಟಗಳನ್ನು ಸಹಿಸಿಕೊಳ್ಳಲು ಸಿದ್ಧರಿದ್ದಾರೆ ಎಂದು ಅವರು ಹೇಳಿದ್ದಾರೆ.

ಜರ್ಮನ್ ವಕೀಲೆ ಮೆಲಾನಿ ಶ್ವೀಟ್ಜರ್ ಅವರು ಮೆರವಣಿಗೆ ಸಂಪೂರ್ಣವಾಗಿ ಶಾಂತಿಯುತ ಮತ್ತು ನಾಗರಿಕ ಸ್ವರೂಪದ್ದಾಗಿದೆ, ರಾಜಕೀಯ ಮತ್ತು ಸಾಂಸ್ಕೃತಿಕ ಗಡಿಗಳನ್ನು ಮೀರಿದ ಏಕೀಕೃತ ಮಾನವೀಯ ಸಂದೇಶವನ್ನು ರವಾನಿಸಿಸುತ್ತದೆ ಎಂದಿದ್ದಾರೆ. ಜಾಥಾದ ಸಂಘಟಕರು ಈಜಿಪ್ಟಿನ ರಾಯಭಾರ ಕಚೇರಿಗಳು ಮತ್ತು ತಮ್ಮದೇ ಆದ ರಾಷ್ಟ್ರೀಯ ರಾಜತಾಂತ್ರಿಕ ಮಿಷನ್‌ಗಳೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ಐರಿಶ್ ಕಾರ್ಯಕರ್ತರಾದ ಕರೆನ್ ಮೊಯ್ನಿಹಾನ್ ಗಮನಿಸಿದರು. ಇದು ಈಜಿಪ್ಟ್ ಅನ್ನು ಜವಾಬುದಾರರನ್ನಾಗಿ ಮಾಡಲು ಪ್ರಯತ್ನಿಸುವುದಿಲ್ಲ, ಬದಲಿಗೆ ಸಹಕರಿಸಲು ಮತ್ತು ದಿಗ್ಬಂಧನವನ್ನು ತೆಗೆದುಹಾಕಲು ಇಸ್ರೇಲ್ ಮೇಲೆ ನಿಜವಾದ ಅಂತರರಾಷ್ಟ್ರೀಯ ಒತ್ತಡವನ್ನು ತರಲು ಪ್ರಯತ್ನಿಸುತ್ತದೆ ಎಂದು ಅವರು ಒತ್ತಿ ಹೇಳಿದರು. ಈ ಅಪರಾಧಗಳ ವಿರುದ್ಧ ಕ್ರಮ ಕೈಗೊಳ್ಳಲು ವಿಫಲವಾಗುವ ಯಾವುದೇ ಪ್ರಭುತ್ವ ನರಮೇಧದಲ್ಲಿ ಶಾಮೀಲಾಗಿದೆ ಎಂದಾಗುತ್ತದೆ ಮತ್ತು ಇತಿಹಾಸವು ಅಂತಹ ಮೌನವನ್ನು ಕ್ಷಮಿಸುವುದಿಲ್ಲ ಎಂದು ಅವರು ಒತ್ತಿ ಹೇಳಿದರು.

ಮಾನವೀಯ ನೆರವು ತಲುಪದಂತೆ ಇಸ್ರೇಲ್‌ನ ನಿರಂತರ ದಿಗ್ಬಂಧನ ಮತ್ತು ಇಂತಹ ನೆರವನ್ನು ವಿಶ್ವಸಂಸ್ಥೆಯ ಯುಎನ್‌ಆರ್‌ಡಬ್ಲ್ಯುಎ ಬದಲು ಅಮೆರಿಕದ ಖಾಸಗಿ ಕಂಪನಿ ಜಿಹೆಚ್‌ಎಫ್ (ಗಾಜಾ ಹ್ಯುಮಾನಿಟೇರಿಯನ್ ಫೌಂಡೇಶನ್) ಗೆ ವಹಿಸುವ ಅದರ ಕಸರತ್ತಿನ ಬಗ್ಗೆ ಜಾಗತಿಕ ಟೀಕೆಗಳು ಹೆಚ್ಚುತ್ತಿವೆ. ರಫಾದಲ್ಲಿ ಸ್ಥಾಪಿಸಲಾದ ಜಿಹೆಚ್‌ಎಫ್‌ನ ನೆರವು ವಿತರಣಾ ಕೇಂದ್ರಗಳು ಅಗತ್ಯ ಸಹಾಯವನ್ನು ವಿತರಿಸಲು ಮಾಡಿದ ಕೆಲಸ ಕಡಿಮೆ, ಬದಲಿಗೆ ಆ ಕೇಂದ್ರಗಳು ಇಸ್ರೇಲಿ ಸೈನಿಕರು ಎರಡು ಸಂದರ್ಭಗಳಲ್ಲಿ ಪ್ಯಾಲೆಸ್ಟೀನಿಯನ್ ನೆರವು ಪಡೆಯುವವರ ಮೇಲೆ ಗುಂಡು ಹಾರಿಸಿದ ಪ್ಯಾಲೆಸ್ಟೀನಿಯನ್ನರ ಹತ್ಯಾಕಾಂಡದ ಸ್ಥಳವಾದವು.

ಇಸ್ರೇಲ್‌ನ ದಿಗ್ಬಂಧನದಿಂದಾಗಿ ಗಾಜಾದಲ್ಲಿ ಬರಗಾಲ ಮತ್ತು ಮಾನವೀಯ ದುರಂತ ಸಂಭವಿಸಲಿದೆ ಎಂದು ಜಾಗತಿಕ ಆಕ್ರೋಶ ಹೆಚ್ಚುತ್ತಿರುವಂತೆ, ಜಾಗತಿಕ ಗಾಜಾ ಜಾಥಾ ಹಾಗೂ ಇತ್ತೀಚೆಗೆ ಗಾಜಾಗೆ 'ಫ್ರೀಡಂ ಫ್ಲೋಟಿಲ್ಲಾ' ದೋಣಿಯ ಪ್ರಯಾಣವು, ಗಾಜಾದ ಜನತೆ ಒಂಟಿಯಲ್ಲ ಎಂದು ತೋರಿಸಲು ಪ್ರಯತ್ನಿಸುತ್ತದೆ ಎಂದು ಈ ಕಾರ್ಯಕ್ರಮದ ಸಂಘಟಕರು ಹೇಳುತ್ತಾರೆ.

ಟುನಿಸ್‌ನಿಂದ ರಫಾವರೆಗೆ

ಇದಕ್ಕೆ ಮೊದಲು ಟುನೀಶಿಯಾದಲ್ಲಿ ಮೇ ಮಧ್ಯದಿಂದ ಟುನೀಷಿಯನ್ ನಾಗರಿಕ ಸಂಘಗಳು, ಪ್ರಮುಖ ಕಾರ್ಮಿಕ ಸಂಘಗಳು, ವಿದ್ಯಾರ್ಥಿ ಗುಂಪುಗಳು ಮತ್ತು ಯುವ ಚಳುವಳಿಗಳು ಟುನೀಶಿಯಾದಿಂದ ಹೊರಟು, ಕೈರೋ ಮೂಲಕ ಹಾದು, ಜಾಗತಿಕ ಗಾಜಾ ಜಾಥಾದೊಂದಿಗೆ ಸೇರಿಕೊಳ್ಳುವ ಸಿದ್ಧತೆ ತಳಮಟ್ಟದಿಂದ ಆರಂಭವಾಗಿತ್ತು. ಜೂನ್ 9ರಂದು ಹೊರಟ ಸಾವಿರಾರು ಟುನೀಷಿಯನ್ನರೊಂದಿಗೆ ಬಸ್ ಮತ್ತು ಇತರ ವಾಹನಗಳಲ್ಲಿ ಮಗ್ರೆಬ್ ಮತ್ತು ದಕ್ಷಿಣ ಯುರೋಪಿನ ದೇಶಗಳಾದ ಇಟಲಿ, ಸ್ಪೇನ್ ಮತ್ತು ಫ್ರಾನ್ಸ್‌ಗಳಿಂದ ಸ್ವಯಂಸೇವಕರು ಕೂಡ ಭಾಗವಹಿಸುತ್ತಿದ್ದಾರೆ. ಟ್ಯುನೀಶಿಯಾದ ರಾಜಧಾನಿಯಲ್ಲಿ ಮತ್ತು ಅದು ಹಾದುಹೋದ ಇತರ ನಗರಗಳಲ್ಲಿ ವಾಹನ ಜಾಥಾ ಸ್ವಾಗತ ಮತ್ತು ಬೀಳ್ಕೊಡುಗೆಗಳನ್ನು ಪಡೆಯಿತು ಎಂದು ವರದಿಯಾಗಿದೆ.

ಜೂನ್ 15ರ ಸುಮಾರಿಗೆ ಅಥವಾ ನಂತರ ಸ್ವಲ್ಪ ಸಮಯದ ನಂತರ ರಫಾ ಕ್ರಾಸಿಂಗ್‌ನಲ್ಲಿ ಈ ಎರಡು ಜಾಥಾಗಳ ಸಂಗಮವು ಕೇವಲ ಒಂದು ಸಾಂಕೇತಿಕ ಮಾಧ್ಯಮ ಕಾರ್ಯಕ್ರಮವಾಗಿರದೆ, ಗಡಿಯಲ್ಲಿ ಒಂದು ಬಹಿರಂಗ ಅಂತರರಾಷ್ಟ್ರೀಯ ಪ್ರತಿಭಟನಾ ಶಿಬಿರವಾಗಿ ರೂಪಾಂತರಗೊಳ್ಳುವ ನಿರೀಕ್ಷೆಯಿದೆ. ಧರಣಿ ಬ್ಯಾನರ್‌ಗಳು ಮತ್ತು ಘೋಷಣೆಗಳ ಮೂಲಕ, ಸರ್ಕಾರಗಳು ತಮ್ಮ ನೈತಿಕ ಮತ್ತು ರಾಜಕೀಯ ಜವಾಬ್ದಾರಿಗಳನ್ನು ನಿಭಾಯಿಸಲು ಕರೆ ನೀಡಲಾಗುತ್ತದೆ. ರಫಾವನ್ನು ತಕ್ಷಣ ಮತ್ತು ಬೇಷರತ್ತಾಗಿ ತೆರೆದು ಆಹಾರ, ಔಷಧ ಮತ್ತು ಇಂಧನವನ್ನು ಸಾಗಿಸುವ 3,000ಕ್ಕೂ ಹೆಚ್ಚು ನೆರವು ಟ್ರಕ್‌ಗಳಿಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿ ಈಜಿಪ್ಟಿನ ಆಡಳಿತಗಾರರಿಗೆ ಮತ್ತು ಈಜಿಪ್ಟ್ ಅಧಿಕಾರಿಗಳು ಮತ್ತು ವಿಶ್ವಸಂಸ್ಥೆಯ ಈ ಪ್ರದೇಶದ ಪ್ರತಿನಿಧಿಗಳಿಗೆ ಒಂದು ಅಂತರರಾಷ್ಟ್ರೀಯ ಮನವಿಯನ್ನು ಸಲ್ಲಿಸಲು ನಿರ್ಧರಿಸಲಾಗಿದೆ.

ಈ ಸಂದರ್ಭದಲ್ಲಿ ಸಾಂಸ್ಕೃತಿಕ ಮತ್ತು ಜಾಗೃತಿ ಮೂಡಿಸುವ ಚಟುವಟಿಕೆಗಳನ್ನು ಕೂಡ ಆಯೋಜಿಸಲು ಜಾಥಾ ಸಂಘಟಕರು ಯೋಜಿಸಿದ್ದಾರೆ. (ಇದರಲ್ಲಿ ಚರ್ಚಾಕೂಟಗಳು, ಕಲಾ ಪ್ರದರ್ಶನಗಳು ಮತ್ತು ಅಂತರರಾಷ್ಟ್ರೀಯ ಜನಬೆಂಬಲವನ್ನು ವಿಸ್ತರಿಸಲು ಮತ್ತು ಇಸ್ರೇಲ್‌ನ ಅಪರಾಧಗಳನ್ನು ಜಾಗತಿಕ ಸಾರ್ವಜನಿಕ ಅಭಿಪ್ರಾಯಕ್ಕೆ ಬಹಿರಂಗಪಡಿಸಲು ನೇರ ಮಾಧ್ಯಮ ಅಭಿಯಾನಗಳು ಸೇರಿವೆ). ವಿಶೇಷವಾಗಿ ಪ್ರಮುಖ ಅಂತರರಾಷ್ಟ್ರೀಯ ಮಾಧ್ಯಮಗಳು ಈ ಕಾರ್ಯಕ್ರಮವನ್ನು ವರದಿಮಾಡುವ ನಿರೀಕ್ಷೆಯಿದೆ.

ಇದು ಕೇವಲ ಒಂದು ಗಡಿಯತ್ತ ನಡಿಗೆಯಲ್ಲ, ಇದು ವಿಶ್ವದ ಆತ್ಮಸಾಕ್ಷಿಯ ಕಡೆಗೆ ಒಂದು ನಡಿಗೆ, ನೇರ ಕಾರ್ಯಾಚರಣೆಯ ಶಕ್ತಿಯನ್ನು ಪುನರುಜ್ಜೀವನಗೊಳಿಸುವ ➚



ಇರಾನ್ ಮೇಲೆ ಇಸ್ರೇಲ್ ದಾಳಿ: ಮಿಲಿಟರಿ ಕಾರ್ಯಾಚರಣೆಗಳನ್ನು ತಕ್ಷಣವೇ ನಿಲ್ಲಿಸುವಂತೆ ಭಾರತ ಸರಕಾರ ಸಕ್ರಿಯವಾಗಿ ಒತ್ತಾಯಿಸಬೇಕು-ಸಿಪಿಐ(ಎಂ) ಪೊಲಿಟ್ ಬ್ಯುರೊ

ಇಸ್ರೇಲ್ ಇರಾನ್ ವಿರುದ್ಧ ಸರಣಿ ದಾಳಿಗಳನ್ನು ನಡೆಸಿದೆ. ಇದರ ಪರಿಣಾಮವಾಗಿ ಹಿರಿಯ ಪರಮಾಣು ವಿಜ್ಞಾನಿಗಳು, ಸೇನಾಪತಿಗಳು ಮತ್ತು ಹಲವಾರು ನಾಗರಿಕರು ಸಾವನ್ನಪ್ಪಿದ್ದಾರೆ. ಇದನ್ನು ಸಿಪಿಐ(ಎಂ) ಬಲವಾಗಿ ಖಂಡಿಸಿದೆ. ಈಗ ನಡೆಯುತ್ತಿರುವ ಮಿಲಿಟರಿ ಕಾರ್ಯಾಚರಣೆಗಳನ್ನು ತಕ್ಷಣ ನಿಲ್ಲಿಸಬೇಕೆಂದು ಅದು ಒತ್ತಾಯಿಸಿದೆ. ಈ ಕೃತ್ಯವು ಇಸ್ರೇಲ್ ಒಂದು ಪುಂಡ ಪ್ರಭುತ್ವದಂತೆ ವರ್ತಿಸುತ್ತಿದೆ, ಪಶ್ಚಿಮ ಏಷ್ಯಾದ ದೇಶಗಳ ಮೇಲೆ ತನ್ನ ಮನಬಂದಂತೆ ದಾಳಿಗಳನ್ನು ನಡೆಸುತ್ತಿದೆ ಮತ್ತು ಅಂತರರಾಷ್ಟ್ರೀಯ ಕಾನೂನುಗಳು ಮತ್ತು ಸಂಪ್ರದಾಯಗಳನ್ನು ಉಲ್ಲಂಘಿಸುತ್ತಿದೆ ಎಂಬುದನ್ನು ಮತ್ತೊಮ್ಮೆ ಪ್ರದರ್ಶಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಇಸ್ರೇಲ್ ಅಧಿಕಾರಿಗಳ ಹೇಳಿಕೆಗಳು ಈ ದಾಳಿಯನ್ನು ತಿಂಗಳುಗಳ ಮುಂಚಿತವಾಗಿ ಯೋಜಿಸಲಾಗಿತ್ತು ಎಂದು ಸೂಚಿಸುತ್ತವೆ. ಇಡೀ ಪಶ್ಚಿಮ ಏಷ್ಯಾ ಪ್ರದೇಶದ ಮೇಲೆ ಇಸ್ರೇಲ್‌ನ ಪ್ರಾಬಲ್ಯದ ಪ್ರತಿಪಾದನೆಯೇ ಇದರ ಉದ್ದೇಶವಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧಿಕೃತ ಘೋಷಣೆಗಳು ಏನೇ ಹೇಳಿದರೂ, ಅದರ ಪರೋಕ್ಷ ಅಥವ ನೇರ ಬೆಂಬಲವಿಲ್ಲದೆ ಇಂತಹ ಕಾರ್ಯಾಚರಣೆ ಸಾಧ್ಯವಾಗುತ್ತಿರಲಿಲ್ಲ ಎಂಬುದು ಸ್ಪಷ್ಟವಾಗಿದೆ. ಈ ಬೆಂಬಲವಿಲ್ಲದೆ, ಇಸ್ರೇಲ್‌ಗೆ ಅಂತಹ ಆಕ್ರಮಣಕಾರಿ ಮಿಲಿಟರಿ ಕಾರ್ಯಾಚರಣೆ ನಡೆಸುವ ವಿಶ್ವಾಸ ಅಥವಾ ಸಾಮರ್ಥ್ಯ ಇಲ್ಲ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಇಸ್ರೇಲ್ ಪರಮಾಣು ಶಸ್ತ್ರಾಸ್ತ್ರಗಳನ್ನುಹೊಂದಿದೆ ಮತ್ತು ಈ ಪ್ರದೇಶದ ಇತರ ದೇಶಗಳು ಶಾಂತಿಯುತ ಉದ್ದೇಶಗಳಿಗಾಗಿಯೂ ಸಹ ಪರಮಾಣು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವುದನ್ನು ತಡೆಯಲು ಪ್ರಯತ್ನಿಸುತ್ತಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಪರಮಾಣು ಪ್ರಶ್ನೆಗಳ ಕುರಿತು ಇರಾನ್‌ನೊಂದಿಗೆ ಮಾತುಕತೆಗಳು ನಡೆಯುತ್ತಿರುವ ಮಧ್ಯೆಯೇ ನಡೆಯುತ್ತಿರುವ ಈ ದಾಳಿಯು, ವಿಶಾಲವಾದ ಪ್ರಾದೇಶಿಕ ಸಂಘರ್ಷವನ್ನು ಹುಟ್ಟುಹಾಕುವ ಮತ್ತು ಪಶ್ಚಿಮ ಏಷ್ಯಾವನ್ನು ಆಳವಾದ ಅಸ್ಥಿರತೆಗೆ ತಳ್ಳುವ ಸಾಧ್ಯತೆಯಿದೆ. ಕಳೆದ 20 ತಿಂಗಳುಗಳಿಂದ, ಇಸ್ರೇಲ್ ಪ್ಯಾಲೆಸ್ಟೈನ್ ವಿರುದ್ಧ ನರಮೇಧದ ಯುದ್ಧವನ್ನು ನಡೆಸುತ್ತಿದೆ. ಈಗ, ಇರಾನ್ ಮೇಲಿನ ಈ ದಾಳಿಯೊಂದಿಗೆ, ಇಸ್ರೇಲ್ ಈ ಪ್ರದೇಶದಲ್ಲಿ ತನ್ನ ಪ್ರಾಬಲ್ಯಕ್ಕೆ ಯಾವುದೇ ಸಂಭಾವ್ಯ ಸವಾಲು ಇಲ್ಲದಂತೆ ಮಾಡಲು ಪ್ರಯತ್ನಿಸುತ್ತಿದೆ ಎಂಬುದು ಸ್ಪಷ್ಟವಾಗಿದೆ.

ವಿಶ್ವಸಂಸ್ಥೆಯ ನೇತೃತ್ವದ ಅಂತರರಾಷ್ಟ್ರೀಯ ಸಮುದಾಯವು ಇಸ್ರೇಲ್‌ನ ಆಕ್ರಮಣವನ್ನು ತಡೆಯಲು ವಿಳಂಬ ಮಾಡದೆ ಮಧ್ಯಪ್ರವೇಶಿಸಬೇಕು. ಈ ದಾಳಿಯ ಜಾಗತಿಕ ಖಂಡನೆಗೆ ಭಾರತ ಸರ್ಕಾರವು ತನ್ನ ಧ್ವನಿಯನ್ನು ಸೇರಿಸಬೇಕು ಮತ್ತು ಇಸ್ರೇಲ್ ತನ್ನ ಮಿಲಿಟರಿ ಕಾರ್ಯಾಚರಣೆಗಳನ್ನು ತಕ್ಷಣವೇ ನಿಲ್ಲಿಸುವಂತೆ ಸಕ್ರಿಯವಾಗಿ ಒತ್ತಾಯಿಸಬೇಕು ಎಂದು ಸಿಪಿಐ(ಎಂ) ಹೇಳಿದೆ.

ಜೂನ್ 12ರಂದು ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾರತ ಪ್ಯಾಲೆಸ್ಟೈನ್‌ಗೆ ಬೆಂಬಲವಾಗಿ ಮತ ಚಲಾಯಿಸದೆ ಗೈರು ಹಾಜರಾಗುವುದನ್ನು ಆರಿಸಿಕೊಂಡದ್ದು ಅತ್ಯಂತ ಶೋಚನೀಯವಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಇಂತಹ ಕ್ರಿಯೆಗಳು ಇಸ್ರೇಲ್ ಮತ್ತಷ್ಟು ಭಂಡತನದಿಂದ ವರ್ತಿಸಲು ಮತ್ತು ಈ ಪ್ರದೇಶದಲ್ಲಿ ತನ್ನ ಆಕ್ರಮಣವನ್ನು ಮುಂದುವರೆಸಲು ಸಹಾಯ ಮಾಡುತ್ತದಷ್ಟೇ ಎಂದು ಎಚ್ಚರಿಸಿದೆ. ಭಾರತವು ಇರಾನ್ ಮತ್ತು ಪ್ಯಾಲೆಸ್ಟೈನ್ ಎರಡರೊಂದಿಗೂ ದೀರ್ಘಕಾಲದ ಸಂಬಂಧಗಳನ್ನು ಹೊಂದಿದೆ, ಇದನ್ನು ಗೌರವಿಸಬೇಕು ಮತ್ತು ಬಲಪಡಿಸಬೇಕು. ಬಿಜೆಪಿ ನೇತೃತ್ವದ ಸರ್ಕಾರವು ಇಸ್ರೇಲ್‌ಗೆ ತನ್ನ ಮೌನ ಬೆಂಬಲವನ್ನು ಕೊನೆಗೊಳಿಸಬೇಕು ಮತ್ತು ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮತ್ತು ನ್ಯಾಯಕ್ಕಾಗಿ ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಏರ್ ಇಂಡಿಯಾ ಅಪಘಾತ–ಸಿಪಿಐ(ಎಂ) ದುಃಖ

ಅಹಮದಾಬಾದ್‌ನಿಂದ ಲಂಡನ್‌ಗೆ ಹೋಗುತ್ತಿದ್ದ ಏರ್ ಇಂಡಿಯಾ ವಿಮಾನದ ದುರಂತಮಯ ಅಪಘಾತದಲ್ಲಿ 265 ಜನರು ಸಾವನ್ನಪ್ಪಿದ ಘಟನೆಯ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ತೀವ್ರ ದುಃಖ ವ್ಯಕ್ತಪಡಿಸಿದೆ. ಅಪಘಾತದಲ್ಲಿ ಪ್ರಾಣ ಕಳೆದುಕೊಂಡ ಎಲ್ಲಾ ಪ್ರಯಾಣಿಕರು, ಸಿಬ್ಬಂದಿ ಸದಸ್ಯರು, ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ವೈದ್ಯರ ಕುಟುಂಬಗಳಿಗೆ ಅದು ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ.

ಭಾರತ ಸರ್ಕಾರವು ಅಪಘಾತದ ಬಗ್ಗೆ ಸಮಗ್ರ ತನಿಖೆಯನ್ನು ಪ್ರಾರಂಭಿಸಬೇಕು ಮತ್ತು ಭವಿಷ್ಯದಲ್ಲಿ ಇಂತಹ ದುರಂತಗಳನ್ನು ತಡೆಗಟ್ಟಲು ಸಾಕಷ್ಟು ಸುರಕ್ಷತಾ ಕ್ರಮಗಳನ್ನು ಜಾರಿಗೆ ತರುವಂತೆ ಖಚಿತಪಡಿಸಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಎಐ 171 ಅಪಘಾತ ತನಿಖೆಯನ್ನು ವೃತ್ತಿಪರರು ಮತ್ತು ತಜ್ಞರಿಗೇ ಬಿಡುವುದು ಒಳ್ಳೆಯದು ಅದನ್ನು ಮತ್ತೊಂದು ಉನ್ನತಾಧಿಕಾರದ ಸಮಿತಿಗೆ ಒಳಪಡಿಸಬೇಡಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ


ಅಹಮದಾಬಾದ್‌ನಲ್ಲಿ ನಡೆದ ಏರ್ ಇಂಡಿಯಾ 171 ರ ದುರಂತಕಾರೀ ಅಪಘಾತಕ್ಕೆ ಸಂಬಂಧಿಸಿದಂತೆ, 'ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಘಟನೆ' (ICAO) ನಿಗದಿಪಡಿಸಿರುವ ಅಂತರರಾಷ್ಟ್ರೀಯ ವಿಧಿ–ವಿಧಾನಗಳು ಮತ್ತು ಮಾನದಂಡಗಳ ಪ್ರಕಾರ, 'ಭಾರತದ ವಿಮಾನ ಅಪಘಾತ ತನಿಖಾ ಬ್ಯೂರೋ'(AAIB) ಅಪಘಾತದ ಸುತ್ತಲಿನ ಕಾರಣಗಳು ಮತ್ತು ಸಂದರ್ಭಗಳ ಬಗ್ಗೆ ತನ್ನ ಸ್ವತಂತ್ರ ತನಿಖೆಯನ್ನು ಪ್ರಾರಂಭಿಸಿದೆ. ಈ ಕಾರ್ಯವನ್ನು ಮುಂದುವರಿಸಲು ಅದು ವಿಮಾನದ "ಕಪ್ಪು ಪೆಟ್ಟಿಗೆಗಳು" ಮತ್ತು ಇತರ ಎಲ್ಲಾ ಪುರಾವೆಗಳನ್ನು ಸ್ವಾಧೀನಪಡಿಸಿಕೊಳ್ಳುತ್ತದೆ ಮತ್ತು ಸಂಬಂಧಪಟ್ಟ ಅಂತರರಾಷ್ಟ್ರೀಯ ಸಂಸ್ಥೆಗಳು, ವಿಮಾನ ಮತ್ತು ಎಂಜಿನ್ ತಯಾರಕರು ಮತ್ತು ಇತರ ಪಾಲುದಾರರ ಸಹಕಾರದೊಂದಿಗೆ ತನ್ನ ತನಿಖೆಗಳನ್ನು ಪೂರ್ಣಗೊಳಿಸುತ್ತದೆ.

ಆದರೆ ಈ ನಡುವೆ ಒಂದು ಅಚ್ಚರಿಯ ಬೆಳವಣಿಗೆ ನಡೆದಿದೆ; ಇವೇ ಹಲವಾರು ಗುರಿಗಳೊಂದಿಗೆ ಭಾರತ ಸರ್ಕಾರವು ಗೃಹ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು "ಉನ್ನತ ಮಟ್ಟದ ಸಮಿತಿ" (HLC)ಯನ್ನು ಸ್ಥಾಪಿಸಿದೆ, ಇತರ ಹಲವಾರು ಉದ್ದೇಶಗಳೊಂದಿಗೆ, "ಕಪ್ಪು ಪೆಟ್ಟಿಗೆ'ಗಳ ಲಭ್ಯತೆಯೊಂದಿಗೆ ಅಪಘಾತದ "ಮೂಲ ಕಾರಣ"ವನ್ನು ನಿರ್ಧರಿಸುವುದು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಂವಹನ ನಡೆಸುವುದು ಈ ಸಮಿತಿಗೆ ವಹಿಸಿರುವ ಕೆಲಸಗಳು. ಅಧಿಕಾರಿಗಳಿಂದ ತುಂಬಿರುವ ಒಂದು ಸಮಾನಾಂತರ ಉನ್ನತಾಧಿಕಾರದ ಸರ್ಕಾರಿ ವಿಮಾನ ಅಪಘಾತ ತನಿಖಾ ಸಮಿತಿಯನ್ನು ನೇಮಿಸಿರುವುದು AAIB ತನಿಖೆಯನ್ನು ದುರ್ಬಲಗೊಳಿಸುತ್ತದೆ ಮತ್ತು ಇದು ಸರಕಾರದ ಹಸ್ತಕ್ಷೇಪ ನಡೆಯಬಹುದೇ ಎಂಬ ಅನುಮಾನವನ್ನು ಉಂಟುಮಾಡುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ICAO ಅನುಬಂಧ 13 ರ ಅಡಿಯಲ್ಲಿ AAIB ಅನ್ನು ರಚಿಸುವ ಉದ್ದೇಶವೇ ಸರ್ಕಾರೀ ಹಸ್ತಕ್ಷೇಪದ ಅನುಮಾನಗಳು ಹುಟ್ಟದಂತೆ ಮಾಡುವುದು ಎಂದು ಅದು ಹೇಳಿದೆ.



AI–171 ಅಪಘಾತದ ಕಾರಣ ಮತ್ತು ಸಂದರ್ಭಗಳಿಗೆ ಸಂಬಂಧಿಸಿದಂತೆ AAIB ತನಿಖೆಯ ವ್ಯಾಪ್ತಿಯಲ್ಲಿರುವ ಯಾವುದೇ ಅಂಶ–ವಿಶೇಷವಾಗಿ ಎಐ17 ದುರ್ಘಟನೆಯ ಕಾರಣ ಮತ್ತು ಸಂದರ್ಭಗಳನ್ನು ಕುರಿತ ಅಂಶ HLC ಗೆ ಉಲ್ಲೇಖಿಸಿದ ನಿಯಮಗಳಲ್ಲಿ ಪುನರಾವರ್ತಗೊಂಡಿದ್ದರೆ, ಅದಕ್ಕೆ ವಹಿಸಿಕೊಟ್ಟಿರುವ ಗುರಿ ಮತ್ತು ಉದ್ದೇಶಗಳನ್ನು ತಕ್ಷಣವೇ ಪರಿಷ್ಕರಿಸಬೇಕು ಎಂದು ಪೊಲಿಟ್‌ಬ್ಯುರೊ ಸರಕಾರವನ್ನು ಆಗ್ರಹಿಸಿದೆ. ಅಪಘಾತದ ತನಿಖೆಯನ್ನು ವೃತ್ತಿಪರರು ಮತ್ತು ತಜ್ಞರಿಗೆ ಬಿಡುವುದು ಒಳ್ಳೆಯದು ಎಂದು ಅದು ಹೇಳಿದೆ. ಇದರ ಬದಲು, ಈಗ ನೇಮಿಸಿರುವ ಉನ್ನತ ಮಟ್ಟದ ಸಮಿತಿ (HLC) ಇತರ ಹಿಂದಿನ ಅಪಘಾತ ತನಿಖಾ ವರದಿಗಳನ್ನು ಪರಿಶೀಲಿಸಬೇಕು ಮತ್ತು ವಿಮಾನ ನಿಲ್ದಾಣಗಳ ಸುತ್ತಮುತ್ತ ನಿಗದಿತ ದೂರ ಮತ್ತು ಮತ್ತು ಸುರಕ್ಷತಾ ನಿಯಮಾವಳಿಗಳ ಅಡಿಯಲ್ಲಿ ಜನವಸತಿ ಮತ್ತು ಕಟ್ಟಡಗಳ ನಿರ್ಮಾಣವನ್ನು ತಡೆಯುವ ವ್ಯವಸ್ಥೆಗಳ ಕಟ್ಟುನಿಟ್ಟಾದ ಅನುಷ್ಠಾನಕ್ಕೆ ಬದ್ಧವಾಗುವಂತೆ ಮಾಡುವ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ರೂಪಿಸುವ ಬಗ್ಗೆ ವಿಚಾರ ಮಾಡಬೇಕು ಎಂದು ಸಿಪಿಐ(ಎಂ) ಹೇಳಿದೆ. ಅಹಮದಾಬಾದ್‌ನಲ್ಲಿ, ಇನ್ನೂ ಅನೇಕ ಸಾವುನೋವುಗಳು ಸಂಭವಿಸುವ ಸಾಧ್ಯತೆಗಳಿದ್ದವು. ಅದೃಷ್ಟವಶಾತ್ ದೊಡ್ಡ ವೈದ್ಯಕೀಯ ಸೌಲಭ್ಯಗಳು ಬಹಳ ಹತ್ತಿರದಲ್ಲೇ ಲಭ್ಯವಿದ್ದುದರಿಂದ ಹಾಗಾಗಲಿಲ್ಲ. ಭವಿಷ್ಯದಲ್ಲಿ ಇಂತಹ ಅಪಘಾತಗಳು ಸಂಭವಿಸದಂತೆ ದೃಢವಾದ ಕ್ರಮಗಳು ಬೇಕಾಗುತ್ತವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

➘ ನಡಿಗೆ, ಗಾಜಾದಲ್ಲಿ ಮುತ್ತಿಗೆಗೆ ಒಳಗಾದವರಿಗೆ ನೀವು ಒಬ್ಬಂಟಿಗಳಲ್ಲ, ಟುನೀಶಿಯಾದಿಂದ ಡಬ್ಲಿನ್‌ವರೆಗೆ, ಕೇಪ್ ಟೌನ್‌ನಿಂದ ಕ್ರಾಕೋವ್‌ವರೆಗೆ, ಜನರು ಗಾಜಾಕ್ಕಾಗಿ ಎದ್ದುನಿಂತು, ಮುತ್ತಿಗೆ ಮತ್ತು ಅನ್ಯಾಯದ ವಿರುದ್ಧ ಸೌಹಾರ್ದದ ಮತ್ತು ಪ್ರತಿಭಟನೆಯ ಹಾದಿಗಳನ್ನು ನಿರ್ಮಿಸುತ್ತಿದ್ದಾರೆ ಎಂಬ ಸಂದೇಶವನ್ನು ನೀಡುತ್ತದೆ ಎಂದು ಸಂಘಟಕರು ಹೇಳುತ್ತಾರೆ.



'ಫ್ರೀಡಂ ಫ್ಲೋಟಿಲ್ಲಾ'

ಮೋದಿಯವರ ಹೊಸ ಸಿದ್ಧಾಂತ: ಅಂತ್ಯವಿಲ್ಲದ ಯುದ್ಧ

ಆಪರೇಷನ್ ಸಿಂಧೂರ್ ನಂತರ, ಮೇ 12 ರಂದು ಸಾರ್ವಜನಿಕ ಭಾಷಣದಲ್ಲಿ ಪ್ರಧಾನಿ ಮೋದಿ ಮೂರು ಮಾರ್ಗಸೂಚಿಗಳನ್ನು ಒಳಗೊಂಡಿರುವ ಹೊಸ ಸಿದ್ಧಾಂತವನ್ನು ರೂಪಿಸಿದರು. ಇವು ದೇಶದ ಕಾರ್ಯವ್ಯೂಹ ಮತ್ತು ಭದ್ರತಾ ನೀತಿಗಳ ಮೇಲೆ ತೀವ್ರತರದಲ್ಲಿ ಗಂಭೀರ ಪರಿಣಾಮಗಳನ್ನು ಬೀರುವುದರಿಂದ ಇವುಗಳನ್ನು ವಿಶ್ಲೇಷಿಸಬೇಕು.

ಇವುಗಳಿಂದಾಗಿ ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯ ಮೇಲೆ ಪ್ರಮುಖ ಪರಿಣಾಮಗಳನ್ನು ಸೂಚಿಸುತ್ತವೆ. ಈ ಎಲ್ಲಾ ಕಾರಣಗಳಿಂದಾಗಿ ನಾವು ಮೋದಿಯವರ ಹೊಸ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳಬೇಕು.

ಗುಪ್ತಚರ ಮತ್ತು ಭಯೋತ್ಪಾದನಾ ನಿಗ್ರಹ ಭದ್ರತಾ ವ್ಯವಸ್ಥೆಗಳನ್ನು ಮೇಲ್ದರ್ಜೆಗೆ ಏರಿಸಲು ಆದ್ಯತೆ ನೀಡಬೇಕು. ಪಹಲ್ಗಾಮ್ ನಲ್ಲಿನ ಗಂಭೀರ ಭದ್ರತಾ ವೈಫಲ್ಯದಿಂದ ಪಾಠ ಕಲಿಯಬೇಕು.

ಪ್ರಕಾಶ್ ಕಾರತ್

ಆಪರೇಷನ್ ಸಿಂಧೂರ್ ನಂತರ, ಮೇ 12 ರಂದು ಸಾರ್ವಜನಿಕ ಭಾಷಣದಲ್ಲಿ ಪ್ರಧಾನಿ ಮೋದಿ ಮೂರು ಮಾರ್ಗಸೂಚಿಗಳನ್ನು ಒಳಗೊಂಡಿರುವ ಹೊಸ ಸಿದ್ಧಾಂತವನ್ನು ರೂಪಿಸಿದರು. ಇವು ದೇಶದ ಕಾರ್ಯವ್ಯೂಹ ಮತ್ತು ಭದ್ರತಾ ನೀತಿಗಳ ಮೇಲೆ ತೀವ್ರತರದಲ್ಲಿ ಗಂಭೀರ ಪರಿಣಾಮಗಳನ್ನು ಬೀರುವುದರಿಂದ ಇವುಗಳನ್ನು ವಿಶ್ಲೇಷಿಸಬೇಕು. ಇವುಗಳಿಂದಾಗಿ ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯ ಮೇಲೆ ಪ್ರಮುಖ ಪರಿಣಾಮಗಳನ್ನು ಸೂಚಿಸುತ್ತವೆ. ಈ ಎಲ್ಲಾ ಕಾರಣಗಳಿಂದಾಗಿ ನಾವು ಮೋದಿಯವರ ಹೊಸ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳಬೇಕು.

ಆ ಮೂರು ಅಂಶಗಳ ಘೋಷಣೆ ಹೀಗಿದೆ:

ಮೊದಲನೆಯದಾಗಿ, ಭಯೋತ್ಪಾದಕ ದಾಳಿ ಇನ್ನು ಮುಂದೆ ನಡೆದರೆ, ಸೂಕ್ತ ಉತ್ತರವನ್ನು ನೀಡಲಾಗುವುದು. ಭಯೋತ್ಪಾದನೆಯ ಬೇರುಗಳು ಹೊರಹೊಮ್ಮುವ ಪ್ರತಿಯೊಂದು ಸ್ಥಳದಲ್ಲೂ ಪ್ರತೀಕಾರದ ಕ್ರಮ ಕೈಗೊಳ್ಳಲಾಗುವುದು.

ಎರಡನೆಯದಾಗಿ, ಭಾರತ ಯಾವುದೇ ಪರಮಾಣು ಬೆದರಿಕೆಯನ್ನು ಅಂದರೆ ಬ್ಲಾಕ್ ಮೇಲ್ ತಂತ್ರವನ್ನು ಎಂದಿಗೂ ಸಹಿಸುವುದಿಲ್ಲ. ಗೊಡ್ಡು ಪರಮಾಣು ಬೆದರಿಕೆ ನೆಪದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಭಯೋತ್ಪಾದಕರ ಅಡಗುತಾಣಗಳ ಮೇಲೆ ಭಾರತ ನಿಖರವಾಗಿ ಮತ್ತು ನಿರ್ಣಾಯಕವಾಗಿ ದಾಳಿ ಮಾಡೇ ತೀರುತ್ತದೆ.

ಮೂರನೆಯದಾಗಿ, ಭಯೋತ್ಪಾದನೆಯನ್ನು ಪ್ರಾಯೋಜಿಸುವ ಸರ್ಕಾರ ಮತ್ತು ಭಯೋತ್ಪಾದನೆಯ ಮಾಸ್ಟರ್ ಮೈಂಡ್ ಗಳ ನಡುವೆ ಭಾರತ ವ್ಯತ್ಯಾಸವನ್ನು ತೋರಿಸುವುದಿಲ್ಲ.

ಈ ಹೊಸ ಸಿದ್ಧಾಂತವನ್ನು ತಮ್ಮ ಭಾಷಣದಲ್ಲಿ ಮೇ 10 ರ ಮಧ್ಯಾಹ್ನದ ವೇಳೆಗೆ, "ನಾವು ಭಯೋತ್ಪಾದನೆಯ ಮೂಲಸೌಕರ್ಯವನ್ನು ದೊಡ್ಡ ಪ್ರಮಾಣದಲ್ಲಿ ನಾಶಪಡಿಸಿದ್ದೇವೆ. ಭಯೋತ್ಪಾದಕರನ್ನು ನಿರ್ಮೂಲನೆ ಮಾಡಲಾಯಿತು. ಪಾಕಿಸ್ತಾನದ ಹೃದಯಭಾಗದಲ್ಲಿ ಸ್ಥಾಪಿಸಲಾದ ಭಯೋತ್ಪಾದಕ ಶಿಬಿರಗಳನ್ನು ನಾವು ನಾಶಪಡಿಸಿದ್ದೇವೆ. ಆದ್ದರಿಂದ, ಪಾಕಿಸ್ತಾನವು ನಮ್ಮ ಗಡಿಯನ್ನು ಸಮೀಪಿಸಿ ಯಾವುದೇ ರೀತಿಯ ಭಯೋತ್ಪಾದಕ ಚಟುವಟಿಕೆಗಳಲ್ಲಿ ಅಥವಾ ಮಿಲಿಟರಿ ಧೈರ್ಯದಲ್ಲಿ ತೊಡಗುವುದಿಲ್ಲ ಎಂದು ಹೇಳಿದಾಗ, ಭಾರತ ಅದನ್ನು ಪರಿಗಣಿಸಿತು" ಎಂದು ಮೋದಿಯವರು ಹೇಳಿದರು. ಅವರು ಮುಂದುವರಿದು ತಮ್ಮ ಭಾಷಣದಲ್ಲಿ "ನಾವು ಪಾಕಿಸ್ತಾನದ ಭಯೋತ್ಪಾದನೆ ಮತ್ತು ಮಿಲಿಟರಿ ಶಿಬಿರಗಳ ವಿರುದ್ಧ ಪ್ರತೀಕಾರದ ಕ್ರಮವನ್ನು ಸದ್ಯಕ್ಕೆ ಮಾತ್ರ ಸ್ಥಗಿತಗೊಳಿಸಿದ್ದೇವೆ."

ಹೊಸ ಜಲಸಂಧಿ ಕಾರ್ಯ ತಂತ್ರ

ಭಾರತವು ಪ್ರತಿಯೊಂದು ಭಯೋತ್ಪಾದಕ ದಾಳಿಯ ವಿರುದ್ಧ ಮಿಲಿಟರಿ ಪ್ರತೀಕಾರ ತೀರಿಸಿಕೊಳ್ಳುತ್ತದೆ ಎಂಬ ಘೋಷಣೆಯು ಭಾರತ ಮಾತ್ರ ಆಯ್ಕೆ ಮಾಡುವ ಸಾಮರ್ಥ್ಯವನ್ನು ಸೀಮಿತಗೊಳಿಸುತ್ತದೆ. ಇದು ಕಾರ್ಯತಂತ್ರದ ಪ್ರತಿಕ್ರಿಯೆಯ ಮೇಲಿನ ಉಪಕ್ರಮವನ್ನು ಭಯೋತ್ಪಾದಕರ ಗುಂಪಿಗೆ ಪರಿಣಾಮಕಾರಿಯಾಗಿ ಹಸ್ತಾಂತರಿಸುತ್ತದೆ. ಯಾವುದೇ ಭಯೋತ್ಪಾದಕರ ಗುಂಪು ಮಿಲಿಟರಿ ಪ್ರತಿಕ್ರಿಯೆಯನ್ನು ಆಹ್ವಾನಿಸಲು ಭಯೋತ್ಪಾದಕ ದಾಳಿಯನ್ನು ನಡೆಸಬಹುದು, ಇದರಿಂದಾಗಿ ಪಾಕಿಸ್ತಾನದೊಂದಿಗೆ ಸಶಸ್ತ್ರ ಸಂಘರ್ಷವನ್ನು ಸಡಿಲಿಸಬಹುದು. "ಭಾರತೀಯ ನೆಲದಲ್ಲಿ ಭವಿಷ್ಯದಲ್ಲಿ ನಡೆಯುವ ಯಾವುದೇ ಭಯೋತ್ಪಾದಕ ದಾಳಿಯನ್ನು ಯುದ್ಧದ ಕೃತ್ಯವೆಂದು ಪರಿಗಣಿಸಲಾಗುತ್ತದೆ ಮತ್ತು ಆಪರೇಷನ್ ಸಿಂದೂರ್ 'ಹೊಸ ಸಾಮಾನ್ಯ' ಎಂಬ ಘೋಷಣೆಗಳು ದೇಶವನ್ನು ಅನಿರ್ದಿಷ್ಟ ಮಟ್ಟದ ಭಯೋತ್ಪಾದನೆಗೆ ತೀವ್ರತರವಾದ ಮಿಲಿಟರಿ ಪ್ರತಿಕ್ರಿಯೆಗೆ ಸಿಲುಕಿಸುತ್ತಿವೆ" ಎಂದು ಪ್ರಸಿದ್ಧ ಭದ್ರತಾ ತಜ್ಞ ಅಜಯ್ ಸಾಹ್ನಿ ಅಭಿಪ್ರಾಯಪಟ್ಟಿದ್ದಾರೆ. (ಫ್ರಂಟ್ ಲೈನ್, ಮೇ 25, 2025)

ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಪಾಕಿಸ್ತಾನವು ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜಕೀಯವಾಗಿ ಮತ್ತು ರಾಜತಾಂತ್ರಿಕವಾಗಿ ಏಕಾಂಗಿಯಾಗಿಲ್ಲ ಎಂಬುದು ಒಂದು ವಾರದ ನಂತರದಲ್ಲಿಯೇ ಸ್ಪಷ್ಟಗೊಂಡಿದೆ. ಪಾಕಿಸ್ತಾನವು ಐಎಂಎಫ್ ಬೇಲ್ ಔಟ್ ನ ಮತ್ತೊಂದು ಕಂತನ್ನು ಪಡೆದಿರುವುದು ಪಾಕಿಸ್ತಾನ ಒಂಟಿಯಾಗಿಲ್ಲ ಎಂಬುದು ಸ್ಪಷ್ಟಗೊಂಡಂತಾಗಿದೆ.

ಪ್ರಧಾನಿ ತರುವಾಯ ಬಿಜೆಪಿಗಾಗಿ ರಾಜಕೀಯ ಅಭಿಯಾನವನ್ನು ಪ್ರಾರಂಭಿಸಿದ್ದಾರೆ ಮತ್ತು ಆಪರೇಷನ್ ಸಿಂದೂರ್ ಇನ್ನೂ ಕೊನೆಗೊಂಡಿಲ್ಲ – ಅದನ್ನು ವಿರಾಮಗೊಳಿಸಲಾಗಿದೆ ಎಂದು ಪದೇ ಪದೇ ಪ್ರತಿಪಾದಿಸಿದ್ದಾರೆ. ಇದರಿಂದ ಒಂದು ಪ್ರಸ್ತುತ ಪ್ರಶ್ನೆ ಉದ್ಭವಿಸುತ್ತದೆ: ಪ್ರಧಾನಿ ಭಾಷಣದಲ್ಲಿ ಹೇಳಿಕೊಂಡಂತೆ, ಪಾಕಿಸ್ತಾನದಲ್ಲಿನ ಭಯೋತ್ಪಾದಕ ಮೂಲಸೌಕರ್ಯ ಮತ್ತು ಭಯೋತ್ಪಾದಕ ಶಿಬಿರಗಳು ನಾಶವಾಗಿವೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪ್ರತಿಧ್ವನಿಸಿದ ಹೇಳಿಕೆ ಹೀಗಿದೆ. ಆಪರೇಷನ್ ಸಿಂದೂರ್ ಒಳಗೊಂಡಿರುವ ಮಿಲಿಟರಿ ದಾಳಿಯ ಭಂಗಿಯನ್ನು



ಕಾಪಾಡಿಕೊಳ್ಳುವ ಅಗತ್ಯವೇನು? ಹೀಗಾಗಿ ಹೊಸ ಸಿದ್ಧಾಂತವು ಅಂತ್ಯವಿಲ್ಲದ ಯುದ್ಧಕ್ಕೆ ಒಂದು ಪಾಕವಿಧಾನವಾಗಿದೆ ಮತ್ತು ಭಾರತದ ಕಾರ್ಯತಂತ್ರವನ್ನು ಬಿಗಿಯಾದ ಜಾಕೆಟ್ ನಲ್ಲಿ ಇರಿಸುತ್ತದೆ.

ಮೋದಿ ಆಡಳಿತಕ್ಕೆ ಹೆಚ್ಚು ಹೆಚ್ಚು ಮುಖ್ಯವಾಗುವುದು ವಾಸ್ತವವಲ್ಲ. ನೋಡುವ ನೋಟ ಮಾತ್ರ, ಭಯೋತ್ಪಾದಕ ಮೂಲಸೌಕರ್ಯಗಳನ್ನು ನಾಶಪಡಿಸಲಾಗಿದೆ ಮತ್ತು ನೂರಕ್ಕೂ ಹೆಚ್ಚು ಭಯೋತ್ಪಾದಕರನ್ನು ಕೊಲ್ಲಲಾಗಿದೆ ಎಂಬ ಬಡಾಯಿಯ ಹೇಳಿಕೆಯು ದೇಶೀಯ ಬಳಕೆಯನ್ನು ಗುರಿಯಾಗಿರಿಸಿಕೊಂಡಂತೆ ತೋರುತ್ತದೆ. ಏಪ್ರಿಲ್ 22 ರ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಬಾಲಕೋಟ್ ದಾಳಿಗಿಂತ ಹೆಚ್ಚಿನ ಮಿಲಿಟರಿ ಪ್ರತಿಕ್ರಿಯೆಯನ್ನು ಪ್ರಾರಂಭಿಸಲಾಗುವುದು ಎಂದು ಸರ್ಕಾರಿ ನಾಯಕರು ಪದೇ ಪದೇ ಹೇಳುತ್ತಿದ್ದರು ಎಂದು ಅನೇಕ ಭದ್ರತಾ ತಜ್ಞರು ಗಮನ ಸೆಳೆದಿದ್ದಾರೆ. ಗುರಿಯಿಟ್ಟ ಒಂಬತ್ತು ಸ್ಥಳಗಳಲ್ಲಿ ಭಯೋತ್ಪಾದಕ ಅಂಶಗಳು ಸುತ್ತುವರೆದಿದ್ದು, ಅವರ ಮಿಲಿಟರಿ ವಿನಾಶಕ್ಕಾಗಿ ಕಾಯುತ್ತಿವೆ ಎಂದು ಊಹಿಸುವುದು ಅಸಂಬದ್ಧ. ಹೆಚ್ಚೆಂದರೆ, ಈ ಕಾರ್ಯಾಚರಣೆಯು ಪಾಕಿಸ್ತಾನದೊಳಗಿನ ಗುರಿಗಳನ್ನು ಹೊಡೆಯಲು ಹಿಂಜರಿಯುವುದಿಲ್ಲ ಎಂಬ ಭಾರತ ಸರ್ಕಾರದ ದೃಢಸಂಕಲ್ಪವನ್ನು ಸೂಚಿಸಿತು.

ಪರಮಾಣು ವಾಸ್ತವ

ಎರಡನೇ ಮಾರ್ಗಸೂಚಿ– ಪಾಕಿಸ್ತಾನದ ಪರಮಾಣು ಬೆದರಿಕೆಗೆ ಅಂದರೆ, ಬ್ಲಾಕ್ ಮೇಲ್ ತಂತ್ರಗಳಿಗೆ ಭಾರತ ಬಲಿಯಾಗುವುದಿಲ್ಲ ಮತ್ತು ಯಾವುದೇ ಪರಮಾಣು ಬೆದರಿಕೆಯ ಹೊರತಾಗಿಯೂ ಭಯೋತ್ಪಾದಕ ಕೇಂದ್ರಗಳ ಮೇಲೆ ಮಿಲಿಟರಿ ದಾಳಿಗಳನ್ನು ಮುಂದುವರಿಸುತ್ತದೆ ಎಂಬುದು ಸಹ ಬೇಜವಾಬ್ದಾರಿಯುತ ವಾಕ್ಚಾತುರ್ಯವಾಗಿದೆ. ಎರಡು ಪರಮಾಣು–ಸಶಸ್ತ್ರ ರಾಷ್ಟ್ರಗಳು ಉಲ್ಬಣಗೊಳ್ಳುವ ಅನಿವಾರ್ಯ ಅಪಾಯದೊಂದಿಗೆ ಮಿಲಿಟರಿ ಸಂಘರ್ಷಕ್ಕೆ ಸಿಲುಕಿದಾಗ, ಇಡೀ ಜಗತ್ತು ಪರಮಾಣು ಶಸ್ತ್ರಾಸ್ತ್ರಗಳನ್ನು ಬಳಸುವ ಬೆದರಿಕೆಯ ಬಗ್ಗೆ ಕಳವಳ ವ್ಯಕ್ತಪಡಿಸುತ್ತದೆ. ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಅವರು ಸಿಂಗಾಪುರದಲ್ಲಿ ತಮ್ಮ ಸಂದರ್ಶನದಲ್ಲಿ ಸಾಂಪ್ರದಾಯಿಕ ಯುದ್ಧಕ್ಕೆ ಪರಮಾಣು ಮಿತಿಗಿಂತ ಕೆಳಗೆ ಸಾಕಷ್ಟು ಸ್ಥಳವಿದೆ ಎಂದು ಹೇಳುವ ಮೂಲಕ ಭಯವನ್ನು ನಿವಾರಿಸಲು ಪ್ರಯತ್ನಿಸಿದರು. ಆದಾಗ್ಯೂ ಉಲ್ಬಣಗೊಳ್ಳುವ ಸುರುಳಿ ಪ್ರಾರಂಭವಾದ ನಂತರ, ಕೆಲವೇ ಗಂಟೆಗಳಲ್ಲಿ ವಿಷಯಗಳು ನಿಯಂತ್ರಣ ತಪ್ಪಬಹುದು ಎಂಬ ಸತ್ಯ ತಿಳಿದಿರಬೇಕು. ಪರಮಾಣು ಬೆದರಿಕೆಗೆ ಒಳಗಾಗದಿರುವ ಬಗ್ಗೆ ಮೋದಿ ಅವರ ಮಾತು ಎರಡೂ ಕಡೆಯವರು ಹಿಂದೆ ಸರಿಯುವಂತೆ ನೋಡಿಕೊಳ್ಳಲು ಅಮೆರಿಕದ ಹಸ್ತಕ್ಷೇಪದಿಂದ ಪ್ರೇರೇಪಿಸಲ್ಪಟ್ಟಿದೆ ಎಂದು ತೋರುತ್ತದೆ. ಅಧ್ಯಕ್ಷ ಟ್ರಂಪ್ ಉತ್ಪ್ರೇಕ್ಷಿತ ಹೇಳಿಕೆಗಳಿಗೆ ಹೆಸರುವಾಸಿಯಾಗಿದ್ದರೂ, ಭಾರತ ಮತ್ತು ಪಾಕಿಸ್ತಾನಿ ಅಧಿಕಾರಿಗಳೊಂದಿಗೆ ಮಾತನಾಡುವಾಗ ಅಮೆರಿಕದ ಕಡೆಯವರು ಮಾಡಿದ ಕ್ರಮಗಳ ನಿಕಟ ಓದುವಿಕೆ ಮತ್ತು ಅಮೇರಿಕನ್ ಮೂಲಗಳ ಸಂಕ್ಷಿಪ್ತ ವಿವರಣೆಗಳು, ಪರಮಾಣು ಪ್ರತಿಕ್ರಿಯೆಯ ಬೆದರಿಕೆಯು ತ್ವರಿತ ಅಮೇರಿಕನ್ ಹಸ್ತಕ್ಷೇಪಕ್ಕೆ ಕಾರಣವಾಯಿತು ಎಂದು ಸೂಚಿಸುತ್ತದೆ.

ಭಯೋತ್ಪಾದನೆಯನ್ನು ಎದುರಿಸಲು ಮಿಲಿಟರಿ ಪ್ರತಿಕ್ರಿಯೆಯನ್ನು ಮಾತ್ರ ಅವಲಂಬಿಸಿರುವ ದೋಷಪೂರಿತ ತಂತ್ರದ ಅಪಾಯವನ್ನು ಇದು ಎತ್ತಿ ತೋರಿಸುತ್ತದೆ.

ಭಾಷಣದಲ್ಲಿ ಹೇಳಲಾದ ಮೂರನೇ ಅಂಶವೆಂದರೆ– ಭಯೋತ್ಪಾದನೆಯನ್ನು ಪ್ರಾಯೋಜಿಸುವ ಸರ್ಕಾರ ಮತ್ತು ಭಯೋತ್ಪಾದನೆಯ ಮಾಸ್ಟರ್ ಮೈಂಡ್ ಗಳ ನಡುವೆ ಭಾರತ ವ್ಯತ್ಯಾಸವನ್ನು ತೋರಿಸುವುದಿಲ್ಲ. ಇದು ಮಿಲಿಟರಿ ಆಯ್ಕೆಯ ಮೇಲಿನ ಏಕ ಆಯಾಮದ ಒತ್ತು ಬಲಪಡಿಸುತ್ತದೆ. ಪಾಕಿಸ್ತಾನಿ ರಾಜ್ಯವು ಉಗ್ರಗಾಮಿ ಇಸ್ಲಾಮಿಕ್ ಸಿದ್ಧಾಂತಗಳಿಂದ ಪ್ರೇರಿತವಾದ ಭಯೋತ್ಪಾದಕ ಗುಂಪುಗಳನ್ನು ಬೆಂಬಲಿಸುತ್ತದೆ ಮತ್ತು ಸಹಾಯ ಮಾಡುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲವಾದರೂ, ಪಾಕಿಸ್ತಾನಿ ರಾಜ್ಯ ಮತ್ತು ಉಗ್ರಗಾಮಿ–ಭಯೋತ್ಪಾದನಾ ಗುಂಪುಗಳ ನಡುವಿನ ವ್ಯತ್ಯಾಸವನ್ನು ಮಸುಕುಗೊಳಿಸುವುದು ಗಂಭೀರ ತಪ್ಪಾಗುತ್ತದೆ.

ಪಾಕಿಸ್ತಾನಿ ರಾಜ್ಯವನ್ನು "ಭಯೋತ್ಪಾದನೆಯ ಮಾಸ್ಟರ್ ಮೈಂಡ್ ಗಳು" ಎಂದು ಟೀಕಿಸುವುದು ಪಾಕಿಸ್ತಾನ ಸರ್ಕಾರದೊಂದಿಗೆ ಯಾವುದೇ ಭವಿಷ್ಯದ ಮಾತುಕತೆಗಳಿಗೆ ಬಾಗಿಲನ್ನು ನಿರ್ಬಂಧಿಸುತ್ತದೆ. ಪಾಕಿಸ್ತಾನದೊಂದಿಗಿನ ಸಮಸ್ಯೆಗಳನ್ನು ದ್ವಿಪಕ್ಷೀಯವಾಗಿ ನಿಭಾಯಿಸಬೇಕು ಎಂಬ ಭಾರತದ ನಿಲುವು ವಿಶ್ವಾಸಾರ್ಹವಾಗಿದ್ದರೆ, ಪ್ರತಿ ಭಯೋತ್ಪಾದಕ ದಾಳಿಗೆ ಪಾಕಿಸ್ತಾನದ ವಿರುದ್ಧ ಬಲವಂತದ ಕ್ರಮವನ್ನು ಪ್ರತಿಪಾದಿಸುವ ಸಿದ್ಧಾಂತವು ಅಂತಹ ನಿಲುವನ್ನೇ ದುರ್ಬಲಗೊಳಿಸುತ್ತದೆ. ಇದು ಕೇವಲ ಬಾಹ್ಯ ಹಸ್ತಕ್ಷೇಪಕ್ಕೆ ದಾರಿ ತೆರೆಯುತ್ತದೆ.


ಬಿಜೆಪಿಯ ಪಕ್ಷಪಾತದ ರಾಜಕೀಯ ಉದ್ದೇಶಗಳಿಗಾಗಿ, ಆಪರೇಷನ್ ಸಿಂಧೂರ್ ಮತ್ತು ರಕ್ಷಣಾ ಪಡೆಗಳು ನಡೆಸಿದ ಮಿಲಿಟರಿ ಕಾರ್ಯಾಚರಣೆಯನ್ನು, ತಮ್ಮ ಕೋಮು ಪ್ರಚೋಧನಾ ಉದ್ದೇಶಗಳ ಪೂರೈಸಲು ಹೇಗೆ ಬಳಸಿಕೊಳ್ಳಲಾಗುತ್ತಿದೆ ಎಂಬುದು, ಪ್ರಧಾನಿ ಮಾಡಿದ ಸಿನಿಕತನದ ಘೋಷಣೆಯು, ಭಯೋತ್ಪಾದನೆಯ ವಿರುದ್ಧದ ಹೋರಾಟವನ್ನು, ತಮ್ಮ ಎಡಬಿಡಂಗಿ ದೇಶೀಯತೆಯನ್ನು ಪ್ರಚೋದಿಸಲು, ಮತ್ತು ಕೋಮು ಬಲವರ್ಧನೆಯ ರಾಜಕೀಯ ಗುರಿಯನ್ನು ಪೂರೈಸಲು ಒಂದು ಅಸ್ತ್ರವಾಗಿ ಬಳಸಲಾಗುತ್ತಿದೆ ಎಂಬ ಅನುಮಾನವನ್ನು ಬಲಪಡಿಸಿದೆ.

ಕಾಶ್ಮೀರಿ ಜನರ ಪ್ರಾಮುಖ್ಯತೆ ಪ್ರಮುಖವಾದದ್ದು

"ಗಡಿಯಾಚೆಗಿನ ಭಯೋತ್ಪಾದನೆ" ಯನ್ನು ಎದುರಿಸುವಲ್ಲಿ ಜಮ್ಮು ಮತ್ತು ಕಾಶ್ಮೀರದ ಜನರನ್ನು ಭಯೋತ್ಪಾದಕ ಹಿಂಸಾಚಾರವನ್ನು ವಿರೋಧಿಸಲು ಹೇಗೆ

ಪುಟ 10 ಕ್ಕೆ

ಭಾರತದ ಜಿಡಿಪಿ ರ್‍ಯಾಂಕಿಂಗ್ ಹಿಂದಿನ ವಾಸ್ತವತೆ



ನಿಲೋತ್ಪಲ ಬಸು

ಭಾರತ ಜಗತ್ತಿನ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ ಎಂದು ನೀತಿ ಆಯೋಗದ ಸಿಇಒ ಹೇಳಿದ್ದಾರೆ. ಈ ವಿಚಾರವು ಅಂತಾರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) 2025–26ರ ವಿಶ್ವ ಆರ್ಥಿಕ ಮುನ್ನೋಟವನ್ನು (ವರ್ಲ್ಡ್ ಇಕನಾಮಿಕ್ ಔಟ್‌ಲುಕ್) ಆಧರಿಸಿದೆ ಎಂದು ಒಪ್ಪಿಕೊಳ್ಳುವಷ್ಟಾದರೂ ಸತ್ಯವನ್ನು ಸಿಇಒ ಹೇಳಿದ್ದಾರೆ. ಜಪಾನ್‌ನ 4,186,431 ಶತಕೋಟಿ ಅಮೆರಿಕನ್ ಡಾಲರ್‌ಗಿಂತ ಭಾರತದ ಜಿಡಿಪಿ 4,187.017 ಶತಕೋಟಿ ಡಾಲರ್‌ನಷ್ಟು ಕೂದಲೆಳೆ ಅಂತರದಲ್ಲಿ ಮುಂದಿರಲಿದೆ ಎನ್ನುವುದು ವಿಸ್ತೃತ ಪರಿಶೀಲನೆಗಳಿಂದ ನಮಗೆ ನಿಖರವಾಗಿ ತಿಳಿದುಬಂದಿದೆ. ಸಾಂಕೇತಿಕ ಡಾಲರ್ ಲೆಕ್ಕದಲ್ಲಿ ಹೇಳುವುದಾದರೆ ಭಾರತದ ತಲಾ ಆದಾಯವು ಡಾಲರುಗಳಲ್ಲಿ ಜಪಾನ್‌ನ 13ನೇ ಒಂದು ಭಾಗ ಮಾತ್ರ. ಹಾಗಾಗಿ ಇದು ಸಂಪೂರ್ಣವಾಗಿ ಒಂದು ವಿಭಿನ್ನವಾದ ಪ್ರತಿಪಾದನೆಯಾಗಿದೆ.

ಆದ್ದರಿಂದ, ಮೋದಿ ಸರಕಾರದ ಚಿಂತನ ಚಿಲುಮೆಯ ಬಳಗದಲ್ಲಿ ಉಂಟಾಗಿರುವ ಈ ರೋಮಾಂಚಕತೆಯನ್ನು ಮಡಿಲ ಮಾಧ್ಯಮದ (ಗೋದಿ ಮೀಡಿಯಾ) ಹೊಗಳುಭಟರು ಇನ್ನಷ್ಟು ಉಬ್ಬಿಸಿರುವುದು ವಿಲಕ್ಷಣವಾಗಿ ಕಾಣುತ್ತದೆ. ವಾಸ್ತವವಾಗಿ, ಒಟ್ಟಾರೆ ಜಿಡಿಪಿ ಕುರಿತ ಈ ಬಹುತೇಕ ಗೀಳು ಆಕಸ್ಮಿಕವಾದುದಲ್ಲ. ಇದು ಹಣಕಾಸು–ಕೇಂದ್ರಿತ ನವ ಉದಾರವಾದಿ ಆರ್ಥಿಕ ಮಾದರಿಯ ಒಂದು ಗುಣಲಕ್ಷಣವಾಗಿದೆ. ಜನರ ಪರಿಸ್ಥಿತಿಯನ್ನು ಹಾಗೂ ಅವರ ಜೀವನೋಪಾಯದ ಬಗ್ಗೆ ಬಹಿರಂಗಪಡಿಸುವುದಕ್ಕಿಂತ ಮುಚ್ಚಿಡಲು ಅದು ನೆರವಾಗುತ್ತದೆ. ಜಾಗತಿಕ ಪ್ರವೃತ್ತಿಯ ಭಾಗವಾಗಿದ್ದರೂ ಈ ವಿರೂಪತೆಯು ವಿಶೇಷವಾಗಿ ಭಾರತದಲ್ಲಿ ಎದ್ದು ಕಾಣುತ್ತಿದ್ದು ಜಗತ್ತಿನ ಅತ್ಯಂತ ಅಸದೃಶ ಆರ್ಥಿಕತೆಯೆಂದು ಹೇಳಲಾಗುತ್ತಿದೆ.

ಜಾಗತಿಕ ಅಸಮಾನತೆ ವರದಿ 2022ರ ಪ್ರಕಾರ, ಭಾರತದ ಜನಸಂಖ್ಯೆಯ ಟಾಪ್ 1 ಶೇಕಡದಷ್ಟು ಜನರು ದೇಶದ ಸಂಪತ್ತಿನ ಶೇಕಡ 40ಕ್ಕೂ ಹೆಚ್ಚಿನ ಪಾಲನ್ನು ಹೊಂದಿದ್ದಾರೆ. ತಳಮಟ್ಟದ ಶೇಕಡ 50ರಷ್ಟು ಜನರಲ್ಲಿ ಇರುವುದು ಕೇವಲ ಪ್ರತಿಶತ 3 ಸಂಪತ್ತು. ಆದಾಯ ಅಸಮಾನತೆ ಕೂಡ ಅಷ್ಟೇ ಎದ್ದು ಕಾಣುವಂಥದ್ದಾಗಿದೆ. ಟಾಪ್ ಶೇಕಡ 10ರಷ್ಟು ಜನರು ರಾಷ್ಟ್ರೀಯ ಆದಾಯದ ಶೇ. 57ರಷ್ಟನ್ನು ಗಳಿಸುತ್ತಾರೆ. ಈ ಹಿನ್ನೆಲೆಯಲ್ಲಿ, ಒಟ್ಟಾರೆ ಜಿಡಿಪಿ ಮತ್ತು ತಲಾ ಆದಾಯ ಕುರಿತ ಗೀಳು ತಪ್ಪು ದಾರಿಗೆ ಎಳೆಯುವ ಲೆಕ್ಕಾಚಾರ ಮಾತ್ರವಲ್ಲದೆ ಕಾರ್ಪೊರೇಟ್–ಕೋಮುವಾದಿ ನಂಟು ಅನುಸರಿಸುತ್ತಿರುವ ಕ್ರೌರ್ಯದ ಕುರಿತ ಗಮನವನ್ನು ಬೇರೆಡೆ ಸೆಳೆಯುವ ಉದ್ದೇಶಪೂರ್ವಕ ನಿರೂಪಣೆಯಾಗಿದೆ.

ತಳಹದಿ ಸುಸ್ಪಷ್ಟ

ಇದರ ಆಧಾರವೇನೆಂಬುದು ತುಂಬಾ ಸ್ಪಷ್ಟವಾಗಿದೆ. ಬ್ರೆಜಿಲ್‌ನ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಆಲ್‌ಫ್ರೆಡೋ ಸಾದ್‌ಫಿಲ್ಹೋ 2006ರಲ್ಲಿ ಹೇಳಿರುವಂತೆ, ಹಣಕಾಸು ಪ್ರೇರಿತ ನವಉದಾರವಾದಿ ಆಡಳಿತದಲ್ಲಿ 'ಪ್ರಭುತ್ವ ಅಧಿಕಾರದ ಬಳಕೆಯ ಆಧಾರದಲ್ಲಿ ಶೋಷಣೆ ಮತ್ತು ಸಾಮಾಜಿಕ ಹಿಡಿತವಿದೆ. ಮಧ್ಯಪ್ರವೇಶ ಮಾಡುವುದಿಲ್ಲ ಎಂಬ ಸೈದ್ಧಾಂತಿಕ ಪರದೆಯಡಿ ಇದನ್ನು ಮಾಡಲಾಗುತ್ತದೆ. ಪ್ರಭುತ್ವದ ಈ ಯೋಜನೆಯು ಸಾಮಾಜಿಕ ಜೀವನದ ಎಲ್ಲ ಕ್ಷೇತ್ರಗಳನ್ನು ಆವರಿಸಿರುತ್ತದೆ'. ಹಣಕಾಸು ಮಾರುಕಟ್ಟೆಯ ಸರ್ವಾಧಿಕಾರ ಮತ್ತು ಅಮೆರಿಕ ಬಂಡವಾಳದ ಹಿತಾಸಕ್ತಿಯಡಿ ಸರಕು ಮತ್ತು ಸೇವೆಗಳ ಉತ್ಪಾದನೆಯು ಬಂಡವಾಳದ ಪ್ರಧಾನ ಚಟುವಟಿಕೆಯಾಗಿ ಉಳಿದಿಲ್ಲ. ಅದರ ಬದಲಿಗೆ, ಬಂಡವಾಳವನ್ನು ಈಗ ಪ್ರಮುಖವಾಗಿ ಸಟ್ಟಾಬಾಜಿ (ಸ್ಪೆಕ್ಯುಲೇಟಿವ್) ಹಣಕಾಸು ಚಟುವಟಿಕೆಗಳ ಮೂಲಕ ಅಲ್ಪಾವಧಿಯ ಸೂಪರ್–ಲಾಭ ಗಳಿಸಲು ಬಳಸಲಾಗುತ್ತಿದೆ. ಹಣಕಾಸಿನ ಮಧ್ಯಸ್ಥಿಕೆಯಲ್ಲಿ ಆರ್ಥಿಕತೆಯ ಮೂರು ಮುಖ್ಯ ಮೂಲಗಳ ಮೇಲಿನ ನಿಯಂತ್ರಣವು ಅನಿಯಂತ್ರಿತವಾಗಿ ಮುದುವರಿದಿದೆ ಹಾಗೂ ಕೇಂದ್ರೀಕೃತಗೊಂಡಿದೆ. ಪ್ರಭುತ್ವ ಹಣಕಾಸು (ಸ್ಟೇಟ್ ಫೈನಾನ್ಸ್), ದೇಶೀಯ ಉಳಿತಾಯ ಜಾಲ ಮತ್ತು ದೇಶೀಯ ಹಾಗೂ ವಿದೇಶಿ ಬಂಡವಾಳ ನಡುವಿನ ಸಂಪರ್ಕ–ಇವೇ ಆ ಮೂರು ಮೂಲಗಳು.

ದೇಶೀಯ ಉತ್ಪಾದನಾ ಉದ್ಯೋಗಗಳನ್ನು ಪುನಶ್ಚೇತನಗೊಳಿಸುವ ಪ್ರಯತ್ನವಾಗಿ ಟ್ರಂಪ್ ಆಡಳಿತ ಹತಾಶೆಯಿಂದ ಅನುಸರಿಸಿದ ಸುಂಕ ಸಮರದಲ್ಲಿ (ಟ್ಯಾರಿಫ್ ವಾರ್) ಈ ಕ್ರಿಯಾತ್ಮಕತೆಯು ಪ್ರತಿಫಲಿಸುತ್ತದೆ. ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಯ ಆಶ್ರಯದಲ್ಲಿ ಮೊದಲಬಾರಿಗೆ ಹಣಕಾಸಿನ ಜಾಗತಿಕ ಪ್ರಾಬಲ್ಯವನ್ನು ಸ್ಥಾಪಿಸಲಾಗಿತ್ತು ಎನ್ನುವುದು ಪರಿಸ್ಥಿತಿಯ ವ್ಯಂಗ್ಯವಾಗಿದೆ.

ತಳವಿಲ್ಲದ ಪ್ರಪಾತ

ಈ ಶತಮಾನದ ಆರಂಭದ ಹೊತ್ತಿಗೆ, 2000ನೇ ಇಸವಿಯಲ್ಲಿ, ಜಾಗತಿಕ ವಿದೇಶಿ ಸಾಂಸ್ಥಿಕ ಹೂಡಿಕೆ (ಎಫ್‌ಐಐ) 400 ಟ್ರಿಲಿಯನ್ ಡಾಲರ್‌ಗೆ ಏರಿತ್ತು. ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಕೇವಲ 65 ಟ್ರಿಲಿಯನ್ ಆಗಿದ್ದು ಅದಕ್ಕೆ ಹೋಲಿಸಿದರೆ ಎಫ್‌ಐಐ ಅತೀವ ಜಾಸ್ತಿಯಾಗಿತ್ತು. ನೇರ ಹೂಡಿಕೆಯ ಪ್ರತಿ ಡಾಲರ್‌ಗೆ ಪ್ರತಿಯಾಗಿ ಏಳು ಡಾಲರ್‌ಗಳನ್ನು ಸ್ಟಾಕ್ ಮತ್ತು ಡಿರೈವೇಟಿವ್‌ನಂಥ ಸಟ್ಟಾ ಸಾಧನಗಳಲ್ಲಿ ಹೂಡಲಾಗುತ್ತಿತ್ತು. ಅದಾಗಿ ಸುಮಾರು ಕಾಲು ಶತಮಾನದ ನಂತರ, ಹಣದ (ಫೈನಾನ್ಸ್) ಪ್ರಾಬಲ್ಯವು ಇನ್ನೂ ಹೆಚ್ಚಾಗಿದೆ. ಐಎಂಎಫ್‌ನ ಭವಿಷ್ಯದ ಜಿಡಿಪಿ ಅಂಕಿಅಂಶಗಳು ಸಮಕಾಲೀನ ಬಂಡವಾಳದ ಆಂತರಿಕ ಕಾರ್ಯಗಳು (ಇನ್ನರ್ ವರ್ಕಿಂಗ್ಸ್) ಅಥವಾ ದುಡಿಯುವ ವರ್ಗದ ಮೇಲೆ ಅದರ ವಿನಾಶಕಾರಿ ಪರಿಣಾಮಗಳ ವಿಚಾರವಾಗಿ ವಿವರಿಸಲು ಸಫಲವಾಗಿಲ್ಲ.

ಭಾರತದಲ್ಲಿ, ಜನಸಂಖ್ಯೆಯ ಅಗ್ರ ಒಂದು ಶೇಕಡದಷ್ಟು ಜನರು ಒಟ್ಟು ಜಿಡಿಪಿಯ ಶೇ. 40ರಷ್ಟನ್ನು ನಿಯಂತ್ರಿಸುತ್ತಾರೆ. ಸುಮಾರು 140 ಕೋಟಿ ಜನರು ಕೇವಲ ಸುಮಾರು 1,670 ಅಮೆರಿಕನ್ ಡಾಲರ್ ತಲಾ ಆದಾಯ (ಪರ್ ಕ್ಯಾಪಿಟಾ ಇನ್‌ಕಂ) ಹೊಂದಿದಂತಾಯಿತು. ರಾಷ್ಟ್ರದ ಸಂಪತ್ತಿನ 62 ಶೇಕಡವನ್ನು ನಿಯಂತ್ರಿಸುವ ಅಗ್ರ 5 ಶೇಕಡ ಜನರನ್ನು ನಾವು ತೆಗೆದು ಹಾಕಿದರೆ ಸರಾಸರಿಯು ಇನ್ನೂ ಕೆಳಕ್ಕೆ ಹೋಗುತ್ತದೆ; ಸರಾಸರಿ 1,100 ಡಾಲರ್, ಅಂದರೆ ವಾರ್ಷಿಕ 1 ಲಕ್ಷ ರೂಪಾಯಿಗೆ ಕುಸಿಯುತ್ತದೆ. ಇದು ಜನಸಂಖ್ಯೆಯ ಬಹುತೇಕ ಮಂದಿ ಎದುರಿಸುತ್ತಿರುವ ಕರಾಳ ವಾಸ್ತವತೆಗೆ ಹಿಡಿದ ಕನ್ನಡಿಯಾಗಿದೆ.

ವಲಯವಾರು ಜಿಡಿಪಿ ವಿತರಣೆಯಲ್ಲಿನ ಅಸಮತೆಯನ್ನು ಇದು ಇನ್ನಷ್ಟು ಸಂಕೀರ್ಣಗೊಳಿಸುತ್ತದೆ. ಜಿಡಿಪಿಯ ಬಹುತೇಕ ಭಾಗವನ್ನು ಬಂಡವಾಳ–ಪ್ರಧಾನವಾದ (ಕ್ಯಾಪಿಟಲ್ ಇಂಟೆನ್ಸಿವ್) ಸೇವಾ ಕ್ಷೇತ್ರಗಳು ಮತ್ತು ದೊಡ್ಡ ಕಾರ್ಪೊರೇಟ್ ಕಂಪನಿಗಳು ಸೃಷ್ಟಿಸುತ್ತವೆ.

ಈ ನಡುವೆ, ದುಡಿಯುವ ಜನಸಮುದಾಯದ ಗಣನೀಯ ಭಾಗವಾಗಿರುವ, ಅಸಂಘಟಿತ ವಲಯಗಳು ಹಾಗೂ ಕೃಷಿ ವಲಯದಲ್ಲಿ ನಿರತರಾಗಿರುವವರು ಜಿಡಿಪಿಗೆ ತೀರಾ ಅತ್ಯಲ್ಪ ಕೊಡುಗೆ ನೀಡುತ್ತಾರೆ. ಇದರ ಪರಿಣಾಮವಾಗಿ ಬೆಳೆಯುತ್ತಿರುವ ನಿರುದ್ಯೋಗದೊಂದಿಗೆ ಸುಸ್ಥಿರ ಆದಾಯ ಮತ್ತು ಜೀವನೋಪಾಯಗಳಲ್ಲಿ ಬಿಕ್ಕಟ್ಟು ಆಳವಾಗುತ್ತಿದೆ.

ಜಾಗತಿಕವಾಗಿ, ಸಿರಿವಂತರ ಹಿಡಿತ ಹೇಗಿದೆಯೆಂದರೆ, ಶ್ರೀಮಂತರು ತಮ್ಮ ಅನುಕೂಲಕ್ಕಾಗಿ ತೆರಿಗೆ ನೀತಿಗಳು, ನಿಯಂತ್ರಣ ಚೌಕಟ್ಟುಗಳನ್ನು ರೂಪಿಸುತ್ತಾರೆ ಮತ್ತು ಸಾರ್ವಜನಿಕ ಹೂಡಿಕೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಭಾರತದಲ್ಲಿ ಈ ಹಿಡಿತ ಇನ್ನೂ ಜಾಸ್ತಿಯಾಗಿದೆ. ಕ್ರೋನಿ ಬಂಡವಾಳದೊಂದಿಗೆ ಕಾರ್ಪೊರೇಟ್ ಹಿತಾಸಕ್ತಿಗಳ ಹೆಚ್ಚುತ್ತಿರುವ ಹಿಡಿತವು ನೈಸರ್ಗಿಕ ಸಂಪನ್ಮೂಲಗಳ ಸಹಿತ ಸಾರ್ವಜನಿಕ ಆಸ್ತಿಗಳನ್ನು ವ್ಯವಸ್ಥಿತವಾಗಿ ಖಾಸಗಿ ಕೈಗಳಿಗೆ ಹಸ್ತಾಂತರಿಸಲು ಕಾರಣವಾಗುತ್ತಿದೆ. ಕಾರ್ಪೊರೇಟ್‌ಗಳ ಲಾಭವು ಗಗನಮುಖಿಯಾಗಿದ್ದರೆ ರಾಷ್ಟ್ರೀಯ ವರಮಾನದಲ್ಲಿ ಕಾರ್ಮಿಕರ ಪಾಲು ತೀವ್ರವಾಗಿ ಕುಸಿದಿದೆ. ಭಾರತದಲ್ಲಂತೂ ಪರಿಸ್ಥಿತಿ ಇನ್ನೂ ದಯನೀಯವಾಗಿದೆ.

ನೋಟು ಅಮಾನ್ಯೀಕರಣವು (ಡಿಮಾನಿಟೈಸೇಶನ್) ಔಪಚಾರಿಕ ಕ್ಷೇತ್ರಕ್ಕೆ ತೀವ್ರ ಹೊಡೆತ ನೀಡಿದೆ. ಈ ಕ್ಷೇತ್ರವು ಸಮಸ್ಯೆಯ ಹೆಚ್ಚಿನ ಬಿಸಿಯನ್ನು ಅನುಭವಿಸಿದೆ.

ಕೋವಿಡ್–19 ಸಾಂಕ್ರಾಮಿಕತೆ ನಂತರದ ವಿದ್ಯಮಾನವು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದೆ. ಇಂಥ ಸನ್ನಿವೇಶದಲ್ಲಿ ಹೆಚ್ಚುವರಿ ಉದ್ಯೋಗಗಳ ಸೃಷ್ಟಿ ಅಥವಾ ಸುಸ್ಥಿರ ಆದಾಯಗಳನ್ನು ಖಾತರಿಪಡಿಸಲು ಯಾವುದೇ ಅವಕಾಶಗಳಿಲ್ಲ.

ಒಟ್ಟು ಜಿಡಿಪಿಯಲ್ಲಿ ಸಾಂಕೇತಿಕ ಏರಿಕೆಯಿದ್ದರೂ ಸಮೃದ್ಧಿಯ ಹಂಚಿಕೆಗೆ ಅದು ಯಾವುದೇ ಪುರಾವೆ ಒದಗಿಸುವುದಿಲ್ಲ.

ದುಡಿಯುವ ಬಡವರು ಮತ್ತು ನಿರುದ್ಯೋಗಿಗಳು, ಮಧ್ಯಮ ವರ್ಗದ ಜನರು ಕೂಡ ಹೆಚ್ಚು ಸಂಕಷ್ಟಕ್ಕೆ ಗುರಿಯಾಗುತ್ತಿದ್ದಾರೆ. ಅವರು ಹಿಂದುಳಿದಿರುವುದು ಮಾತ್ರವೇ ಅಲ್ಲ, ಪಾತಾಳದತ್ತ ಸರಿಯುವ ಅಪಾಯವನ್ನು ಎದುರಿಸುತ್ತಿದ್ದಾರೆ.

ಪುನರ್ವಿತರಣಾ ನೀತಿಗಳು ತಪ್ಪು ದಾರಿಗೆಳೆಯಲ್ಪಟ್ಟಾಗ

ಮರುವಿತರಣಾ ನೀತಿಗಳ ಗೈರಿನಲ್ಲಿ, ಶ್ರೀಮಂತರು ಸಾರ್ವಜನಿಕ (ಸರ್ಕಾರಿ) ಸೇವೆಗಳನ್ನು ಪಡೆಯುವುದರಿಂದ ಹೊರಗೆ ಇರಬಹುದಾಗಿದೆ. ಅವರು ಖಾಸಗಿ ಶಿಕ್ಷಣ ಸಂಸ್ಥೆಗಳು, ಕಾರ್ಪೊರೇಟ್ ಆಸ್ಪತ್ರೆಗಳು ಮತ್ತು ಗೇಟೆಡ್ ಕಮ್ಯುನಿಟಿಗಳ ಮೇಲೆ ಅವಲಂಬಿಸಬಹುದಾಗಿದೆ. ಇದು ಸಾರ್ವತ್ರಿಕ ಸಾರ್ವಜನಿಕ ವ್ಯವಸ್ಥೆಗಳಲ್ಲಿ ಹೂಡಿಕೆಯ ರಾಜಕೀಯ ಇಚ್ಛಾಶಕ್ತಿಯನ್ನು ದುರ್ಬಲಗೊಳಿಸುತ್ತದೆ. ಮೂಲ ಪೌಷ್ಟಿಕತೆ, ವಸತಿ, ಶಿಕ್ಷಣ ಮತ್ತು ಆರೋಗ್ಯಕಾಳಜಿ ಪಡೆಯಲು ಪರದಾಡುತ್ತಿರುವ 80 ಕೋಟಿ ಭಾರತೀಯರಿಗೆ ಜಿಡಿಪಿ ರ್‍ಯಾಂಕಿಂಗ್‌ಗಳು ಅಪ್ರಸ್ತುತವಾಗುತ್ತದೆ. ಕಾರ್ಪೊರೇಟ್–ಕೋಮುವಾದಿ ಸಖ್ಯವು ಆಕಸ್ಮಿಕವಾದುದಲ್ಲ. ಅದು ಜನರನ್ನು ಅಸ್ಮಿತೆಗಳ ಆಧಾರದಲ್ಲಿ ಒಡೆಯಲು ನೆರವಾಗುತ್ತದೆ ಹಾಗೂ ಅದರಿಂದಾಗಿ ಆಡಳಿತದ ಪ್ರಾಬಲ್ಯ ಮುಂದುವರಿಯುತ್ತದೆ. ಈ ಹಿನ್ನೆಲೆಯಲ್ಲಿ, ಜನರ ಸಂಯುಕ್ತ ಹಾಗೂ ಸಾಮೂಹಿಕ ಹೋರಾಟಗಳು ಮಾತ್ರವೇ ಮುನ್ನಡೆಗೆ ಉಳಿದಿರುವ ಏಕೈಕ ಕಾರ್ಯಸಾಧುವಾಗಿರುವ ದಾರಿಯಾಗಿದೆ.

ಅನು: ವಿಶ್ವ

ಜೂನ್ 17–ಗಾಜಾದಲ್ಲಿ ಇಸ್ರೇಲಿ ನರಮೇಧವನ್ನು ಖಂಡಿಸಿ ರಾಷ್ಟ್ರೀಯ ಪ್ಯಾಲೆಸ್ತೈನ್ ಸೌಹಾರ್ದ ದಿನ

ಐದು ಎಡಪಕ್ಷಗಳ ಕರೆ –ಭಾರತ ಸರಕಾರದ ನಿಲುವಿನಲ್ಲಿ ಬದಲಾವಣೆಗೆ ಆಗ್ರಹ

ಗಾಜಾದಲ್ಲಿ ಪ್ಯಾಲೆಸ್ತೀನಿಯನ್ ಜನತೆಯ ವಿರುದ್ಧ ಇಸ್ರೇಲ್ ಸರ್ಕಾರ ನಡೆಸುತ್ತಿರುವ ನರಮೇಧಕಾರೀ ಯುದ್ಧವನ್ನು ದೇಶದ ಐದು ಎಡಪಕ್ಷಗಳು ಬಲವಾಗಿ ಖಂಡಿಸಿವೆ. ಇಪ್ಪತ್ತು ತಿಂಗಳಿಗೂ ಹೆಚ್ಚು ಸಮಯದಿಂದ ಇಸ್ರೇಲಿನ ಅವಿರತ ಬಾಂಬ್ ದಾಳಿ ಮತ್ತು ಮಿಲಿಟರಿ ಆಕ್ರಮಣವು 55,000 ಕ್ಕೂ ಹೆಚ್ಚು ಪ್ಯಾಲೆಸ್ತೀನಿಯನ್ನರ ಹತ್ಯೆ ಮಾಡಿದೆ – ಅವರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಮಕ್ಕಳು. ಅಗತ್ಯ ಮೂಲರಚನೆಗಳು, ಆಸ್ಪತ್ರೆಗಳು, ಶಾಲೆಗಳು ಮತ್ತು ನಿರಾಶ್ರಿತರ ಆಸರೆಗಳನ್ನು ಉದ್ದೇಶಪೂರ್ವಕವಾಗಿ ಗುರಿಯಾಗಿಸಿಕೊಂಡು ಗಾಜಾದ ಜನರನ್ನು ಅಭೂತಪೂರ್ವ ಮಾನವ ಅನಾಹುತಕ್ಕೆ ತಳ್ಳಲಾಗಿದೆ. ಇದು ನರಮೇಧಕ್ಕಿಂತ ಕಡಿಮೆಯಿಲ್ಲದ ಕೃತ್ಯ. ಅತ್ಯಂತ ಅಮಾನವೀಯ ಸಂಗತಿಯೆಂದರೆ, ಇಸ್ರೇಲ್ ಗಾಜಾಗೆ ಸಹಾಯ ಪ್ರವೇಶಿಸುವುದನ್ನು ಕೂಡ ನಿರಾಕರಿಸುತ್ತಿದೆ ಎಂದು ಐದು ಎಡಪಕ್ಷಗಳ ಪ್ರಧಾನ ಕಾರ್ಯದರ್ಶಿಗಳು ಒಂದು ಜಂಟಿ ಹೇಳಿಕೆಯಲ್ಲಿ ಖೇದ ವ್ಯಕ್ತಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಜೂನ್ 17, 2025 ರಂದು ದೇಶಾದ್ಯಂತ ರಾಷ್ಟ್ರೀಯ ಪ್ಯಾಲೆಸ್ತೈನ್ ಸೌಹಾರ್ದ ದಿನಾಚರಣೆ ನಡೆಸೋಣ ಎಂದು ಡಿ.ರಾಜ, ಪ್ರಧಾನ ಕಾರ್ಯದರ್ಶಿ, ಸಿಪಿಐ, ಎಂ.ಎ.ಬೇಬಿ, ಪ್ರಧಾನ ಕಾರ್ಯದರ್ಶಿ, ಸಿಪಿಐ(ಎಂ), ದೀಪಂಕರ್ ಭಟ್ಟಾಚಾರ್ಯ, ಪ್ರಧಾನ ಕಾರ್ಯದರ್ಶಿ, ಸಿಪಿಐ(ಎಂಎಲ್)–ಲಿಬರೇಷನ್, ಜಿ.ದೇವರಾಜನ್, ಪ್ರಧಾನ ಕಾರ್ಯದರ್ಶಿ, ಎಐಎಫ್‌ಬಿ ಮತ್ತು ಮನೋಜ್ ಭಟ್ಟಾಚಾರ್ಯ, ಪ್ರಧಾನ ಕಾರ್ಯದರ್ಶಿ, ಆರ್‌ಎಸ್‌ಪಿ ಇವರುಗಳು ಸಹಿ ಹಾಕಿರುವ ಜಂಟಿ ಹೇಳಿಕೆ ಎಲ್ಲಾ ಶಾಂತಿಪ್ರಿಯ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳಿಗೆ ಕರೆ ನೀಡಿದೆ.

ಅಂತರರಾಷ್ಟ್ರೀಯ ಜಲಪ್ರದೇಶದಲ್ಲಿ 'ಫ್ರೀಡಂ ಫ್ಲೋಟಿಲ್ಲಾ ಗಾಜಾ'ದ ಮ್ಯಾಡ್ಲೀನ್ ಎಂಬ ಮಾನವೀಯ ನೆರವುಗಳನ್ನು ಹೊತ್ತ ಹಡಗಿನ ಮೇಲೆ ಇಸ್ರೇಲ್ ನಡೆಸಿದ ದಾಳಿಯನ್ನು ಖಂಡಿಸುತ್ತ, ಗಾಜಾಗೆ ಅಡೆತಡೆಯಿಲ್ಲದೆ ಮಾನವೀಯ ನೆರವು ತಲುಪುವುದನ್ನು ಖಚಿತಗೊಳಿಸಲು, ಬಂಧಿತರಾಗಿರುವ ಎಲ್ಲಾ ಅಂತರರಾಷ್ಟ್ರೀಯ ಸ್ವಯಂಸೇವಕರನ್ನು ಬಿಡುಗಡೆ ಮಾಡುವಂತೆ ಭಾರತ ಸರಕಾರ ಒತ್ತಾಯಿಸಬೇಕು ಮತ್ತು ಅಮಾನವೀಯ ಮುತ್ತಿಗೆಯನ್ನು ತಕ್ಷಣವೇ ಕೊನೆಗೊಳಿಸಬೇಕು ಎಂದು ಕರೆ ನೀಡಬೇಕೆಂದು ಎಡಪಕ್ಷಗಳ ಮುಖಂಡರು ಆಗ್ರಹಿಸಿದ್ದಾರೆ.



ವಿಶ್ವಸಂಸ್ಥೆ ಮತ್ತು ಅಂತರರಾಷ್ಟ್ರೀಯ ನ್ಯಾಯಾಲಯ ಸೇರಿದಂತೆ ಜಾಗತಿಕ ಆಕ್ರೋಶ ಹೆಚ್ಚುತ್ತಿದ್ದರೂ ಕೂಡ ನೆತನ್ಯಾಹು ಸರ್ಕಾರ ಯುಎಸ್ ಮತ್ತು ಅದರ ಕೆಲವು ಮಿತ್ರರಾಷ್ಟ್ರಗಳ ಬೆಂಬಲದೊಂದಿಗೆ ನಿರ್ಭಿಡೆಯಿಂದ ತನ್ನ ಪಾಶವೀ ಅಭಿಯಾನವನ್ನು ಮುಂದುವರೆಸಿದೆ. ಅದಾಗಲೇ ನೆಲೆ ಕಳಕೊಂಡ ಲಕ್ಷಾಂತರ ಪ್ಯಾಲೆಸ್ತೀನಿಯನ್ನರನ್ನು ಮತ್ತೊಮ್ಮೆ ನೆಲೆ ಕಳೆದುಕೊಳ್ಳುವಂತೆ ಮಾಡಿರುವ ರಫಾ ಮೇಲಿನ ಇತ್ತೀಚಿನ ದಾಳಿ, ಅಂತರರಾಷ್ಟ್ರೀಯ ಕಾನೂನು, ಮಾನವ ಹಕ್ಕುಗಳು ಮತ್ತು ಮೂಲಭೂತ ಮಾನವೀಯತೆಯ ಬಗ್ಗೆ ಇಸ್ರೇಲ್ ಸರ್ಕಾರದ ಸಂಪೂರ್ಣ ನಿರ್ಲಕ್ಷ್ಯವನ್ನು ತೋರಿಸುತ್ತದೆ ಎಂದಿರುವ ಜಂಟಿ ಹೇಳಿಕೆ, ಫ್ರೀಡಂ ಫ್ಲೋಟಿಲ್ಲಾವನ್ನು ಅಂತರರಾಷ್ಟ್ರೀಯ ಜಲಪ್ರದೇಶದಿಂದ ಅಪಹರಿಸಲಾದ ಇತ್ತೀಚಿನ ಉದಾಹರಣೆಯು ವ್ಯಾಪಕ ಪ್ರತಿಭಟನೆಯನ್ನು ಎಬ್ಬಿಸಿದೆ ಎಂದು ಹೇಳಿದೆ.

ಭಾರತ ಸರಕಾರ, ಐತಿಹಾಸಿಕವಾಗಿ ಭಾರತವು ಬೆಂಬಲಿಸಿಕೊಂಡು ಬಂದಿರುವ ಪ್ಯಾಲೆಸ್ತೀನಿಯನ್ ಧ್ಯೇಯಯೊಂದಿಗೆ ದೃಢವಾಗಿ ನಿಲ್ಲುವ ಬದಲು, ಇಸ್ರೇಲಿ ಆಕ್ರಮಣಕಾರರನ್ನು ಕುರಿತಂತೆ ಹೆಚ್ಚೆಚ್ಚು ಇಬ್ಬಂದಿತನದ ಮತ್ತು ತುಷ್ಟೀಕರಿಸುವ ನಿಲುವನ್ನು ಅಂಗೀಕರಿಸಿರುವುದು ಅತ್ಯಂತ ಕಳವಳಕಾರಿಯಾಗಿದೆ. ಇದು ವಸಾಹತುಶಾಹಿ–ವಿರೋಧಿ ಸೌಹಾರ್ದ ಮತ್ತುರಾಷ್ಟ್ರೀಯ ವಿಮೋಚನಾ ಚಳುವಳಿಗಳಿಗೆ ಬೆಂಬಲದಲ್ಲಿ ಬೇರೂರಿರುವ ಭಾರತದ ದೀರ್ಘಕಾಲೀನ ವಿದೇಶಾಂಗ ಧೋರಣೆಯಲ್ಲಿ ನಾಚಿಕೆಗೇಡಿ ಮಾರ್ಗಚ್ಯುತಿ ಆಗಿರುವುದನ್ನು ಸೂಚಿಸುತ್ತದೆ ಎಂದು ಎಡಪಕ್ಷಗಳು ಹೇಳಿವೆ.

ಈ ನೆಲೆಯಲ್ಲಿ ಜೂನ್ 17, 2025ರಂದು ದೇಶಾದ್ಯಂತ ರಾಷ್ಟ್ರೀಯ ಪ್ಯಾಲೆಸ್ತೈನ್ ಸೌಹಾರ್ದ ದಿನವಾಗಿ ಆಚರಿಸಲು ಎಲ್ಲಾ ಶಾಂತಿಪ್ರಿಯ, ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಶಕ್ತಿಗಳಿಗೆ ಕರೆ ನೀಡುತ್ತ, ಅಂದು ದಿಲ್ಲಿಯಲ್ಲಿ ಬೆಳಿಗ್ಗೆ 11.00 ಗಂಟೆಗೆ ಜಂತರ್ ಮಂತರ್‌ನಲ್ಲಿ ಈ ಮುಂದಿನ ಆಗ್ರಹಗಳೊಂದಿಗೆ ಮತಪ್ರದರ್ಶನ ನಡೆಯಲಿದೆ ಎಂದು ಈ ಐದು ಎಡಪಕ್ಷಗಳ ಪ್ರಧಾನ ಕಾರ್ಯದರ್ಶಿಗಳು ಹೇಳಿದ್ದಾರೆ:

ಇಸ್ರೇಲ್ ಸರ್ಕಾರ ಎಸಗಿರುವ ನರಮೇಧ ಮತ್ತು ಯುದ್ಧ ಅಪರಾಧಗಳಿಗೆ ಖಂಡನೆ

- ರಾಷ್ಟ್ರ, ಘನತೆ ಮತ್ತು ಸ್ವಾತಂತ್ರ್ಯಕ್ಕಾಗಿ ಪ್ಯಾಲೆಸ್ತೈನ್ ಜನತೆಯ ನ್ಯಾಯಯುತ ಹೋರಾಟಕ್ಕೆ ಸೌಹಾರ್ದತೆ
- ಪ್ಯಾಲೆಸ್ತೈನ್ ಧ್ಯೇಯಕ್ಕೆ ನಮ್ಮ ಐತಿಹಾಸಿಕ ಬೆಂಬಲಕ್ಕೆ ಅನುಗುಣವಾಗಿ ಭಾರತ ಸರ್ಕಾರವು ಒಂದು ತತ್ವಬದ್ಧ ನಿಲುವನ್ನು ತಳೆಯಲು ಮತ್ತು ಇಸ್ರೇಲ್‌ನೊಂದಿಗಿನ ಎಲ್ಲಾ ಮಿಲಿಟರಿ ಮತ್ತು ಭದ್ರತಾ ಸಹಕಾರವನ್ನು ತಕ್ಷಣವೇ ನಿಲ್ಲಿಸಲು ಆಗ್ರಹ.

ನರಮೇಧ, ಜನಾಂಗಭೇದ ನೀತಿ ಮತ್ತು ಆಕ್ರಮಣದ ವಿರುದ್ಧ ಭಾರತದ ಜನರ ಧ್ವನಿಯನ್ನು ಎತ್ತಲು ಸೌಹಾರ್ದ ಮತಪ್ರದರ್ಶನದಲ್ಲಿ ವ್ಯಾಪಕವಾಗಿ ಭಾಗವಹಿಸಬೇಕು ಎಂದು ಎಡಪಕ್ಷಗಳ ಜಂಟಿ ಹೇಳಿಕೆ ಕೋರಿದೆ.

ಮೋದಿಯವರ ಹೊಸ ಸಿದ್ಧಾಂತ...... ಪುಟ 8 ರಿಂದ

ಸಜ್ಜುಗೊಳಿಸಲಾಗುತ್ತದೆ ಎಂಬುದು ಪ್ರಮುಖ ವಿಷಯವಾಗಿದೆ. ಪಹಲ್ಗಾಮ್ ಆಕ್ರೋಶವು ಸಾಮಾನ್ಯ ಜನರಿಂದ ವ್ಯಾಪಕ ವಿರೋಧ ಮತ್ತು ಪ್ರತಿಭಟನೆಗಳನ್ನು ಎದುರಿಸಿತು. 370 ನೇ ವಿಧಿಯನ್ನು ರದ್ದುಗೊಳಿಸಿ ರಾಜ್ಯವನ್ನು ಉರುಳಿಸುವ ಮೋದಿ ಸರ್ಕಾರದ ಸರ್ವಾಧಿಕಾರಿ ಕ್ರಮಗಳ ವಿರುದ್ಧ ಬಲವಾದ ಪರಕೀಯತೆ ಮತ್ತು ಕೋಪದ ಭಾವನೆಗಳ ಹೊರತಾಗಿಯೂ ಇದು ಸಂಭವಿಸಿತು. ಜನರ ಭಾಗವಹಿಸುವಿಕೆ ಮತ್ತು ಒಳಗೊಳ್ಳುವಿಕೆ ಇಲ್ಲದೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಯನ್ನು ಎದುರಿಸುವ ಕಾರ್ಯವನ್ನು ಮುಂದುವರಿಸಲು ಸಾಧ್ಯವಿಲ್ಲ. ಇದು ರಾಜ್ಯತ್ವವನ್ನು ಪುನಃಸ್ಥಾಪಿಸುವಂತಹ ಕ್ರಮಗಳ ಮೂಲಕ ಜನರ ವಿಶ್ವಾಸವನ್ನು ಗಳಿಸುವ ಸಾಧ್ಯತೆಯನ್ನು ಸೃಷ್ಟಿಸಿತು. ಆದರೆ ಕೇಂದ್ರ ಸರ್ಕಾರವು ಇದಕ್ಕೆ ವಿರುದ್ಧವಾಗಿ ನಡೆದುಕೊಂಡಿದೆ. ಪಹಲ್ಗಾಮ್ ಹತ್ಯಾಕಾಂಡದ ನಂತರ ಅದು ಹೆಚ್ಚು ದಮನಕಾರಿ ಕ್ರಮಗಳೊಂದಿಗೆ ಕಠಿಣ ಕ್ರಮ ಕೈಗೊಂಡಿತು. ಭಯೋತ್ಪಾದಕರೊಂದಿಗೆ ಶಂಕಿತ ಸಂಪರ್ಕಕ್ಕಾಗಿ ಸಾವಿರಾರು ಜನರನ್ನು ಸುತ್ತುವರೆದು ಬಂಧಿಸಲಾಯಿತು. ಅಲ್ಲಿ ವಾಸಿಸುವ ಕುಟುಂಬಗಳ ಬಗ್ಗೆ ಯಾವುದೇ ಕಾಳಜಿಯಿಲ್ಲದೆ ಉಗ್ರಗಾಮಿಗಳೊಂದಿಗೆ ಸೇರಿಕೊಂಡವರ ಮನೆಗಳನ್ನು ನಾಶಪಡಿಸಲಾಯಿತು. ಇಲ್ಲಿಯೂ ಸಹ, ಮೋದಿಯ ಹೊಸ ಸಿದ್ಧಾಂತವು ಜಮ್ಮು ಮತ್ತು ಕಾಶ್ಮೀರದ ಜನರ ವಿಶ್ವಾಸವನ್ನು ಗಳಿಸಲು ಅತ್ಯಗತ್ಯವಾದ ರಾಜಕೀಯ ಕ್ರಮಗಳನ್ನು ಪರಿಹರಿಸಲು ಸಾಧ್ಯವಾಗಿಲ್ಲ. ಭಯೋತ್ಪಾದನೆಯನ್ನು ಎದುರಿಸಲು ಮುಖ್ಯ ಸಾಧನವಾಗಿ ಪ್ರಸ್ತುತ ರಾಜ್ಯವು ದಮನದ ಆಡಳಿತವನ್ನು ಬಲಪಡಿಸುತ್ತದೆ ಅಷ್ಟೆ. ಇದರಿಂದ ಕಾಶ್ಮೀರ ಜನತೆಯ ವಿಶ್ವಾಸಾರ್ಹತೆ ಗಳಿಸಲು ಸಾಧ್ಯವಿಲ್ಲ.

ಇದು ಗಡಿಯಾಚೆಗಿನ ಭಯೋತ್ಪಾದನೆಯನ್ನು ಎದುರಿಸಲು ಸರಿಯಾದ ಹಾದಿಗೆ ನಮ್ಮನ್ನು ತರುತ್ತದೆ. ಪರಿಸ್ಥಿತಿಯನ್ನು ಅವಲಂಬಿಸಿ ಸರ್ಕಾರವು ರಾಜಕೀಯ, ರಾಜತಾಂತ್ರಿಕ, ಆರ್ಥಿಕ ಮತ್ತು ಭದ್ರತಾ ಕ್ರಮಗಳ ಶ್ರೇಣಿ ಮತ್ತು ಸಂಯೋಜನೆಯನ್ನು ಆಶ್ರಯಿಸಬೇಕು. ಗುಪ್ತಚರ ಮತ್ತು ಭಯೋತ್ಪಾದನಾ ನಿಗ್ರಹ ಭದ್ರತಾ ವ್ಯವಸ್ಥೆಗಳನ್ನು ಮೇಲ್ದರ್ಜೆಗೆ ಏರಿಸಲು ಆದ್ಯತೆ ನೀಡಬೇಕು. ಪಹಲ್ಗಾಮ್ ನಲ್ಲಿನ ಗಂಭೀರ ಭದ್ರತಾ ವೈಫಲ್ಯದಿಂದ ಪಾಠ ಕಲಿಯಬೇಕು.

ಪಾಕಿಸ್ತಾನ ಒಂಟಿಯಾಗಿಲ್ಲ

ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಪಾಕಿಸ್ತಾನವು ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜಕೀಯವಾಗಿ ಮತ್ತು ರಾಜತಾಂತ್ರಿಕವಾಗಿ ಏಕಾಂಗಿಯಾಗಿಲ್ಲ ಎಂಬುದು ಒಂದು ವಾರದ ನಂತರದಲ್ಲಿಯೇ ಸ್ಪಷ್ಟಗೊಂಡಿದೆ. ಪಾಕಿಸ್ತಾನವು ಐಎಂಎಫ್ ಬೇಲ್ ಔಟ್ ಮತ್ತೊಂದು ಕಂತನ್ನು ಪಡೆದಿರುವುದು ಮಾತ್ರವಲ್ಲದೆ, ವಿಶ್ವಬ್ಯಾಂಕ್ ಮತ್ತು ಎಡಿಬಿ ನಿಧಿಗಳನ್ನು ಸಹ ಪಡೆದಿದೆ. ಇದಲ್ಲದೆ, ವಿಶ್ವಸಂಸ್ಥೆಯಲ್ಲಿ ಭಯೋತ್ಪಾದನೆಗೆ ಸಂಬಂಧಿಸಿದ ಮತ್ತು ಭಯೋತ್ಪಾದನಾ ನಿಗ್ರಹ ಸಮಿತಿಗಳಲ್ಲಿ ಸೇವೆ ಸಲ್ಲಿಸಲು ಪಾಕಿಸ್ತಾನವನ್ನು ಆಯ್ಕೆ ಮಾಡಲಾಗಿದೆ.

ಸ್ಪಷ್ಟವಾದ ಸಂಗತಿಯೆಂದರೆ, ದಕ್ಷಿಣ ಏಷ್ಯಾದ ಯಾವುದೇ ನೆರೆಹೊರೆಯವರು ಭಾರತ ನಡೆಸಿದ ಮಿಲಿಟರಿ ಕ್ರಮಕ್ಕೆ ಬೆಂಬಲ ವ್ಯಕ್ತಪಡಿಸಿಲ್ಲ. ನೇಪಾಳ ಮತ್ತು ಶ್ರೀಲಂಕಾದಂತಹ ದೇಶಗಳು ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಬಲವಾಗಿ ಖಂಡಿಸಿದರೂ, ನಾಲ್ಕು ದಿನಗಳ ಭಾರತ–ಪಾಕಿಸ್ತಾನ ಸಂಘರ್ಷದ ಬಗ್ಗೆ ಅವರು ತಟಸ್ಥತೆಯನ್ನು ಸೂಚಿಸಿದರು.

ಭಾರತದ ಏಕಪಕ್ಷೀಯ ಕ್ರಮ–ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸುವುದು. ಶ್ರೀಲಂಕಾದ ಅಧಿಕೃತ ಮತ್ತು ರಾಜಕೀಯ ವಲಯಗಳಲ್ಲಿ ಆತಂಕಗಳನ್ನು ಹುಟ್ಟುಹಾಕಿದೆ. ಇಂಧನ, ಮೂಲಸೌಕರ್ಯ ಮತ್ತು ಇತರ ಕ್ಷೇತ್ರಗಳಲ್ಲಿ ಭಾರತದೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವುದು ಯೋಗ್ಯವಾಗಿದೆಯೇ ಎಂಬ ಪ್ರಶ್ನೆಗಳು ಎದ್ದಿವೆ. ಹೊಸ ಸಿದ್ಧಾಂತವು, ನಿಗದಿಪಡಿಸಿದಂತೆ, ಭಾರತದ ನೆರೆಹೊರೆಯವರಲ್ಲಿ ಮತ್ತಷ್ಟು ಆತಂಕಗಳನ್ನು ಸೃಷ್ಟಿಸುತ್ತದೆ.

ಸಂಕ್ಷಿಪ್ತ ರಾಜಕೀಯ ಅಂಶಗಳು

ಬಿಜೆಪಿಯ ಪಕ್ಷಪಾತದ ರಾಜಕೀಯ ಉದ್ದೇಶಗಳಿಗಾಗಿ, ಆಪರೇಷನ್ ಸಿಂಧೂರ್ ಮತ್ತು ರಕ್ಷಣಾ ಪಡೆಗಳು ನಡೆಸಿದ ಮಿಲಿಟರಿ ಕಾರ್ಯಾಚರಣೆಯನ್ನು, ತಮ್ಮ ಉದ್ದೇಶಗಳ ಪೂರೈಸಲು ಹೇಗೆ ಬಳಸಿಕೊಳ್ಳಲಾಗುತ್ತಿದೆ ಎಂಬುದು, ಪ್ರಧಾನಿ ಮಾಡಿದ ಸಿನಿಕತನದ ಘೋಷಣೆಯಿಂದ ಗೊತ್ತಾಗುತ್ತದೆ. ಭಯೋತ್ಪಾದನೆಯ ವಿರುದ್ಧದ ಹೋರಾಟವನ್ನು ತಮ್ಮ ಎಡಬಿಡಂಗಿ ದೇಶೀಯತೆಯನ್ನು ಪ್ರಚೋದಿಸಲು, ಮತ್ತು ಕೋಮು ಬಲವರ್ಧನೆಯ ರಾಜಕೀಯ ಗುರಿಯನ್ನು ಪೂರೈಸಲು ಒಂದು ಅಸ್ತ್ರವಾಗಿ ಬಳಸಲಾಗುತ್ತಿದೆ ಎಂಬ ಅನುಮಾನವನ್ನು ಬಲಪಡಿಸಿದೆ.

ಹೊಸ ಸಿದ್ಧಾಂತವು ಸಂಕುಚಿತ ರಾಜಕೀಯ ಲಾಭಗಳನ್ನು ಗಳಿಸಲು ದೇಶೀಯ ಬಳಕೆಗೆ ಹೆಚ್ಚು ಉದ್ದೇಶಿಸಿರುವಂತೆ ತೋರುತ್ತದೆ. ಆದರೆ ಇದನ್ನು ಎಂದಾದರೂ ಆಚರಣೆಗೆ ತಂದರೆ ಅದು ಭಾರತದ ಅಭಿವೃದ್ಧಿಯ ಹಾದಿಗೆ ಮತ್ತು ಅದರ ಅಂತರರಾಷ್ಟ್ರೀಯ ಸ್ಥಾನಮಾನಕ್ಕೆ ಸ್ವಯಂ–ಹಾನಿಯನ್ನುಂಟುಮಾಡಿಕೊಳ್ಳುತ್ತದೆ.

ಅನು: ನಾಗರಾಜ ನಂಜುಂಡಯ್ಯ

ವಯಸ್ಸಾದವರಲ್ಲಿ ಹೆಚ್ಚಿನವರಿಗೆ ಪಿಂಚಣಿ ನಿರಾಕರಿಸಲಾಗಿದೆ, ಕೆಲವೇ ಅದೃಷ್ಟವಂತರು ಅದನ್ನು ಪಡೆಯುತ್ತಿದ್ದಾರೆ. ಇತರರಿಗೂ ಆ ಅದೃಷ್ಟವನ್ನು ತರುವುದು ನಮ್ಮ ಕರ್ತವ್ಯವಾಗಿದೆ. ವಯಸ್ಸಾದವರಿಗೆ ಯಾವುದೇ ಬೆಂಬಲ ವ್ಯವಸ್ಥೆ ಇಲ್ಲ ಮತ್ತು ಅವರ ಆರ್ಥಿಕ ಬೇಡಿಕೆಗಳನ್ನು ಭಾವನಾತ್ಮಕವಾಗಿ ಅಳಿಸಲು ಪ್ರಯತ್ನಿಸಲಾಗುತ್ತಿದೆ. ಸಾಯುವ ಮೊದಲೇ ಅವರನ್ನು ಸಾಮಾಜಿಕ ಸಾವಿಗೆ ಗುರಿಪಡಿಸಲಾಗುತ್ತಿದೆ. ಆದ್ದರಿಂದ ಎಪಿಎಲ್/ಬಿಪಿಎಲ್ ವ್ಯತ್ಯಾಸವಿಲ್ಲದೆ ಎಲ್ಲ ವಯಸ್ಸಾದವರಿಗೂ ಕನಿಷ್ಠ ಮಾಸಿಕ ೩,೦೦೦ರೂ., ಬೆಲೆ ಸೂಚ್ಯಂಕ-ಸಂಯೋಜಿತ ಪಿಂಚಣಿ ನಮ್ಮ ಬೇಡಿಕೆಯಾಗಬೇಕು. ಇದು ಹಣಕಾಸಿನ ದೃಷ್ಟಿಯಿಂದ ಕಾರ್ಯಸಾಧ್ಯವಲ್ಲ ಎಂಬ ಸರ್ಕಾರದ ವಾದವು ಸುಳ್ಳು ಮತ್ತು ಟೊಳ್ಳುವಾದ ಎನ್ನುತ್ತಾರೆ. – ಪ್ರೊ.ಆರ್. ರಾಮ್‌ಕುಮಾರ್

ಮುಂಬೈಯ ಟಾಟಾ ಸಾಮಾಜಿಕ ವಿಜ್ಞಾನಗಳ ಸಂಸ್ಥೆ (ಟಿಐಎಸ್‌ಎಸ್)ಯ ಅರ್ಥಶಾಸ್ತ್ರದ ಪ್ರಾಧ್ಯಾಪಕರು.

ಅವರು ಜೂನ್ ೨ರಿಂದ 4 ರವರೆಗೆ ಮೈಸೂರಿನಲ್ಲಿ ನಡೆದ ಅಖಿಲ ಭಾರತ ವಿಮಾ ಪಿಂಚಣಿದಾರರ ಸಂಘ (ಎಐಐಪಿಎ)ದ 9ನೇ ಸಮ್ಮೇಳನವನ್ನು ಉದ್ಘಾಟಿಸುತ್ತ ಈ ಬಗ್ಗೆ ಅಂಕಿ-ಅಂಶಗಳನ್ನು ನೀಡಿದರು. ಅವರ ಭಾಷಣದ ಮುಖ್ಯ ಅಂಶಗಳನ್ನು ಈ ಮುಂದೆ ಕೊಡಲಾಗಿದೆ:

ಸಾರ್ವತ್ರಿಕ ಪಿಂಚಣಿ ನಮ್ಮ ಬೇಡಿಕೆಯಾಗಬೇಕು

ಇಂದು ನಾವು ಎರಡು ಅಂಶಗಳ ಕಾಕ್‌ಟೇಲ್ ಅನ್ನು ನೋಡುತ್ತಿದ್ದೇವೆ. ಒಂದು ಕಡೆ ನವ ಉದಾರವಾದ, ಮಾರುಕಟ್ಟೆ ಪ್ರಾಬಲ್ಯ, ಬಂಟ ಬಂಡವಾಳಶಾಹಿ, ಇನ್ನೊಂದು ಕಡೆ ಕೋಮುವಾದ.

ಇಂದಿನ ಭಾರತವು ಬ್ರಿಟಿಷ್ ಇಂಡಿಯಾದ ಕಾಲಕ್ಕಿಂತಲೂ ಹೆಚ್ಚು ಅಸಮಾನವಾಗಿದೆ. ಭಾರತವು ಅತಿ ಹೆಚ್ಚು ಡಾಲರ್ ಬಿಲಿಯನೇರ್‌ಗಳನ್ನು ಹೊಂದಿದೆ. ಆದಾಗ್ಯೂ, ಭಾರತವು ಕಡಿಮೆ ತಲಾವಾರು ಆದಾಯವನ್ನು ಹೊಂದಿದ್ದು, ತಲಾವಾರು ಆದಾಯದಲ್ಲಿ 196 ದೇಶಗಳಲ್ಲಿ 127ನೇ ಸ್ಥಾನದಲ್ಲಿದೆ. ನಮ್ಮ ಪ್ರಸ್ತುತ ಸರ್ಕಾರ ಹೇಳಿಕೊಳ್ಳುವಂತೆ ನಾವು 2047ರ ವೇಳೆಗೆ ವಿಕಸಿತ ಭಾರತವಾದರೂ, ನಮ್ಮ ಶ್ರೇಣಿ ಸುಮಾರು 90 ಮಾತ್ರ ಇರುತ್ತದೆ. ಭಾರತವು ಅತಿ ಹೆಚ್ಚು ಸಂಖ್ಯೆಯ ಅತಿ ಬಡ ಜನರನ್ನು ಹೊಂದಿದೆ, ಇದು ಇಡೀ ವಿಶ್ವದ ಮೂರನೇ ಒಂದು ಭಾಗವಾಗಿದೆ. ರಂಗರಾಜನ್ ಸಮಿತಿಯ ಪ್ರಕಾರವೂ, 20% ಭಾರತೀಯರು ಅಧಿಕೃತ ಬಡತನ ರೇಖೆಗಿಂತ ಕೆಳಗಿದ್ದಾರೆ.

ನಮ್ಮ ದೇಶದಲ್ಲಿ ತೀವ್ರ ನಿರುದ್ಯೋಗ ಪರಿಸ್ಥಿತಿ ಇದೆ. ನಿರುದ್ಯೋಗ ದತ್ತಾಂಶವು ಕೃಷಿಯಲ್ಲಿ ಮಹಿಳೆಯರ ಸ್ವಯಂ ಉದ್ಯೋಗ ಅಥವಾ ಮನೆಯ ಕೆಲಸಗಳನ್ನು ಮಾಡುವವರನ್ನು ಹೊರತುಪಡಿಸುತ್ತದೆ. ಇದು ಸಂಕಷ್ಟದ ಉದ್ಯೋಗವಾಗಿದ್ದು, ಇದು ಘನತೆಯ ಉದ್ಯೋಗವೂ ಅಲ್ಲ, ಅರ್ಥಪೂರ್ಣವಾಗಿಯೂ ಅಲ್ಲ.

ಕೋವಿಡ್ ಸಮಯದಲ್ಲಿ ಸಾರ್ವಜನಿಕ ವ್ಯವಸ್ಥೆಯ ಸಂಪೂರ್ಣ ಕುಸಿತ ಕಂಡುಬಂದಿದೆ, ಏಕೆಂದರೆ ಸರ್ಕಾರಿ ಮೂಲಗಳು ಕೇವಲ 5 ಲಕ್ಷ ಸಾವುಗಳನ್ನು ಹೇಳಿದವು. ಆದರೆ ವಿಶ್ವ ಬ್ಯಾಂಕ್ 30 ಲಕ್ಷ ಎಂದು ಹೇಳಿದೆ, ನಂತರ ಸರ್ಕಾರ 20 ಲಕ್ಷಕ್ಕೆ ಪರಿಷ್ಕರಿಸಿದೆ. ಈ ಅಂಕಿಅಂಶಗಳನ್ನು ಪ್ರಶ್ನಿಸಿದವರನ್ನು ದೇಶದ್ರೋಹಿಗಳೆಂದು ಕರೆಯಲಾಯಿತು.

ಕೋವಿಡ್ ಸಮಯದಲ್ಲಿ ಜನರು ಅಪಾರ ತೊಂದರೆ ಅನುಭವಿಸಿದರೆ, ಕಾರ್ಪೊರೇಟ್‌ಗಳು ಅತಿ ಹೆಚ್ಚು ಲಾಭ ಗಳಿಸಿದವು. ಅದೇ ರೀತಿ ನೋಟುರದ್ದತಿ, ಜಿಎಸ್‌ಟಿ ಜನರ ಜೀವನವನ್ನು ನಾಶಪಡಿಸಿತು ಮತ್ತು ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಗಾತ್ರದ ದ್ದಿಮೆಗಳನ್ನು ಗಳನ್ನು ನಾಶಪಡಿಸಿತು, ಇದರಿಂದ ಏಕಸ್ವಾಮ್ಯ ಬಂಡವಳಿಗರು ಅತಿ ಹೆಚ್ಚು ಲಾಭ ಗಳಿಸಿದರು.

ವಿಶ್ವವ್ಯಾಪಿ ತೀವ್ರ ಬಲಪಂಥೀಯ ಶಕ್ತಿಗಳ ವಿಪರೀತ ಏರಿಕೆ ಕಂಡುಬರುತ್ತಿದೆ ಮತ್ತು ಭಾರತೀಯ ಆಳುವ ವರ್ಗವು ಅದೇ ವಿಭಜಿಸಿ ಆಳುವ ನೀತಿಯನ್ನು ಅಳವಡಿಸಿಕೊಳ್ಳುತ್ತಿದೆ, ಜನರು ಒಗ್ಗಟ್ಟಾಗಿ ಹೋರಾಡದಂತೆ ನೋಡಿಕೊಳ್ಳಲು ಕಾಲ್ಪನಿಕ ಶತ್ರುಗಳನ್ನು ಹುಡುಕುತ್ತಿದೆ.

ಟ್ರಂಪ್ ಮೆಕ್ಸಿಕೋ ಬಗ್ಗೆ ಹೊಂದಿದ್ದ ನಿಲುವಿನಂತೆಯೇ, ಭಾರತ ಸರ್ಕಾರವೂ ಅತಿ-ರಾಷ್ಟ್ರವಾದವನ್ನು ಆಶ್ರಯಿಸುತ್ತಿದೆ ಮತ್ತು ಒಂದು ರಾಷ್ಟ್ರ, ಒಂದು ಚುನಾವಣೆ, ಮತ್ತು ಎಲ್ಲವೂ ಒಂದೇ ಎಂಬ ರೀತಿಯ ಭೀತಿಯ ಭಾವವನ್ನು ಸೃಷ್ಟಿಸುತ್ತಿದೆ.

ಒಕ್ಕೂಟತತ್ವದ ಮೇಲೆ ಸರಣಿ ದಾಳಿಗಳು, ವೈವಿಧ್ಯತೆಯನ್ನು ನಾಶಪಡಿಸುವುದು, ಭಿನ್ನಾಭಿಪ್ರಾಯ ಹೊಂದಿದವರನ್ನು ಬಂದೂಕು ತೋರಿಸಿ ಮೌನಗೊಳಿಸುವುದು, ED, CBI, IT ಇಲಾಖೆಯನ್ನು ಭಿನ್ನಾಭಿಪ್ರಾಯ ಹೊಂದಿದವರ ವಿರುದ್ಧ ಅಸ್ತ್ರವಾಗಿ ಬಳಸುವುದು ಮುಂತಾದವನ್ನು ಮಾಡಲಾಗುತ್ತಿದೆ.

ಮುಖ್ಯವಾಹಿನಿಯ ಮಾಧ್ಯಮವು ಸಂಪೂರ್ಣವಾಗಿ ಆಳುವವರಿಗೆ ವಿನೀತವಾಗಿದೆ, ಇದಕ್ಕೆ ಇತ್ತೀಚಿನ ಉದಾಹರಣೆಯನ್ನು ಆಪರೇಷನ್ ಸಿಂಧೂರ್ ಸಮಯದಲ್ಲಿ ನಾವು ನೋಡಿದ್ದೇವೆ.

ಮಹಾತ್ಮ ಗಾಂಧಿ ಮತ್ತು ನಮ್ಮ ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರು ರೂಪಿಸಿರುವ ಭಾರತದ ಕಲ್ಪನೆಯನ್ನು ಪುನಃ ಪಡೆದುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ.

ವಯಸ್ಸಾದವರಿಗೆ ಸಕ್ರಿಯ, ಆರೋಗ್ಯವಂತ ಮತ್ತು ಘನತೆಯ ಬದುಕು

ಬಹುಪಾಲು ಜನರಿಗೆ ಪಿಂಚಣಿ ನಿರಾಕರಿಸಿರುವಾಗ, ಕೆಲವೇ ಅದೃಷ್ಟವಂತರು ಅದನ್ನು ಪಡೆಯುತ್ತಿದ್ದಾರೆ. ಇತರರಿಗೂ ಆ ಅದೃಷ್ಟವನ್ನು ತರುವುದು ನಮ್ಮ ಕರ್ತವ್ಯವಾಗಿದೆ.

ಸಮಾಜದ ಪ್ರಗತಿಯಿಂದಾಗಿ, ನಮ್ಮ ಸರಾಸರಿ ಜೀವಿತಾವಧಿ ಹೆಚ್ಚಾಗುತ್ತಿದೆ. 1940 ರ ದಶಕದಲ್ಲಿ ಇದು 40 ವರ್ಷಕ್ಕಿಂತ ಕಡಿಮೆ ಇತ್ತು. ಇಂದು ಇದು 70-72 ವರ್ಷಗಳು, ಕೇರಳದಲ್ಲಿ ಇದು ಈಗ ಸುಮಾರು 80 ವರ್ಷಗಳು. 60+ ವಯಸ್ಸಿನ ಜನರು ಭಾರತೀಯ ಜನಸಂಖ್ಯೆಯ 7 ರಿಂದ ಶೇ.8 ರಷ್ಟಿದ್ದಾರೆ. ಇದು 2047 ರ ವೇಳೆಗೆ ಶೇ.20 ಅಥವಾ ಕನಿಷ್ಠ 34 ಕೋಟಿ ಆಗಲಿದೆ.

ಇದರಿಂದಾಗಿ ಮುಂದಿನ ವರ್ಷಗಳಲ್ಲಿ ನಮ್ಮ ಸವಾಲುಗಳು ಹೆಚ್ಚಾಗಲಿವೆ. ನಾವು ಅದನ್ನು ಎದುರಿಸಲು ಸಿದ್ಧರಿದ್ದೇವೆಯೇ? ಜನಸಂಖ್ಯೆಯ ಪ್ರಯೋಜನವನ್ನು ಪಡೆದುಕೊಳ್ಳಲು ನಾವು ಸಿದ್ಧರಿದ್ದೇವೆಯೇ? ಇಲ್ಲದಿದ್ದರೆ, ಕಾರ್ಮಿಕರ ಕೊರತೆಯನ್ನು ಎದುರಿಸುತ್ತಿರುವ ಕೆನಡಾದಂತಹ ಸಮಸ್ಯೆಯನ್ನು ನಾವು ಎದುರಿಸುತ್ತೇವೆ.

ನಮ್ಮ ಸ್ಥಿತಿ ಇನ್ನಷ್ಟು ಕೆಟ್ಟದಾಗಿರುತ್ತದೆ, ಏಕೆಂದರೆ ಇತರ ದೇಶಗಳು ಶ್ರೀಮಂತರಾಗುವಾಗ ಈ ಪರಿಸ್ಥಿತಿಯನ್ನು ಎದುರಿಸಿದವು, ಆದರೆ ಭಾರತೀಯರು ಬಡತನದಿಂದ ಹೊರಬರದೆ ವೃದ್ಧರಾಗುತ್ತಾರೆ. ಉತ್ಪಾದನೆ ಮತ್ತು ತೆರಿಗೆಯ ಮೂಲಕ ಈ ಬದಲಾವಣೆಯ ಮಟ್ಟದಲ್ಲಿನ ಇಳಿಕೆಯನ್ನು ನಾವು ಎದುರಿಸಬೇಕು.

IMF/ವಿಶ್ವ ಬ್ಯಾಂಕ್ ವಯಸ್ಸಾದವರಿಗೆ ಸಕ್ರಿಯ, ಆರೋಗ್ಯವಂತ ಮತ್ತು ಘನತೆಯ ಬದುಕು ಸಿಗಬೇಕು ಎಂದು ಪ್ರತಿಪಾದಿಸುತ್ತವೆ. ವಯಸ್ಸಾದ ಜನರಿಗೆ ಮೂರು ಅಗತ್ಯಗಳು ಸಿಗುತ್ತಿಲ್ಲ.

ವಯಸ್ಸಾದ ಶೇ.75ರಷ್ಟು ಜನರು ಅನಾರೋಗ್ಯದಿಂದ ಬಳಲುತ್ತಿದ್ದಾರೆ, ಶೇ.65 ಹಣದ ಕೊರತೆಯಿಂದ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುತ್ತಿಲ್ಲ, ಶೇ.68ರಷ್ಟು ಆಹಾರದ ಕೊರತೆಯಿಂದ ಬಳಲುತ್ತಿದ್ದಾರೆ, ಶೇ.32 ಕಡಿಮೆ ತೂಕವನ್ನು ಹೊಂದಿದ್ದಾರೆ, ಶೇ.40 ಮನೆಯಲ್ಲಿ ಅವಮಾನವನ್ನು ಎದುರಿಸುತ್ತಾರೆ, ಸುಮಾರು 15,000 ರಿಂದ 18,000 ಜನರು ಪ್ರತಿ ವರ್ಷ ಬೆಂಬಲ ವ್ಯವಸ್ಥೆಯ ಕೊರತೆಯಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ವಯಸ್ಸಾದ ಶೇ.40ರಷ್ಟು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ. ಶೇ.70ರಷ್ಟು ಜನರ ಆದಾಯ ಬಹಳ ಕಡಿಮೆ ಇದೆ. ಶೇ.28ರಷ್ಟು ಜನರು ಯಾವುದೇ ಉಳಿತಾಯವನ್ನು ಹೊಂದಿಲ್ಲ. ಶೇ.20ರಷ್ಟು ಜನರು ಭಾಗಶಃ ಸಂಪಾದಿಸುತ್ತಿದ್ದಾರೆ ಮತ್ತು ಶೇ.14ರಷ್ಟು ಜನರು ಬದುಕಲು ಸಂಪೂರ್ಣವಾಗಿ ಇತರರನ್ನು ಅವಲಂಬಿಸಿದ್ದಾರೆ.

ವಯಸ್ಸಾದವರಿಗೆ ಯಾವುದೇ ಬೆಂಬಲ ವ್ಯವಸ್ಥೆ ಇಲ್ಲ ಮತ್ತು ಅವರ ಆರ್ಥಿಕ ಬೇಡಿಕೆಗಳನ್ನು ಭಾವನಾತ್ಮಕವಾಗಿ ಅಳಿಸಲು ಪ್ರಯತ್ನಿಸಲಾಗುತ್ತಿದೆ. ಇದು ಭಾರತೀಯ ಸಂವಿಧಾನದ 41 ನೇ ವಿಧಿಯನ್ನು ಉಲ್ಲಂಘಿಸುತ್ತದೆ.

ವಯಸ್ಸಾದ ಶೇ.52ರಷ್ಟು ಮಹಿಳೆಯರು ವಿಧವೆಯರಾಗಿದ್ದು, ಯಾವುದೇ ಆದಾಯ ಅಥವಾ ಉಳಿತಾಯವಿಲ್ಲದೆ, ಅವರಲ್ಲಿ ಹೆಚ್ಚಿನವರು ಗೃಹಿಣಿಯರಾಗಿದ್ದಾರೆ, ಪ್ರಭುತ್ವದ ಬೆಂಬಲವಿಲ್ಲದೆ ಅವರು ಹೇಗೆ ಬದುಕಬಲ್ಲರು?

ಸಾರ್ವತ್ರಿಕ ಪಿಂಚಣಿ ಸಾಧ್ಯವಿದೆ

ಪಿಂಚಣಿಯ ಇತಿಹಾಸವನ್ನು 19ನೇ ಶತಮಾನದ ಉತ್ತರಾರ್ಧದಲ್ಲಿ ಜರ್ಮನಿಯಲ್ಲಿ ಬಿಸ್ಮಾರ್ಕ್ ಪ್ರಾರಂಭಿಸಿದರು. ಇಂಗ್ಲೆಂಡ್‌ನಲ್ಲಿ, ವಿಲಿಯಂ ಬೆವೆರೇಜ್ ವರದಿಯು ಎಲ್ಲರಿಗೂ ಸಾಮಾಜಿಕ ಭದ್ರತೆಯನ್ನು ಶಿಫಾರಸು ಮಾಡಿದೆ, ಬಡತನ ರೇಖೆಗಿಂತ ಕೆಳಗಿನವರು/ಬಡತನ ರೇಖೆಗಿಂತ ಮೇಲಿನವರು ಎಂದು ಭೇದವಿಲ್ಲದೆ, ತೊಟ್ಟಿಲಿನಿಂದ ಸಮಾಧಿಯ ವರೆಗೆ. ಕೆಲವು ದೇಶಗಳು ಅಂತ್ಯಕ್ರಿಯೆಯ ವೆಚ್ಚಗಳನ್ನೂ ಸಹ ಒದಗಿಸುತ್ತವೆ.



ಆರೋಗ್ಯ ರಕ್ಷಣೆಯ ಖಾಸಗೀಕರಣವು ಜನರ ಸುಲಿಗೆಯಾಗಿದೆ. ಯುರೋಪಿಯನ್ ಯೂನಿಯನ್ ಮತ್ತು ಜಪಾನ್‌ನ ಹೆಚ್ಚಿನ ದೇಶಗಳು ಎಲ್ಲರಿಗೂ ಪಿಂಚಣಿ ನೀಡುತ್ತವೆ.

ಸ್ವೀಡನ್ ತಿಂಗಳಿಗೆ 1.2 ಲಕ್ಷ, ಡೆನ್ಮಾರ್ಕ್ ತಿಂಗಳಿಗೆ 1.1 ಲಕ್ಷ, ಜಪಾನ್ ತಿಂಗಳಿಗೆ 35,000, ಕೆನಡಾ ತಿಂಗಳಿಗೆ 30,000 ಅವರ ಕರೆನ್ಸಿಗಳಲ್ಲಿ ಪಾವತಿಸುತ್ತದೆ. ಇಲ್ಲಿ APL/BPL ಭೇದವಿಲ್ಲ, ಏಕೆಂದರೆ ಅವರು ಶ್ರೀಮಂತರಿಗೆ ತೆರಿಗೆ ವಿಧಿಸಿ ಬಡವರಿಗೆ ಪಾವತಿಸುತ್ತಾರೆ.

ಇದು ನಿರ್ದಿಷ್ಟವಾಗಿ ಗುರುತಿಸುವ ವಿಭಾಗಕ್ಕೆ ಮಾತ್ರ ಸೀಮಿತವಾದ ಯೋಜನೆಯಲ್ಲ, ಬದಲಿಗೆ ಸಾರ್ವತ್ರಿಕ ಪಿಂಚಣಿ ಯೋಜನೆಯಾಗಿದೆ, ಆದ್ದರಿಂದ ಇದು ಕಡಿಮೆ ವೆಚ್ಚದಾಯಕವಾಗಿದೆ, ಹೆಚ್ಚು ಪರಿಣಾಮಕಾರಿಯಾಗಿದೆ.

ನವ ಉದಾರವಾದದ ಸಿದ್ಧಾಂತವು ಸಾರ್ವಜನಿಕ ಕಲ್ಯಾಣ ಪ್ರಭುತ್ವದ ಕೆಲಸವಲ್ಲ ಎಂದು ಪ್ರತಿಪಾದಿಸುತ್ತದೆ. ವಯಸ್ಸಾದ ಜನರನ್ನು ಭಾರವೆಂದು ಪರಿಗಣಿಸುವ ಸಿದ್ಧಾಂತದ ಹಿಂದೆ ಇದು ಇದೆ. ಅವರು ಸಾಯುವ ಮೊದಲೇ ಅವರ ಸಾಮಾಜಿಕ ಸಾವಿಗೆ ಅವಕಾಶ ನೀಡುವ ಒಂದು ವಿಧಾನ ಇದು.

ಸಾರ್ವತ್ರಿಕ ಪಿಂಚಣಿ ನಮ್ಮ ಬೇಡಿಕೆ-ಇದು ಕನಿಷ್ಠ ತಿಂಗಳಿಗೆ 3000 ರೂ., ಇರಬೇಕು ಮತ್ತು ಇದನ್ನು ಹಣದುಬ್ಬರಕ್ಕೆ ಅನುಗುಣವಾಗಿ ಹೊಂದಿಸಬೇಕು.

ರಾಷ್ಟ್ರೀಯ ಸಾಮಾಜಿಕ ಭದ್ರತಾ ನೀತಿಯ ಅಡಿಯಲ್ಲಿ ಸರ್ಕಾರವು ತಿಂಗಳಿಗೆ 200 ರೂ. ಗಳನ್ನು ನೀಡುತ್ತದೆ, ಅಂದರೆ ಬಿಪಿಎಲ್ ಹಿರಿಯ ನಾಗರಿಕರಿಗೆ ಕೊಡಮಾಡುವ ಹಣ ಸುಮಾರು ಸೊನ್ನೆಯೇ. ಇದು ಹಣಕಾಸಿನ ದೃಷ್ಟಿಯಿಂದ ಕಾರ್ಯಸಾಧ್ಯವಲ್ಲ ಎಂಬ ಸರ್ಕಾರದವಾದವು ಸುಳ್ಳು ಮತ್ತು ಇದು ಟೊಳ್ಳುವಾದ. ನಮ್ಮ ಬೇಡಿಕೆಯನ್ನು ಒಪ್ಪಿಕೊಳ್ಳಲು, ವರ್ಷಕ್ಕೆ ಕೇವಲ 4.6 ಲಕ್ಷ ಕೋಟಿ ರೂ. ಅಗತ್ಯವಿದೆ, ಇದು ನಮ್ಮ ಜಿಡಿಪಿಯ ಶೇ.1.5 ಆಗಿದೆ. ಸಮಸ್ಯೆ ಹಣಕಾಸಿನದಲ್ಲ, ರಾಜಕೀಯ ಇಚ್ಛಾಶಕ್ತಿಯ ಕೊರತೆಯದ್ದು ಎಂಬುದು ಸ್ಪಷ್ಟವಾಗಿದೆ.

ಪ್ರೊ.ಪ್ರಭಾತ್ ಪಟ್ನಾಯಕ್ ಮತ್ತು ಪ್ರೊ.ಜಯತಿ ಘೋಷ್ ಅವರು ಶೇ.0.01 ಸೂಪರ್ ಶ್ರೀಮಂತರ ಮೇಲೆ ಶೇ.2 ಸಂಪತ್ತು ತೆರಿಗೆ ಮತ್ತು ಶೇ.33 ಉತ್ತರಾಧಿಕಾರ ತೆರಿಗೆ ವಿಧಿಸುವುದರ ಮೂಲಕ ಸರ್ಕಾರವು ಸುಮಾರು 12 ಲಕ್ಷ ಕೋಟಿ ರೂ. ಗಳನ್ನು ಪಡೆಯಬಹುದು ಎಂದು ಲೆಕ್ಕ ಹಾಕಿದ್ದಾರೆ. ಮುಂದುವರಿದ ಬಂಡವಾಳಶಾಹಿ ದೇಶಗಳು ಇಂತಹ ತೆರಿಗೆಗಳನ್ನು ವಿಧಿಸಬಹುದಾದರೆ, ಭಾರತದಂತಹ ಬಡ ದೇಶಕ್ಕೆ ಏಕೆ ಸಾಧ್ಯವಿಲ್ಲ?

ಪುಟ 14 ಕ್ಕೆ

ಸೈನ್ಯದೊಳಗೆ ಪ್ರಜಾಪ್ರಭುತ್ವ: ಸೈನಿಕರೇ ಆರಿಸಿಕೊಂಡ............

ಪುಟ 2 ರಿಂದ

ಅಂದು ಜಗತ್ತಿನಲ್ಲೆಲ್ಲೂ ಅಸ್ತಿತ್ವದಲ್ಲಿಲ್ಲದ, ಪ್ರಜಾಪ್ರಭುತ್ವದ ಮೂಲಭೂತ ಸಾಂವಿಧಾನಿಕ ವಿಷಯಗಳ ಬಗ್ಗೆ ಸೈನಿಕರ ಒತ್ತಾಯದಿಂದ ಚರ್ಚೆ ನಡೆಯಿತು ಎಂಬುದೇ ಬಹಳ ವಿಶಿಷ್ಟ ಸಂಗತಿ. ವಾರಗಟ್ಟಲೇ ಈ ವೈಚಾರಿಕ ಸಂಘರ್ಷ, ವರ್ಗ ಸಂಘರ್ಷ ನಡೆಯಿತು. (ಅದರ ವಿವರಗಳು ಮುಂದಿನ ಸಂಚಿಕೆಯಲ್ಲಿ.)

ರಾಜನ ವಿಚಾರಣೆ ಮತ್ತು ಮರಣ ದಂಡನೆ:

ಈ ಚರ್ಚೆಗಳು ನಡೆಯುತ್ತಿರುವ ಸಮಯದಲ್ಲಿಯೇ ಬಂಧನದಲ್ಲಿದ್ದ ರಾಜ ತಪ್ಪಿಸಿಕೊಂಡ. ಇದನ್ನು ಕ್ರೋಮ್‌ವೆಲ್ ಸ್ವತಃ ಹೂಡಿದ ತಂತ್ರ ಎಂಬ ಅಭಿಪ್ರಾಯವೂ ಇದೆ. ಏಕೆಂದರೆ ಆ ವೇಳೆಗೆ ರಾಜ ಸೋತು ಸುಣ್ಣವಾಗಿದ್ದರೂ ತನ್ನನ್ನು ಸೋಲಿಸಿದವರು ಮೂರು ವಿಭಾಗವಾಗಿದ್ದರಲ್ಲ, ಅವರನ್ನು ಒಬ್ಬರ ಮೇಲೆ ಒಬ್ಬರನ್ನು ಎತ್ತಿಕಟ್ಟಿ ತಾನು ಮತ್ತೆ ಎಂದಿನಂತೆ ನಿರಂಕುಶ ಪ್ರಭುತ್ವ ನಡೆಸಲು ಸಂಚುಗಳನ್ನು ರೂಪಿಸುತ್ತಿದ್ದ. ಆದ್ದರಿಂದ ಕ್ರೋಮ್‌ವೆಲ್ ಮತ್ತು ಗ್ರಾಂಡಿಗಳು ರಾಜನ ಜೊತೆ ತಮ್ಮದೇ ರಾಜಿ ಮಾಡಿಕೊಳ್ಳುವ ಆಸೆಯನ್ನು ಕಳೆದುಕೊಂಡಿದ್ದರು. ರಾಜನನ್ನು ಉಳಿಸಿಕೊಂಡು, ಯಾವುದಕ್ಕಾಗಿ ಯುದ್ಧ ಮಾಡಿ ಗಳಿಸಿಕೊಂಡದ್ದನ್ನೆಲ್ಲ ಕಳೆದುಕೊಳ್ಳಲು ಸಿದ್ಧರಿರಲಿಲ್ಲ.

ಹೇಗೇ ಇರಲಿ, ಕ್ರೋಮ್‌ವೆಲ್ ಇದನ್ನು ಎರಡು ರೀತಿ ಬಳಸಿಕೊಂಡ. ಒಂದು ಕಡೆ ಇದನ್ನು ಬಳಸಿ ಸೈನ್ಯದಲ್ಲಿ ತಮ್ಮಬಗ್ಗೆ ಮೂಡಿದ್ದ ಅಪನಂಬುಗೆಯನ್ನು ನಿವಾರಿಸಿ ಸೈನಿಕರ ಮೇಲೆ ತನ್ನ ಹಿಡಿತವನ್ನು ಮರಳಿ ಸ್ಥಾಪಿಸುವುದು, ಲೆವೆಲರ್ಸ್‌ಗಳ ಪ್ರಭಾವವನ್ನು ಕುಗ್ಗಿಸುವುದು. ಮತ್ತೊಂದು ಕಡೆ ಈ ಹಿಡಿತವನ್ನು ಬಳಸಿಕೊಂಡು ಪಾರ್ಲಿಮೆಂಟ್ ಒಳಗಿನ ತನ್ನ ವಿರೋಧಿಗಳನ್ನು ಹಣಿಯುವುದು.

ರಾಜನನ್ನು ಮತ್ತೆ ಬಂಧಿಸಲಾಯಿತು. ಪಾರ್ಲಿಮೆಂಟಿನಲ್ಲಿ ಬಹುಮತ ಹೊಂದಿದ್ದ ರಾಜ ಪ್ರಭುತ್ವಪರರು ಮತ್ತೆ ರಾಜನ ಜೊತೆಗೆ ರಾಜಿ ಮಾತುಕತೆ ಆರಂಭಿಸಿದರು. ಕ್ರೋಮ್‌ವೆಲ್ ಮತ್ತು ಸೈನ್ಯ ರಾಜಧಾನಿಯಿಂದ ದೂರ ಇದ್ದ ಸಮಯದಲ್ಲಿ ರಾಜ, ರಾಜಿಯ ಬಗ್ಗೆ ಇಟ್ಟಿದ್ದ ಪ್ರಸ್ತಾವವನ್ನು ಒಪ್ಪಿಕೊಳ್ಳಲು ಪಾರ್ಲಿಮೆಂಟಿನಲ್ಲಿ ನಿರ್ಣಯ ಪಾಸುಮಾಡಿಕೊಂಡರು. ಹೀಗೆ ಬಹಳ ಸರಳವಾಗಿ ಯುದ್ಧ, ಸಾವು ನೋವುಗಳನ್ನೆಲ್ಲ ಮಣ್ಣುಗೂಡಿಸುವ ಪ್ರತಿಕ್ರಾಂತಿ ಮಾಡಲು ಸಿದ್ಧರಾಗಿಯೇ ಬಿಟ್ಟರು.

ಇದನ್ನು ಅರಿತ ಕೂಡಲೇ ತನ್ನ ಹಿಡಿತವನ್ನು ಮತ್ತೆ ಸ್ಥಾಪಿಸಿದ ಸೈನ್ಯದೊಂದಿಗೆ ಪಾರ್ಲಿಮೆಂಟಿನ ಕಡೆಗೆ ಧಾವಿಸಿದ ಕ್ರೋಮ್‌ವೆಲ್ ಮತ್ತು ಗ್ರಾಂಡಿಗಳ ನೇತೃತ್ವದ ಸೈನ್ಯ, ಸೈನ್ಯದ ವಿರುದ್ಧ ಹಾಗೂ ರಾಜನನ್ನು ಉಳಿಸಿಕೊಳ್ಳುವುದರ ಪರ ಇದ್ದ 140 ಪಾರ್ಲಿಮೆಂಟ್ ಸದಸ್ಯರನ್ನು ಬಂಧಿಸಿದರು. ಇದು ಹಲವು ತಿಂಗಳ ಹಿಂದೆಯೇ ಲೆವಲರ್ಸ್‌ಗಳ ಒತ್ತಾಯವಾಗಿತ್ತು. ಈ ಬಂಧನದ ಫಲವಾಗಿ ಕ್ರೋಮ್‌ವೆಲ್ ಪರ ಇದ್ದವರು ಈಗ ಬಹುಮತ ಪಡೆದರು. ರಾಜನನ್ನು ವಿಚಾರಣೆಗಾಗಿಯೇ ಒಂದು ವಿಶೇಷ ಕಾಯಿದೆ ಅಂಗೀಕರಿಸಿ ಅದರಂತೆ ವಿಚಾರಣೆ ನಡೆಸಿದರು. ಆಗ ಪಾರ್ಲಿಮೆಂಟ್‌ನಲ್ಲಿ ಉಳಿದಿದ್ದ 135 ಸದಸ್ಯರಲ್ಲಿ ಕೇವಲ 59 ಸದಸ್ಯರು ಮಾತ್ರ ಈ ಸಹಿ ಮಾಡಿದರೂ ಕೂಡಾ ರಾಜನನ್ನು ಬಹು ದೊಡ್ಡ ಸಂಖ್ಯೆಯ ಜನರ ಮುಂದೆ ಬಹಿರಂಗವಾಗಿ ತಲೆ ಕತ್ತರಿಸಿ ವಧಿಸಲಾಯಿತು.

ರಾಜನ ವಿಚಾರಣೆ ಮತ್ತು ಶಿಕ್ಷೆ ಕೂಡಾ ಲೆವಲರ್ಸ್ ಮಾಡಿದ್ದ ಆದರೆ ಕ್ರೋಮ್‌ವೆಲ್ ಮತ್ತು ಗ್ರಾಂಡಿಗಳು ಬಹುವಾಗಿ ವಿರೋಧಿಸಿದ್ದ ಪ್ರಸ್ತಾವ. ಅದನ್ನು ಕ್ರೋಮ್‌ವೆಲ್ ಮತ್ತು ಸಂಗಡಿಗರು ಈ ರೀತಿ ಜಾರಿಗೆ ತಂದು ತಮ್ಮ ಕೈ ಮೇಲಾಗಿಸಿಕೊಂಡರು. ಕ್ರೋಮ್‌ವೆಲ್ ಬ್ರಿಟನ್‌ನ ಸರ್ವಾಧಿಕಾರಿಯಾಗಿ ಆಡಳಿತ ನಡೆಸಿದನು.

ಪಾರ್ಲಿಮೆಂಟ್‌ನ 140 ಜನರನ್ನು ಬಂಧಿಸಿ ಕ್ರೋಮ್‌ವೆಲ್ ಗುಂಪು ಬಹುಮತ ಪಡೆದುಕೊಂಡ ಕ್ಷಣದಿಂದ ಕ್ರೋಮ್‌ವೆಲ್‌ಗೆ ಲೆವಲರ್ಸ್‌ಗಳ ಬೆಂಬಲದ ಅಗತ್ಯ ಬೀಳಲಿಲ್ಲ.

ಮುಂದೆ ಏನಾಯಿತು, ಪ್ರಜಾಪ್ರಭುತ್ವದ ಬಗ್ಗೆ ಲೆವಲರ್ಸ್‌ಗಳ ವಿಚಾರಗಳು ಏನಾದವು? ಲೆವಲರ್ಸ್‌ಗಳು ಏನಾದರು? ಮುಂದಿನ ಸಂಚಿಕೆಯಲ್ಲಿ.

ಕೇಂದ್ರ ಸರ್ಕಾರದ ಕೆಟ್ಟ ಆಮದು ನೀತಿಗಳಿಂದಾಗಿ ಭಾರತದ ರೈತರು ಸಂಕಷ್ಟಕ್ಕೆ....

ಪುಟ 5 ರಿಂದ

ಇದರಿಂದ ಭಾರತದ ಯಾವ ಕೃಷಿ ಉತ್ಪನ್ನಗಳು ವಿದೇಶಿ ಮಾರುಕಟ್ಟೆಯಲ್ಲಿ ಸ್ಥಾನಪಡೆಯದಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಈಗಾಗಲೇ ಅಡಿಕೆ ಹಾಳೆಯ ಜೊತೆ ಭಾರತದ ಮಾವಿನ ಹಣ್ಣುಗಳನ್ನು ಅಮೇರಿಕಾ ತಿರಸ್ಕರಿಸಿದೆ.

ನಮ್ಮ ದೇಶಕ್ಕೆ ಆಮದಾಗುವ ಎಲ್ಲಾ ವಸ್ತುಗಳ ಮೇಲೆ 300 ರಷ್ಟು ಆಮದು ಸುಂಕವನ್ನು ವಿದಿಸುವ ಎಲ್ಲಾ ಅವಕಾಶಗಳು ಜಾಗತಿಕ ಒಪ್ಪಂದದಲ್ಲಿ ಇದ್ದರೂ ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಈ ಅವಕಾಶವನ್ನು ಬಳಸಿ ಭಾರತದ ರೈತರನ್ನು ರಕ್ಷಿಸಲು ಮುಂದಾಗುತ್ತಿಲ್ಲ. ಬದಲಿಗೆ ವಿದೇಶಿಯರಿಗೆ ಅನುಕೂಲವಾಗುವಂತಹ ಆಮದು ನೀತಿಗಳನ್ನೇ ಮುಂದುವರೆಸುತ್ತಿದ್ದಾರೆ ಎಂದರು.

ಮತ್ತೋರ್ವ ಮುಖ್ಯ ಅತಿಥಿಗಳಾದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ. ಯಶವಂತರವರು ಮಾತನಾಡಿ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಈ ಆಮದು ನೀತಿಗಳು ಇನ್ನು ಮುಂದೆ ಅತ್ಯಂತ ಅಪಾಯಕಾರಿ ಸನ್ನಿವೇಶವನ್ನು ನಿರ್ಮಾಣಮಾಡುತ್ತವೆ. ಇವುಗಳ ಬಗ್ಗೆ ಜಾಗೃತಿ ಮೂಡಿಸಿಕೊಂಡು ರೈತ ಸಮುದಾಯ ಎಚ್ಚೆತ್ತುಕೊಂಡು ಚಳುವಳಿ ರೂಪಿಸುವುದೊಂದೇ ಪರಿಹಾರ ಎಂದರು.

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪ್ರಾಂತ ರೈತ ರೈತ ಸಂಘದ ಅಧ್ಯಕ್ಷರಾದ ಯು. ಬಸವರಾಜು ಮಾತನಾಡುತ್ತಾ ಈ ಕೆಳಗಿನ ನಿರ್ಣಯಗಳನ್ನು ಮಂಡಿಸಿದರು.

1) ಟ್ರಂಪ್ ಒತ್ತಡಕ್ಕೆ ಮಣಿದು ಭಾರತ ಸರಕಾರ, ಅನಗತ್ಯ ಕೃಷಿ ಉತ್ಪನ್ನಗಳು, ಹೈನೋದ್ಯಮ, ಕುರಿ ಹಾಗು ಕೋಳಿ ಸಾಕಾಣಿಕೆ ಮತ್ತು ಮೀನುಗಾರಿಕೆ, ಮುಂತಾದ ಉಪಕಸುಬುಗಳ ಉತ್ಪನ್ನಗಳ ಆಮದು ಸುಂಕ ಕಡಿತ ಮಾಡಬಾರದು ಮತ್ತು ಆಮದು ಮಾಡಬಾರದು.

2) ಪ್ಯಾಲೆಸ್ತೈನ್ ದೇಶ ಕಬಳಿಕೆಗೆ ಅಮೇರಿಕಾ ಬೆಂಬಲಿತ ಇಸ್ರೇಲ್ ಯುದ್ಧಕೋರ ನೀತಿಗೆ ಖಂಡನೆ ಮತ್ತು ಪ್ಯಾಲೆಸ್ತೈನಿಯರ ಮಾರಣ ಹೋಮ ತಡೆಯಲು ವಿಶ್ವ ಸಮುದಾಯ ಇಸ್ರೇಲ್ ಮೇಲೆ ಒತ್ತಡ ಹೇರುವಂತೆ ಕರೆ. ಭಾರತ ಸರಕಾರವು ಕೂಡಾ ತನ್ನ ಈಗಿನ ಇಸ್ರೇಲ್ ಯುದ್ಧಕೋರ ನೀತಿಗೆ ಬೆಂಬಲ ನೀಡುವ ಮೆದು ಧೋರಣೆ ವಾಪಾಸು ಪಡೆದು ಸ್ವತಂತ್ರ ಪ್ಯಾಲೆಸ್ತೈನ್ ಪರ ನಿಲ್ಲುವಂತೆ ಆಗ್ರಹ

3) ಅಮೇರಿಕಾದ ಆರ್ಥಿಕ ದಿಗ್ಬಂದನದಲ್ಲಿರುವ ಸಮಾಜವಾದಿ ಕ್ಯೂಬಾಗೆ ಸೌಹಾರ್ಧತೆಗೆ ಬೆಂಬಲ ಮತ್ತು ನಿಧಿ ಸಂಗ್ರಹ

4) ಮಾವು ಬೆಂಬಲ ಬೆಲೆ 15 ರೂ ನಿಗದಿಸಿ ಖರೀದಿಸಲು ಮತ್ತು ತಲಾ ಎಕರೆಗೆ 50,000 ರೂ ನಷ್ಟ ಪರಿಹಾರ ಒದಗಿಸಲು ರಾಜ್ಯ ಸರಕಾರ ಕ್ರಮವಹಿಸುವಂತೆ ಆಗ್ರಹ

ವೇದಿಕೆಯಲ್ಲಿ ಕೆಪಿಆರ್‌ಎಸ್ ಜಿಲ್ಲಾ ಸಂಚಾಲಕರಾದ ಎನ್.ಎಲ್ ಭರತ್‌ರಾಜ್, ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಪುಟ್ಟಮಾದು, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಹ ಸಂಚಾಲಕರಾದ ಎನ್ ಲಿಂಗರಾಜಮೂರ್ತಿ, ಮಹಾದೇವು, ಪ್ರಮೀಳಾ, ಅಬ್ದುಲ್ ಸುಕೂರ್, ವಿಶ್ವನಾಥ್, ಮುಂತಾದವರು ಉಪಸ್ಥಿತರಿದ್ದರು.

ನಾಟಕ ವಿಮರ್ಶೆ–ಸಮಕಾಲೀನ....

ಪುಟ 16 ರಿಂದ

ಗಳಿಸಿದ ಧೈರ್ಯ ಹಾಗೂ ದಕ್ಕಿದ ಅಜರಾಮತ್ವದ ವರದಿಂದ ಮನುಷ್ಯನಾದವನು ಮಾಡಲೇ ಬಾರದ ಕೃತ್ಯಗಳನ್ನು ಮಾಡಿದೆನೆಂದು ಹೇಳುತ್ತಾ ಇದಕ್ಕೆ ಶಿಕ್ಷೆ ತನಗುಂಟೇ ಎಂದು ಪ್ರಶ್ನಿಸುತ್ತಾನೆ.

ನರ್ಸ್ ಮತ್ತು ಡಾಕ್ಟರು ಪ್ರೇಕ್ಷಕರನ್ನುದ್ದೇಶಿಸಿ ನಿಮ್ಮಲ್ಲಿ ಕೆಲವರ ಒಳಗಾದರೂ ಅಶ್ವತ್ಥಾಮ ಇರಲೇಬೇಕಲ್ಲವೇ? ಶಕುನಿ ಇರಬೇಕಲ್ಲವೇ, ಕೃಷ್ಣ ಇರಬೇಕಲ್ಲವೇ ಎಂದು ಪ್ರಶ್ನಿಸುವುದರೊಂದಿಗೆ ನಾಟಕ ಕೊನೆಯಾಗುತ್ತದೆ.

ಮೂರು ಪಾತ್ರಗಳನ್ನು ರಂಗದಲ್ಲಿರಿಸಿ, ಮಹಾಭಾರತ ಕಥೆಯಲ್ಲಿ ಕಂಡುಬರುವ ಕ್ರೌರ್ಯ, ಹಿಂಸೆ, ಯುದ್ಧದ ಭೀಕರತೆಯನ್ನೂ, ಸಾವಿನ ಅನಿವಾರ್ಯತೆಯನ್ನು ಅರಿತೂ ಮನುಷ್ಯ ತಾನು ಚಿರಂಜೀವಿ ಎಂದು ಭ್ರಮಿಸಿ ಲೋಕಕಂಟಕನಾಗುವುದನ್ನು ನಾಟಕವು ಹೇಳುವ ಪ್ರಯತ್ನ ಮಾಡುತ್ತದೆ. ಸಂಪತ್ತಿನ ಗಳಿಕೆ, ಆ ಮೂಲಕ ಅಧಿಕಾರ ಪಡೆಯುವ ಮಂದಿ, ಅವರೊಂದಿಗೆ ಒಡನಾಟದ ಸಾಮೀಪ್ಯ ಹೊಂದಿ ತಮ್ಮ ತಮ್ಮ ಕುಟುಂಬದ ಲಾಭ ಪಡೆಯುವ ಇನ್ನಷ್ಟು ಮಂದಿ, ಪ್ರಭುತ್ವದ ಊಳಿಗದವನಾಗಿದ್ದರೂ ಪ್ರಭುವಿಗೆ ಮೆಚ್ಚುಗೆಯಾಗಬಹುದೆಂದು ಯಾವ ಕ್ರೂರ ಅಮಾನುಷ ಕೃತ್ಯಕ್ಕೂ ಮುಂದಾಗುವ ಮತ್ತಷ್ಟು ಮಂದಿ, ನ್ಯಾಯ ವ್ಯವಸ್ಥೆಯನ್ನೇ ಅರ್ಥಹೀನಗೊಳಿಸುವ ಪ್ರಭುತ್ವದ ಭಯೋತ್ಪಾದನೆ ಇವೆಲ್ಲ ಒಂದೆಡೆ ಸಾರ್ವಕಾಲಿಕ ಸತ್ಯವನ್ನು ತೋರಿಸುವಂತೆ ರಂಗ ಪ್ರದರ್ಶನದಲ್ಲಿ ಮೂಡಿ ಬರುವುದರ ಜೊತೆಗೇ ಸಮಕಾಲೀನ ಭಾರತದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನೆನಪಿಸುತ್ತಾ ಸದ್ಯದ ಭಾರತದ ಬಗ್ಗೆ ಒಂದು ರಾಜಕೀಯ ಅರಿವನ್ನು ಉಂಟುಮಾಡುವ ಗಂಭೀರ ಕೆಲಸವನ್ನು ಮಾಡುತ್ತದೆ.


ಇಡೀ ನಾಟಕದ ರಚನೆಯು ತರ್ಕ ಪ್ರಧಾನವಾಗಿದೆ. ಕರಾವಳಿಯ ಯಕ್ಷಗಾನದ ಪ್ರದರ್ಶನಗಳಲ್ಲಿ ತರ್ಕವನ್ನು ಒಳಗೊಂಡ ವಾಚಿಕಾಭಿನಯವಿದೆ. ಯಕ್ಷಗಾನದ ಪ್ರೇಕ್ಷಕ ಅಂಥ ಸಂದರ್ಭದಲ್ಲಿ ರಂಗದಲ್ಲಿ ಮಾತು ಆಡುವ ನಟನನ್ನೇ ಕೇಂದ್ರೀಕರಿಸಿ ಆತನ ಮಾತು, ನಟನೆಯನ್ನು ವೀಕ್ಷಿಸುತ್ತಿರುತ್ತಾನೆ. ಆ ಸಂದರ್ಭದಲ್ಲಿ ಪ್ರೇಕ್ಷಕನ ವೀಕ್ಷಣೆ ಆ ನಟನನ್ನು ಹೊರತುಪಡಿಸಿ ರಂಗದಲ್ಲಿರುವ ಬೇರೆ ನಟರ ಕಡೆಗೆ ಅಷ್ಟಾಗಿ ಇರುವುದಿಲ್ಲ. ತರ್ಕಪ್ರಧಾನವಾದ ಈ ರಂಗ ಪ್ರದರ್ಶನವು ಕರಾವಳಿಯ ನಾಟಕಾಸಕ್ತರಿಗೆ ಒಂದು ಯಕ್ಷಗಾನ ಆಟದಂತೆ ಕಂಡಿದ್ದಿರಬಹುದು ಎನಿಸುತ್ತದೆ. ಪರಿಣತ ಮುಮ್ಮೇಳದ ಕಲಾವಿದರು ಯಕ್ಷಗಾನವನ್ನು ಮನೋಹರವಾಗಿ ಪ್ರದರ್ಶಿಸುವುದನ್ನು ನಾವು ನೋಡಿದ್ದೇವೆ. ಆ ಛಾಪಿನಲ್ಲಿ ಈ ನಾಟಕವೂ ಮನಸೆಳೆದಿದೆ ಎಂಬುದರಲ್ಲಿ ಅನುಮಾನವಿಲ್ಲ.

ಜಿಲ್ಲೆಯ ಪರಿಣತ ನಟರಾದ ಚಂದ್ರಹಾಸ ಉಳ್ಳಾಲ (ಅಶ್ವತ್ಥಾಮ/ ರೋಗಿ/ನ್ಯಾಯಾಧೀಶ), ಪ್ರಭಾಕರ ಕಾಪಿಕಾಡ್ (ಶಕುನಿ/ನರ್ಸ್/ನ್ಯಾಯವಾದಿ), ಇವರ ಜೊತೆಗೆ ಸರಿಮಿಗಿಲೆನಿಸಿ ಡಾ.ದಿನೇಶ್ ನಾಯಕ್ (ಕೃಷ್ಣ / ಡಾಕ್ಟರ್ / ನ್ಯಾಯವಾದಿ) ಅವರುಗಳು ಅತ್ಯುತ್ತಮ ನಟನೆ ತೋರಿದ್ದರಿಂದ ಈ ರಂಗ ಪ್ರದರ್ಶನವನ್ನು ಗೆಲ್ಲಿಸುವುದು ಸಾಧ್ಯವಾಗಿದೆ.

ಪ್ರದರ್ಶನದಲ್ಲಿ ಬೆಳಕು, ಸಂಗೀತ, ರಂಗ ಪರಿಕರ ಯಾವತ್ತೂ ಪೂರಕ ಪಾತ್ರ ವಹಿಸುವವೇ ಆಗಿವೆ. ಪುರಾಣ ಕಾಲದಿಂದ ಆಧುನಿಕ ಕಾಲದವರೆಗೆ ಜೋತಾಡುವ ಈ ನಾಟಕ ಪ್ರದರ್ಶನದಲ್ಲಿ ರಂಗಸಂಗೀತವು ಜಾನಪದ, ಯಕ್ಷಗಾನದಿಂದ ಆಧುನಿಕ ಪಾಶ್ಚಾತ್ಯ ಸಂಗೀತದವರೆಗೂ ಓಲಾಡುತ್ತಿತ್ತು. ಸರಳ ಆದರೆ ಅರ್ಥಪೂರ್ಣ ರಂಗ ಪರಿಕರ ಮೆಚ್ಚುವಂತಿತ್ತು. ಆದರೂ ಎಷ್ಟೆಲ್ಲಾ ತಾಂತ್ರಿಕ ಸಾಮಗ್ರಿಗಳನ್ನು, ಪರಿಕರಗಳನ್ನು ಬಳಸಿದರೂ ನಾಟಕ ಗೆಲ್ಲಬೇಕಾದರೆ ನಟನ ವಾಚಿಕಾಭಿನಯ, ದೇಹಭಾಷೆಯ ಬಳಕೆ, ರಂಗ ಚಲನೆಯ ಖಚಿತತೆ ಇರಲೇ ಬೇಕೆಂಬುದನ್ನು ಅಶ್ವತ್ಥಾಮ ನಾಟ್‌ಔಟ್ ನಾಟಕ ಶ್ರುತಪಡಿಸಿದೆ.

ಸಮಕಾಲೀನ ದೇಶದ ವಿದ್ಯಮಾನಗಳನ್ನು ನಾಟಕ ರಚನೆ ಹಾಗೂ ರಂಗ ಪ್ರದರ್ಶನದ ಮೂಲಕ ಅರ್ಥೈಸಬೇಕೆಂಬ ಪ್ರಯತ್ನವನ್ನು ಹಿರಿಯ ನಿರ್ದೇಶಕ ಮೋಹನಚಂದ್ರ ಅವರು ಕಳೆದ ನಾಲ್ಕಾರು ವರ್ಷಗಳಿಂದ ಮಾಡುತ್ತಿದ್ದಾರೆ. ಐತಿಹ್ಯವನ್ನೋ, ಇತಿಹಾಸವನ್ನೋ, ಪುರಾಣ ವನ್ನೋ ಕೃತಿಯ ನೆಲಗಟ್ಟಾಗಿಸಿ ಅಲ್ಲಿಂದ ಸಮಕಾಲೀನತೆಗೆ ಜೋಕಾಲಿಯಾಡುವ ಪ್ರಯತ್ನ ಅವರ ತಿರುಕನ ಕನಸು, ಕನಕ ಪುರಂದರ ನಾಟಕ ಕೃತಿಗಳಲ್ಲಿ ನಡೆದಿದ್ದು, ಅದರ ಬಳಿಕದ ಪ್ರಯತ್ನವಾಗಿ ಅಶ್ವತ್ಥಾಮ ನಾಟ್‌ಔಟ್ ಮೂಡಿ ಬಂದಿದೆ. ಬೆರಗುಗೊಳಿಸುವುದರೊಂದಿಗೆ ಚಿಂತನೆಗೆ ಹಚ್ಚುವ ನಾಟಕ ಪ್ರದರ್ಶನ ನೀಡಿದ ಮೋಹನಚಂದ್ರರಿಗೆ ಭೇಷ್ ಎನ್ನಲೇಬೇಕು.

ಯಾಂತ್ರೀಕರಣ ಮತ್ತು ನಿರುದ್ಯೋಗ
ಬಂಡವಾಳಶಾಹಿಯ ಬಗ್ಗೆ ಈಗಲೂ ಇರುವ ಒಂದು ಮಿಥ್ಯೆ





ಯಂತ್ರೋಪಕರಣಗಳ ಬಳಕೆಯು ತಕ್ಷಣವೇ ನಿರುದ್ಯೋಗಕ್ಕೆ ಕಾರಣವಾಗುತ್ತದೆಯಾದರೂ, ಕಾಲಕ್ರಮದಲ್ಲಿ ಅದು ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸುತ್ತದೆ. ಆದ್ದರಿಂದ ಭಾರತದಂತಹ ಜಾಗತಿಕ ದಕ್ಷಿಣದ ದೇಶಗಳು ಲಂಗುಲಗಾಮಿಲ್ಲದ ಬಂಡವಾಳಶಾಹಿಯನ್ನು ಅನುಸರಿಸುವುದರಿಂದ ತಮ್ಮ ನಿರುದ್ಯೋಗ ಮತ್ತು ಬಡತನವನ್ನು ನಿವಾರಿಸಬಹುದು ಎಂದು ವಿಶ್ವ ಬ್ಯಾಂಕ್, ಐಎಂಎಫ್ ಮತ್ತು ಇತರ ಏಜೆನ್ಸಿಗಳು ಹೇಳುತ್ತವೆ ಮತ್ತು ಈ ಹೇಳಿಕೆಗೆ ಬೆಂಬಲವಾಗಿ ಪಶ್ಚಿಮ ಯುರೋಪಿನ ಉದಾಹರಣೆಯನ್ನು ಕೊಡುತ್ತವೆ. ಅದನ್ನು ವೇದವಾಕ್ಯವೆಂದು ಒಪ್ಪಿಕೊಳ್ಳಲಾಗಿದೆ. ಆದರೆ, ಇದು ಬಂಡವಾಳಶಾಹಿಯ ಸಿದ್ಧಾಂತ ಮತ್ತು ಅದರ ಇತಿಹಾಸ ಇವೆರಡರದ್ದೂ ಪೂರಾ ತಪ್ಪು ವ್ಯಾಖ್ಯಾನ. ಪುನಃ ಹರಡಿಸುತ್ತಿರುವ ಬಂಡವಾಳಶಾಹಿಯ ಕುರಿತ ಇನ್ನೂರು ವರ್ಷಗಳಷ್ಟು ಹಳೆಯದಾದ ಇಂತಹ ಮಿಥ್ಯೆಗಳನ್ನು ನಾವು ಎಷ್ಟು ಬೇಗ ತೊರೆಯುತ್ತೇವೆಯೋ ಅಷ್ಟೂ ಒಳ್ಳೆಯದು.

ಪ್ರೊ.ಪ್ರಭಾತ್ ಪಟ್ನಾಯಕ್ ಅನು:ಕೆ.ಎಂ.ನಾಗರಾಜ್

ಬಂಡವಾಳಶಾಹಿಯ ಬಗ್ಗೆ ಅರ್ಥಶಾಸ್ತ್ರಜ್ಞರು ಹೆಣೆದಿರುವ ಅನೇಕ ತಪ್ಪು ಕಲ್ಪನೆಗಳಿವೆ. ಇವುಗಳ ಪೈಕಿ ಡೇವಿಡ್ ರಿಕಾರ್ಡೊ ಎರಡು ಶತಮಾನಗಳ ಹಿಂದೆ ಹೆಣೆದಿರುವ ಒಂದು ತಪ್ಪು ಕಲ್ಪನೆಯು ಈಗಲೂ ಚಾಲ್ತಿಯಲ್ಲಿದೆ. ಯಂತ್ರೋಪಕರಣಗಳ ಬಳಕೆಯ ಆರಂಭದಲ್ಲಿ ಅದನ್ನು ರಿಕಾರ್ಡೊ ಬಹಳ ಸಂಭ್ರಮದಿಂದ ಬೆಂಬಲಿಸಿದ್ದರು ಮತ್ತು ಅದು ನಿರುದ್ಯೋಗಕ್ಕೆ ಕಾರಣವಾಗುತ್ತದೆ ಎಂಬ ಅವರ ಕಾಲದ ಕಾರ್ಮಿಕರ ಸಂಘಟನೆಗಳ ವಾದವನ್ನು ತಳ್ಳಿಹಾಕಿದ್ದರು. ಆದರೆ, 'ಪ್ರಿನ್ಸಿಪಲ್ಸ್' ಎಂಬ ಅವರ ಕೃತಿಯ ಮೂರನೇ ಆವೃತ್ತಿಯಲ್ಲಿ "ಯಂತ್ರಗಳ ಕುರಿತು" ಎಂಬ ಶೀರ್ಷಿಕೆ ಹೊಂದಿದ ಒಂದು ಅಧ್ಯಾಯವನ್ನು ಅವರು ಸೇರಿಸಿದರು. ಅದರಲ್ಲಿ ಅವರು ಯಂತ್ರೋಪಕರಣಗಳ ಬಳಕೆಯು ತಕ್ಷಣವೇ ನಿರುದ್ಯೋಗಕ್ಕೆ ಕಾರಣವಾಗುತ್ತದೆ ಎಂಬ ಕಾರ್ಮಿಕರ ಸಂಘಟನೆಗಳ ಅಭಿಪ್ರಾಯವನ್ನು ಒಪ್ಪಿಕೊಂಡರು. ಆದರೆ, ಯಂತ್ರೋಪಕರಣಗಳ ಬಳಕೆಯು ಲಾಭದ ದರವನ್ನು ಹೆಚ್ಚಿಸುವ ಕಾರಣ ಮತ್ತು ಅದರಿಂದಾಗಿ ಉದ್ಯೋಗ ಬೆಳವಣಿಗೆಯ ದರವೂ ಒಳಗೊಂಡಂತೆ ಬಂಡವಾಳದ ಸಂಗ್ರಹಣೆ ಮತ್ತು ಬೆಳವಣಿಗೆಯ ದರವು ವೃದ್ಧಿಸುವ ಕಾರಣ, ಅದು ಸಂಭವಿಸದಿದ್ದರೆ ಇರುತ್ತಿದ್ದುದಕ್ಕಿಂತಲೂ ಹೆಚ್ಚಿನ ಉದ್ಯೋಗಗಳನ್ನು ಕಾಲಕ್ರಮದಲ್ಲಿ ಅದು ಸೃಷ್ಟಿಸುತ್ತದೆ ಎಂದು ವಾದಿಸಿದರು.

ಮಾರ್ಕ್ಸ್ ಅವರು ತಮ್ಮ ಮಿಗುತಾಯ ಮೌಲ್ಯದ ಸಿದ್ಧಾಂತದಲ್ಲಿ ತೀವ್ರವಾಗಿ ವಿಮರ್ಶೆಗೊಳಪಡಿಸಿದ ರಿಕಾರ್ಡೊ ಅವರ ಈ ಹೇಳಿಕೆಯು ಹಲವಾರು ಕಾರಣಗಳಿಗಾಗಿ ದೋಷಪೂರಿತವೇ ಆಗಿದೆ. ಮೊದಲನೆಯದಾಗಿ, ರಿಕಾರ್ಡೊ ಅವರ ಇಡೀ ಚರ್ಚೆಯು ಯಂತ್ರೋಪಕರಣ ಬಳಕೆಯ ಜಾರಿ ಒಮ್ಮೆ-ಮಾತ್ರವೇ ಇರುತ್ತದೆ ಎಂಬುದಾಗಿತ್ತು. ಆದರೆ, ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ತಾಂತ್ರಿಕ ಬದಲಾವಣೆಗಳು ನಿರಂತರವಾಗಿ ಉಂಟಾಗುತ್ತಲೇ ಇರುತ್ತವೆ. ಯಂತ್ರೋಪಕರಣಗಳ ಮಾರ್ಪಾಟು ಕೊನೆಯಿಲ್ಲದಂತೆ ಮುಂದುವರಿಯುತ್ತಾ ಹೋಗುತ್ತದೆ. ಹಾಗಾಗಿ, ತಾಂತ್ರಿಕ ಪ್ರಗತಿಯ ಮೂಲಕ ಲಾಭದ ದರ ಮತ್ತು ಆ ಮೂಲಕ ಬಂಡವಾಳದ ಸಂಗ್ರಹಣೆ ಮತ್ತು ಉದ್ಯೋಗ ಬೆಳವಣಿಗೆಯ ದರವು ಹೆಚ್ಚುತ್ತಲೇ ಇರುತ್ತದೆ ಎಂದು ಊಹಿಸಿಕೊಂಡರೂ, ಈ ಯಾಂತ್ರೀಕರಣದಿಂದ ಸೃಷ್ಟಿಯಾಗುವ ಇಡೀ ನಿರುದ್ಯೋಗವು ಅಂತಿಮವಾಗಿ ಕೊನೆಗೊಳ್ಳುವ ದಿನವು ಒಂದು ಬಿಸಿಲ್ಗುದುರೆಯಂತೆ ಮುಂದೆ ಮುಂದೆ ಹೋಗುತ್ತಲೇ ಇರುತ್ತದೆ.

ಅವಾಸ್ತವಿಕ ಮತ್ತು ಅಸಮರ್ಥನೀಯ

ಎರಡನೆಯದಾಗಿ, ರಿಕಾರ್ಡೊ ಅವರ ಇಡೀ ವಾದವು 'ಸೇ' ಅವರ ನಿಯಮವನ್ನು ಮಾನ್ಯ ಮಾಡುತ್ತದೆ. ಅಂದರೆ, ಒಟ್ಟಾರೆ ಬೇಡಿಕೆಯ ಸಮಸ್ಯೆ ಎಂದಿಗೂ ಇರುವುದಿಲ್ಲ ಎಂದು ಭಾವಿಸುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಹೂಡಿಕೆಯು ಮಾರುಕಟ್ಟೆಯ ಬೆಳವಣಿಗೆಯಿಂದ ಎಂದಿಗೂ ನಿರ್ಬಂಧಿತವಲ್ಲ, ಏಕೆಂದರೆ, ಬಳಕೆಯಾಗದ ಎಲ್ಲ ಲಾಭಗಳೂ (ಕೂಲಿಯ ಎಲ್ಲವೂ ಬಳಕೆಯಾಗುತ್ತವೆ ಎಂದು ಭಾವಿಸಲಾಗಿದೆ) ಎಲ್ಲ ಉಳಿತಾಯಗಳಿಗೆ ಸಮನಾಗಿರುತ್ತವೆ ಮತ್ತು ಅದನ್ನು ಹೂಡಿಕೆ ಮಾಡಲಾಗುತ್ತದೆ ಎಂದು ಭಾವಿಸಲಾಗುವುದು. ಈ ಭಾವನೆಯು ಸಂಪತ್ತನ್ನು ಹಿಡಿದಿಟ್ಟುಕೊಳ್ಳಬಹುದಾದ ಬೇರೆ ಯಾವ ರೂಪವೂ ಇಲ್ಲ ಎಂದು ಮೊದಲೇ ಊಹಿಸಿಕೊಂಡಿರುತ್ತದೆ. ಅಂದರೆ, ಹಣವು ಸಂಪತ್ತನ್ನು ಎಂದಾದರೂ ಹಿಡಿದಿಟ್ಟು ಕೊಳ್ಳಬಹುದಾದ ಒಂದು ರೂಪವಲ್ಲ ಎಂಬುದು. ಈ ಭಾವನೆಯು ಅವಾಸ್ತವಿಕ ಮಾತ್ರವಲ್ಲ, ತಾರ್ಕಿಕವಾಗಿ ಅಸಮರ್ಥನೀಯವೂ ಹೌದು.

ಹೂಡಿಕೆಯು ಮಾರುಕಟ್ಟೆಯ ಬೆಳವಣಿಗೆಯಿಂದ ನಿರ್ಧಾರಗೊಳ್ಳುತ್ತದೆ ಎಂಬುದನ್ನು ನಾವು ಒಮ್ಮೆ ಗುರುತಿಸಿದರೆ, ಆಗ ಯಂತ್ರೋಪಕರಣಗಳ ಬಳಕೆಯಿಂದಾಗಿ ಮಿಗುತಾಯವು ಕೂಲಿಯಿಂದ ಲಾಭದತ್ತ ಹೊರಳುವ ಬದಲಾವಣೆಯು ಬಂಡವಾಳ ಸಂಗ್ರಹಣೆಯ ದರವನ್ನು ಇಳಿಕೆ ಮಾಡುತ್ತದೆ. ಯಂತ್ರೋಪಕರಣಗಳ ಬಳಕೆಯು ತಕ್ಷಣವೇ ನಿರುದ್ಯೋಗದ ಏರಿಕೆಗೆ ಕಾರಣವಾಗುವುದರಿಂದ, ಯಾಂತ್ರೀಕರಣದ ಮೂಲಕ ಕಾರ್ಮಿಕ ಉತ್ಪಾದಕತೆ ಹೆಚ್ಚಾದಂತೆಯೇ ಕೂಲಿಯೇನೂ ಏರಿಕೆಯಾಗುವುದಿಲ್ಲ. ಈ ವಿದ್ಯಮಾನವು ಕೂಲಿಯಿಂದ (ಹೀರಿಕೊಳ್ಳಲಾಗುತ್ತಿದ್ದ ಮಿಗುತಾಯವು) ಲಾಭದ ರೂಪ ಪಡೆಯುವ ಬದಲಾವಣೆಗೆ ಕಾರಣವಾಗುತ್ತದೆ. ಕೂಲಿಯು ಹೆಚ್ಚು ಕಡಿಮೆ ಇಡಿಯಾಗಿ ಬಳಕೆಯಾಗುವುದರಿಂದ ಮತ್ತು ಲಾಭದ ಒಂದು ಸಣ್ಣ ಭಾಗ ಮಾತ್ರವೇ ಬಳಕೆಯಾಗುವುದರಿಂದ, ಕೂಲಿಯಿಂದ ಲಾಭಕ್ಕೆ ಹೊರಳುವ ಬದಲಾವಣೆಯು ಒಟ್ಟು ವರಮಾನದಲ್ಲಿ ಬಳಕೆಯ ಅನುಪಾತವನ್ನು ಕಡಿಮೆ ಮಾಡುತ್ತದೆ. ಇದು ಅತಿ-ಉತ್ಪಾದನೆಯ ಪ್ರವೃತ್ತಿಯನ್ನು ಉಂಟುಮಾಡುತ್ತದೆ. ಇದು ವಾಸ್ತವವಾಗಿ ಬಂಡವಾಳ ಸಂಗ್ರಹಣೆಯ ದರವನ್ನು ಇಳಿಕೆ ಮಾಡುತ್ತದೆ.

ಆದ್ದರಿಂದ, ರಿಕಾರ್ಡೊ ಹೇಳಿದ ಹಾಗೆ ಉದ್ಯೋಗ ಬೆಳವಣಿಗೆ ದರ ಹೆಚ್ಚುವುದರ ಬದಲು, ಯಂತ್ರೋಪಕರಣಗಳ ಬಳಕೆಯು ಅದನ್ನು ಇಳಿಕೆ ಮಾಡುತ್ತದೆ. ಕೆಲವು ಸ್ವಾಯತ್ತ ಕಾರಣಗಳಿಂದಾಗಿ ಬಂಡವಾಳ ಸಂಗ್ರಹಣೆಯ ದರವು ಏರಿಕೆಯಾಗಬಹುದಾದ ಅವಧಿಗಳು ಇರಬಹುದು ಮತ್ತು ಅಂತಹ ಅವಧಿಗಳಲ್ಲಿ ಇನ್ನೂ ಹೊಸ ಹೊಸ ಯಂತ್ರೋಪಕರಣಗಳ ಬಳಕೆಯಾಗಿಲ್ಲ ಎಂದು ಗುರುತಿಸಿದರೆ, ಆಗ ನಿರುದ್ಯೋಗದ ಮಟ್ಟವು ನಿಜಕ್ಕೂ ಇಳಿಯಬಹುದು; ಆದರೆ ಅಂತಹ ಇಳಿಕೆಯು ಯಂತ್ರೋಪಕರಣಗಳ ಆರಂಭಿಕ ಬಳಕೆಯಿಂದಲೇ ಆಗಿರುವುದಿಲ್ಲ. ಆದ್ದರಿಂದ, ಯಂತ್ರೋಪಕರಣಗಳ ಬಳಕೆಯು, ಕಾಲಾವಧಿಯಲ್ಲಿ, ಅದು ಆರಂಭದಲ್ಲಿ ಸೃಷ್ಟಿಸಿದ ನಿರುದ್ಯೋಗವನ್ನು ಅದೇ ನಿವಾರಿಸುತ್ತದೆ ಎಂದು ನಂಬಲು ಯಾವುದೇ ಕಾರಣವಿಲ್ಲ ಎಂಬುದನ್ನು ನಾವು ಖಚಿತವಾಗಿ ಹೇಳಬಹುದು.

ರಿಕಾರ್ಡೊ ಅವರು ಚಿತ್ರಿಸಿದ ಬಂಡವಾಳಶಾಹಿಯ ಚಿತ್ರಣವು (ಆರಂಭದಲ್ಲಿ ಅದು ಉಂಟುಮಾಡುವ ಕಷ್ಟ ನಷ್ಟಗಳು ಏನೇ ಇದ್ದರೂ ಅಂತಿಮವಾಗಿ ಅದು ಎಲ್ಲರಿಗೂ ಹೆಚ್ಚಿನ ಸಮೃದ್ಧಿಯನ್ನು ತರುತ್ತದೆ) ಅದರ ಒಂದು ಸಾಮಾನ್ಯ ಹೆಗ್ಗುರುತಾಗಿ ಸ್ವೀಕರಿಸಲ್ಪಟ್ಟಿದೆ. ಆದರೆ, ಈ ಚಿತ್ರಣವು ನಿಜವಲ್ಲ: ಆರಂಭದಲ್ಲಿ ಅದು ಉಂಟುಮಾಡುವ ಕಷ್ಟಗಳನ್ನು ನಾವು ಕಂಡಿದ್ದೇವೆ, ಕಾಲಾನಂತರದಲ್ಲಿಯೂ ಅದು ಸುಧಾರಿಸುವುದಿಲ್ಲ; ಈ ಆರಂಭಿಕ ಕಷ್ಟಗಳನ್ನು ನಿವಾರಿಸುವಲ್ಲಿ ಕೊಡುಗೆ ನೀಡುವ ಯಾವುದೇ ಅಂಶವೂ ಬಂಡವಾಳಶಾಹಿಯ ಆಂತರಿಕ ಚಾಲಕ ಶಕ್ತಿಗಳಿಗಿಲ್ಲ.

ಪಶ್ಚಿಮ ಯುರೋಪಿನ ಒಗಟು

ಹಾಗಾದರೆ, ಒಂದು ಪ್ರಶ್ನೆ ಉದ್ಭವಿಸುತ್ತದೆ: ಬಂಡವಾಳಶಾಹಿಯ ಆರಂಭದ ವರ್ಷಗಳಿಗೆ ಹೋಲಿಸಿದರೆ, ಬಂಡವಾಳಶಾಹಿಯು ಜನ್ಮತಳೆದ ಮತ್ತು ಅದರ ತವರು ಮನೆಯಾಗಿಯೇ ಮುಂದುವರೆದಿರುವ ಪಶ್ಚಿಮ ಯುರೋಪಿನಲ್ಲಿ ಜನರ ಜೀವನ ಪರಿಸ್ಥಿತಿಗಳಲ್ಲಿ ನಿಜಕ್ಕೂ ಕಂಡುಬರುವ ಸುಧಾರಣೆಯ ಅಂಶವನ್ನು ನಾವು ಹೇಗೆ ವಿವರಿಸುತ್ತೇವೆ? ನಾವು ಗಮನಿಸಿದ ಈ ವಿದ್ಯಮಾನವನ್ನು, ಬಂಡವಾಳಶಾಹಿಯು ಆರಂಭದಲ್ಲಿ ಉಂಟುಮಾಡುವ ಕಷ್ಟ ನಷ್ಟಗಳು, ಅವು ಹಿಮ್ಮೆಟ್ಟುವುದರ ಬದಲು, ಕಾಲಾನಂತರದಲ್ಲಿ ತಾವಾಗಿಯೇ ಉಲ್ಬಣಗೊಳ್ಳುವ ಪ್ರವೃತ್ತಿಯನ್ನು ಹೊಂದಿವೆ ಎಂಬ ಸೈದ್ಧಾಂತಿಕ ವಾದದೊಂದಿಗೆ ಹೇಗೆ ಸಮನ್ವಯಗೊಳಿಸುತ್ತೇವೆ?

ಈ ಒಗಟನ್ನು ಬಂಡವಾಳಶಾಹಿಯ ಅಭಿವೃದ್ಧಿಗೆ ಸಂಬಂಧಿಸಿದ ಎರಡು ಚಾರಿತ್ರಿಕ ಸಂದರ್ಭಗಳು ವಿವರಿಸುತ್ತವೆ. ಕೆನಡಾ, ಅಮೆರಿಕಾ (ನಂತರ ಅದು ಯುನೈಟೆಡ್ ಸ್ಟೇಟ್ಸ್ ಎಂದು ಬದಲಾಯಿತು), ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾದಂತಹ ವಿಶ್ವದ ಸಮಶೀತೋಷ್ಣ ಪ್ರದೇಶಗಳಿಗೆ ಯುರೋಪಿನ ದೇಶಗಳಿಂದ ಹೊರ ಹೋದ ಬೃಹತ್ ಸಂಖ್ಯೆಯ ಜನರ ವಲಸೆಯೇ ಮೊದಲನೆಯ ಚಾರಿತ್ರಿಕ ಸಂದರ್ಭ. ಈ ದೇಶಗಳು ಭಾರತ, ಇಂಡೋನೇಷ್ಯಾ ಅಥವಾ ಇಂಡೋ-ಚೀನಾದಂತಹ "ಜಯಿಸಿದ ವಸಾಹತು"ಗಳಿಗಿಂತ ಭಿನ್ನವಾದ "ನೆಲಸಿಗ ವಸಾಹತು"ಗಳಾದವು. ಈ ಪ್ರದೇಶಗಳಿಗೆ (ಅಂದರೆ, ಈ ಹೊಸ ನೆಲಸಿಗ ವಸಾಹತುಗಳಿಗೆ) ಯುರೋಪಿನ ದೇಶಗಳಿಂದ ಬಂದ ವಲಸಿಗರು ಅಲ್ಲಿನ ಮೂಲ ನಿವಾಸಿಗಳಿಗೆ ಸೇರಿದ ಭೂಮಿಯನ್ನು ಕಿತ್ತುಕೊಂಡರು ಮತ್ತು ಅದನ್ನು ಸಾಗುವಳಿ ಮಾಡುವ ಮೂಲಕ ಉನ್ನತ ಮಟ್ಟದ ಆದಾಯವನ್ನು ಗಳಿಸಿದರು. ಈ ವಿದ್ಯಮಾನವು ಅವರ ತಾಯ್ನಾಡಿನ (ಯುರೋಪಿನ ದೇಶಗಳ) ಕಾರ್ಮಿಕರು ಪಡೆಯಬಹುದಾದ ಕನಿಷ್ಠ ಕೂಲಿಯನ್ನು ಏರಿಕೆ ಮಾಡುವಷ್ಟು ಪರಿಣಾಮಕಾರಿಯಾಗಿತ್ತು ಮತ್ತು ಅವರ ತಾಯ್ನಾಡಿನಲ್ಲಿ ಉದ್ಯೋಗದ ಮಟ್ಟ ಮತ್ತು ವೇತನದರ ಎರಡೂ ಏರಿಕೆ ಕಂಡವು. ಅಂದರೆ, ಒಂದು ವೇಳೆ ವಲಸೆ ಸಂಭವಿಸದೆ ಇದ್ದಿದ್ದರೆ, ಯುರೋಪಿನ ದೇಶಗಳಲ್ಲಿ ಇರಬಹುದಾಗಿದ್ದ ಉದ್ಯೋಗದ ಮಟ್ಟ ಮತ್ತು ವೇತನದರ ಮಟ್ಟಕ್ಕಿಂತ ಉನ್ನತವಾದ ಪರಿಸ್ಥಿತಿಯನ್ನು ಈ ದೇಶಗಳು ವಲಸೆಯ ಪರಿಣಾಮವಾಗಿ ಹೊಂದಿದವು ಮತ್ತು ಆ ಮೂಲಕ ಯಾಂತ್ರೀಕರಣದ ಪ್ರತಿಕೂಲ ಪರಿಣಾಮವನ್ನು ನಿವಾರಿಸಿಕೊಂಡವು.

ಯುರೋಪಿನ ಜನಸಂಖ್ಯೆಗೆ ಹೋಲಿಸಿದರೆ ಅಲ್ಲಿಂದ ಹೋದ ವಲಸೆಯ ಪ್ರಮಾಣವು ಅಗಾಧವಾಗಿತ್ತು. "ದೀರ್ಘ ಹತ್ತೊಂಬತ್ತನೇ ಶತಮಾನ"ದ ಅವಧಿಯಲ್ಲಿ (ಮೊದಲ ಮಹಾ ಯುದ್ಧದವರೆಗೆ) ಯುರೋಪಿನ ದೇಶಗಳಿಂದ ಐವತ್ತು ಮಿಲಿಯನ್ ಜನರು ವಿಶ್ವದ ಸಮಶೀತೋಷ್ಣ ಪ್ರದೇಶಗಳಿಗೆ (ಯುರೋಪಿನ ವಸಾಹತುಗಳಾದ ಕೆನಡಾ, ಅಮೆರಿಕಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ) ವಲಸೆ ಬಂದಿದ್ದಾರೆಂದು

ಪುಟ 14 ಕ್ಕೆ

ಯಾಂತ್ರೀಕರಣ ಮತ್ತು ನಿರುದ್ಯೋಗ..... ಪುಟ 13 ರಿಂದ

ಅಂದಾಜಿಸಲಾಗಿದೆ. ಯಂತ್ರಗಳು ಮೊದಲು ಕಾಣಿಸಿಕೊಂಡ ಕೈಗಾರಿಕಾ ಕ್ರಾಂತಿಯ ಮೂಲ ತಾಣವಾದ ಬ್ರಿಟನ್‌ನಿಂದ ಪ್ರತಿ ವರ್ಷವೂ ಹೋದ ವಲಸೆಯ ಪ್ರಮಾಣವು ಅದೆಷ್ಟು ದೊಡ್ಡದಾಗಿತ್ತು ಎಂದರೆ, ಅಲ್ಲಿ ಪ್ರಕೃತಿ-ಸಹಜವಾಗಿ ಹೆಚ್ಚಳವಾಗುತ್ತಿದ್ದ ವಾರ್ಷಿಕ ಜನಸಂಖ್ಯೆಯ ಅರ್ಧದಷ್ಟು ಜನರು ತಮ್ಮ ದೇಶವನ್ನು ತೊರೆದು ಸಮಶೀತೋಷ್ಣ ಪ್ರದೇಶಗಳಿಗೆ ವಲಸೆ ಹೋದರು. ಅಷ್ಟೊಂದು ವರ್ಷಗಳ ಕಾಲ ಅಷ್ಟೊಂದು ಪ್ರಮಾಣದಲ್ಲಿ ನಿರುದ್ಯೋಗಿಗಳನ್ನು ವಿದೇಶಗಳಿಗೆ ವಲಸೆ ಕಳುಹಿಸಿದ ಅಂಶವು ಕಾರ್ಮಿಕ ಮಾರುಕಟ್ಟೆಯಲ್ಲಿ ಒಂದು ಬಿಗಿತವನ್ನು ಸೃಷ್ಟಿಸುವ ಮಟ್ಟಿಗೆ ಕೆಲಸ ಮಾಡಿತು. ಆದ್ದರಿಂದ, ಯಂತ್ರೋಪಕರಣಗಳ ಬಳಕೆಯಿಂದ ಸೃಷ್ಟಿಯಾದ ನಿರುದ್ಯೋಗವು ಕಾಲಾನಂತರದಲ್ಲಿ ಉಲ್ಬಣಗೊಳ್ಳುವ ಬದಲು ನಿಜಕ್ಕೂ ಇಳಿಕೆಯಾದುದರ ಹಿಂದಿರುವ ಅಂಶವು ಈ ಬಾಹ್ಯ ವಿಸ್ತರಣಾ ಅಂಶವಾದ ವಲಸೆಯೇ ವಿನಃ, ಬಂಡವಾಳಶಾಹಿಯ ಆಂತರಿಕ ಚಾಲಕ ಶಕ್ತಿಗಳಲ್ಲ.

ಅದೇ ನಿಟ್ಟಿನಲ್ಲಿ ಕೆಲಸ ಮಾಡಿದ ಎರಡನೇ ಅಂಶವೆಂದರೆ, ಯೂರೋಪಿನ ದೇಶಗಳಲ್ಲಿ ತಯಾರಾದ ಮತ್ತು ಅಪ-ಕೈಗಾರಿಕೀಕರಣಗೊಳಿಸುವ ರಫ್ತುಗಳನ್ನು ಅದಾಗಲೇ ಅದೇ ವಸ್ತುಗಳನ್ನು ಉತ್ಪಾದಿಸುತ್ತಿದ್ದ ಜಯಿಸಿದ ವಸಾಹತುಗಳಿಗೆ ರಫ್ತುಮಾಡಿದ ವಿದ್ಯಮಾನವೇ. ಈ ರೀತಿಯಲ್ಲಿ ಯಂತ್ರೋಪಕರಣಗಳ ಬಳಕೆಯಿಂದ ಸೃಷ್ಟಿಯಾದ ನಿರುದ್ಯೋಗವು ಆ ದೇಶಗಳಿಗೆ ಮಾತ್ರವೇ ಸೀಮಿತವಾಗಿರಲಿಲ್ಲ. ಅದರ ಬಹುಪಾಲು ಭಾಗವು ಈ ದೇಶಗಳು ಮಾಡಿದ ಅಪ-ಕೈಗಾರಿಕೀಕರಣಗೊಳಿಸುವ ರಫ್ತುಗಳ ಮೂಲಕ ಜಯಿಸಿದ ವಸಾಹತುಗಳಲ್ಲಿ ಸೃಷ್ಟಿಯಾಯಿತು. ಬೃಹತ್ ಸಂಖ್ಯೆಯ ನಿರುದ್ಯೋಗಿಗಳನ್ನು ಹೊಂದಿರುವ ಜಾಗತಿಕ ದಕ್ಷಿಣ ದೇಶಗಳಲ್ಲಿ ಇಂದಿಗೂ ಈ ಸಮಸ್ಯೆಯು ಹಾಗೆಯೇ ಉಳಿದಿದೆ.

ಈ ಸಮಸ್ಯೆ ಹಾಗೆಯೇ ಉಳಿದಿದೆ ಏಕೆಂದರೆ, ಈ ಮೀಸಲುಗಳು ಮುಂದುವರೆದ ದೇಶಗಳ ಕೈಗಾರಿಕಾ ಬಂಡವಾಳಶಾಹಿಯು ಬಳಕೆಗೆ ತಂದ ಯಾಂತ್ರೀಕರಣದಿಂದ ಉದ್ಭವಿಸಿದವು ಎಂದು ನಾವು ಸಾಮಾನ್ಯವಾಗಿ ನೋಡುವುದಿಲ್ಲ ಮತ್ತು ಯಾಂತ್ರೀಕರಣದ ಪರಿಣಾಮವನ್ನು ಮೌಲ್ಯಮಾಪನ ಮಾಡುವಾಗ ಮುಂದುವರೆದ ದೇಶಗಳೊಳಗೆ ಸೃಷ್ಟಿಯಾದ ನಿರುದ್ಯೋಗದ (ಅಲ್ಲಿ ಇದು ವಲಸೆಯ ಮೂಲಕ ಇಳಿಕೆ ಕಂಡಿತು) ಮೇಲೆ ಮಾತ್ರ ಗಮನಹರಿಸುವುದರಿಂದ, ಈ ನಿರುದ್ಯೋಗವು ಕಾಲಾನಂತರದಲ್ಲಿ ಬಂಡವಾಳಶಾಹಿಯ ಆಂತರಿಕ ಚಾಲಕಶಕ್ತಿಗಳ ಮೂಲಕ ಇಲ್ಲದಂತಾಯಿತು ಎಂಬ ಅನಿಸಿಕೆ ನಮಗೆ ಬರುತ್ತದೆ. ಆದರೆ, ಬಂಡವಾಳಶಾಹಿಯ ಆಂತರಿಕ ಚಾಲಕಶಕ್ತಿಗಳು ನಿರುದ್ಯೋಗವನ್ನು ಇಲ್ಲವಾಗಿಸುವ ಯಾವ ಪರಿಣಾಮವನ್ನೂ ವಾಸ್ತವವಾಗಿ ಬೀರಿಲ್ಲ.

ಪೂರಾ ತಪ್ಪಾದ ವ್ಯಾಖ್ಯಾನ

ಇದೆಲ್ಲವೂ ಇಂದು ಜಾಗತಿಕ ದಕ್ಷಿಣದ ದೇಶಗಳಿಗೆ ಬಹು ಗುರುತರವಾದ ಪರಿಣಾಮಗಳನ್ನು ಹೊಂದಿದೆ. ಜಾಗತಿಕ ದಕ್ಷಿಣದ ದೇಶಗಳು ಲಂಗುಲಗಾಮಿಲ್ಲದ ಈ ಬಂಡವಾಳಶಾಹಿಯನ್ನು ಅನುಸರಿಸುವುದರಿಂದ ತಮ್ಮ ನಿರುದ್ಯೋಗ ಮತ್ತು ಬಡತನವನ್ನು ನಿವಾರಿಸಬಹುದು ಎಂದು ವಿಶ್ವ ಬ್ಯಾಂಕ್, ಐಎಂಎಫ್ ಮತ್ತು ಇತರ ಏಜೆನ್ಸಿಗಳು ಹೇಳುತ್ತವೆ ಮತ್ತು ಈ ಹೇಳಿಕೆಯ ಬೆಂಬಲವಾಗಿ ಪಶ್ಚಿಮ ಯುರೋಪಿನ ಉದಾಹರಣೆಯನ್ನು ಕೊಡುತ್ತವೆ. ಅದನ್ನು ವೇದವಾಕ್ಯವೆಂದು ಒಪ್ಪಿಕೊಳ್ಳಲಾಗಿದೆ. ಆದರೆ, ಇದು ಬಂಡವಾಳಶಾಹಿಯ ಸಿದ್ಧಾಂತ ಮತ್ತು ಅದರ ಇತಿಹಾಸ ಈ ಎರಡರ ಪೂರಾ ತಪ್ಪು ವ್ಯಾಖ್ಯಾನವಾಗುತ್ತದೆ.

ಈ ಸಂಗತಿಯನ್ನು ಭಾರತದ ಅಭಿವೃದ್ಧಿ ಯೋಜನೆಗಳ ಆರಂಭ ಕಾಲದ ಯೋಜನಾ ಪರಿಣತರುಗಳಲ್ಲಿ ಒಬ್ಬರಾಗಿದ್ದ ಪಿ.ಸಿ.ಮಹಾಲನೋಬಿಸ್ ಚೆನ್ನಾಗಿ ಅರಿತಿದ್ದರು. ರಾಷ್ಟ್ರದ ಅಭಿವೃದ್ಧಿಗಾಗಿ ಅವರು ಲಂಗುಲಗಾಮಿಲ್ಲದ ಬಂಡವಾಳಶಾಹಿಗಿಂತ ಮಿಗಿಲಾಗಿ ನಿಯಂತ್ರಣ ನೀತಿಗಳ ಆಳ್ವಿಕೆಯನ್ನು ಹೊಂದಬಯಸಿದರು. ಈ ನಿಯಂತ್ರಣ ನೀತಿಗಳ ಆಳ್ವಿಕೆಯಡಿಯಲ್ಲಿಯೂ ಸಹ, ಗೃಹ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ರಕ್ಷಣೆ ಇರಬೇಕೆಂದು ಅವರು ಬಯಸಿದರು. ಭಾರೀ ಕೈಗಾರಿಕೆಗೆ ಒತ್ತು ನೀಡಿದ ಖ್ಯಾತಿ ಹೊಂದಿದ್ದರ ಹೊರತಾಗಿಯೂ, ಭಾರತದ ಎರಡನೇ ಪಂಚ ವಾರ್ಷಿಕ ಯೋಜನೆಯ ಪ್ರಸ್ತಾಪದಲ್ಲಿ ಒಂದು ಅಂಶವನ್ನು ಮಹಾಲನೋಬಿಸ್ ಅವರು ವಿಶೇಷವಾಗಿ ಪ್ರಸ್ತಾಪಿಸಿದರು. ಈ ಪ್ರಸ್ತಾಪವು ಗೃಹ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ವಿಸ್ತರಣೆಯ ಮೂಲಕ ಅರ್ಥವ್ಯವಸ್ಥೆಯಲ್ಲಿ ಉದ್ಯೋಗವನ್ನು ಸೃಷ್ಟಿಸುವ ಹೊತ್ತಿನಲ್ಲೇ ಗ್ರಾಹಕ ಸರಕುಗಳ ಲಭ್ಯತೆಯನ್ನು ಬಲಪಡಿಸುವುದಕ್ಕೆ ಸಂಬಂಧಿಸಿತ್ತು. ಇದೇ ರೀತಿಯ ನೀತಿಯನ್ನು ಜಾಗತಿಕ ದಕ್ಷಿಣದ ಜನಸಂಖ್ಯಾ ಬಾಹುಳ್ಯ ಹೊಂದಿದ ದೇಶವಾದ ಚೀನಾದಲ್ಲಿ ವಸಾಹತುಶಾಹಿ ಮತ್ತು ಅರೆ-ವಸಾಹತುಶಾಹಿ ಕಾಲದಿಂದಲೂ ಒಂದು ಪರಂಪರೆಯಾಗಿ ಪಡೆದ ನಿರುದ್ಯೋಗ ಮತ್ತು ಬಡತನದ ಸಮಸ್ಯೆಯನ್ನು ನಿವಾರಿಸಲು "ಎರಡು ಕಾಲುಗಳ ಮೇಲೆ ನಡೆ" ಎಂಬ ವಿಚಾರದ ಮೂಲಕ ಅದೇ ಸಮಯದಲ್ಲಿ ಅನುಸರಿಸಲಾಗಿತ್ತು.

ವಿಷಾದಕರವಾದ ಒಂದು ಸಂಗತಿಯೆಂದರೆ, ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಚರ್ಚೆಯು ಇಂದು ದೇಶದಲ್ಲಿ ಒಂದು ತೀರಾ ಎಳಸು ಮಟ್ಟವನ್ನು ತಲುಪಿದೆ. ಬಂಡವಾಳಶಾಹಿಯ ಬಗ್ಗೆ ಇನ್ನೂರು ವರ್ಷಗಳಷ್ಟು ಹಳೆಯದಾದ ತಪ್ಪು ಕಲ್ಪನೆಗಳನ್ನು ಪುನಃ ಹರಡಲಾಗುತ್ತಿದೆ ಮತ್ತು ಜಾಗತಿಕ ದಕ್ಷಿಣದಲ್ಲಿ ಬಡತನ ನಿವಾರಣೆಯಾಗಿರುವ ಬಗ್ಗೆ ಎಲ್ಲಾ ರೀತಿಯ ಸುಳ್ಳು ಹೇಳಿಕೆಗಳ ಮೂಲಕ ಅದೇ ತಪ್ಪು ಕಲ್ಪನೆಗಳನ್ನು ಉಳಿಸಿಕೊಳ್ಳಲಾಗುತ್ತಿದೆ. ಇಂತಹ ತಪ್ಪು ಕಲ್ಪನೆಗಳನ್ನು ನಾವು ಎಷ್ಟು ಬೇಗ ತೊರೆಯುತ್ತೇವೆಯೋ ಅಷ್ಟೂ ಒಳ್ಳೆಯದು.

ಜಮ್ಮು ಮತ್ತು ಕಾಶ್ಮೀರಕ್ಕೆ ಸಿಪಿಐ(ಎಂ) ನಿಯೋಗ.... ಪುಟ 4 ರಿಂದ

ತಾರಿಗಾಮಿ ಟೀಕಿಸಿದರು, ಬುಡಮಟ್ಟದ ವಾಸ್ತವವು ಈ ಭರವಸೆಗೆ ಸಂಪೂರ್ಣವಾಗಿ ವಿರುದ್ಧವಾಗಿದೆ ಎಂದು ಹೇಳಿದರು. "ನಾವು, ಜಮ್ಮು ಮತ್ತು ಕಾಶ್ಮೀರದ ಜನರು, ಈ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ವಿರೋಧಿಸಲು ಒಗ್ಗಟ್ಟಾಗಿ ನಿಲ್ಲಬೇಕು ಮತ್ತು ಆಗಸ್ಟ್ 5, 2019ರಂದು ಕಸಿದುಕೊಳ್ಳಲಾದ ಸಾಂವಿಧಾನಿಕ ಹಕ್ಕುಗಳನ್ನು ಹಿಂದಿರುಗಿಸಬೇಕೆಂದು ಒತ್ತಾಯಿಸಬೇಕು" ಎಂದು ಅವರು ಪ್ರತಿಪಾದಿಸಿದರು.

ವಿಧಾನಸಭೆ ಚುನಾವಣೆಗಳ ನಂತರ ಜಮ್ಮು ಮತ್ತು ಕಾಶ್ಮೀರಕ್ಕೆ ಪೂರ್ಣ ರಾಜ್ಯ ಸ್ಥಾನಮಾನವನ್ನು ಪುನಃಸ್ಥಾಪಿಸುವ ಕುರಿತು ಸಂಸತ್ತಿನಲ್ಲಿ ನೀಡಿದ ಭರವಸೆಗಳನ್ನು ಭಾರತ ಸರ್ಕಾರ ಗೌರವಿಸಬೇಕು ಎಂದು ಅವರು ಒತ್ತಿ ಹೇಳಿದರು.

ದೊಡ್ಡ ಸಂಖ್ಯೆಯ ನಿರುದ್ಯೋಗಿ ಯುವಕರಿಗೆ ಪರಿಹಾರ ಒದಗಿಸಲು ಸುಪ್ರೀಂ ಕೋರ್ಟ್‌ನ ನಿಲುವಿಗೆ ಅನುಗುಣವಾಗಿ ಮೀಸಲಾತಿಗಳನ್ನು ತರ್ಕಬದ್ಧಗೊಳಿಸುವಂತೆ ಅವರು ಕರೆ ನೀಡಿದರು. ಈ ಪ್ರದೇಶದಲ್ಲಿ ನಡೆಯುತ್ತಿರುವ ಯುವಕರ ಬಂಧನಗಳನ್ನು ನಿಲ್ಲಿಸುವಂತೆ ಅವರು ಸರ್ಕಾರವನ್ನು ಒತ್ತಾಯಿಸಿದರು. ಸಂವಿಧಾನಿಕ ಹಕ್ಕುಗಳ ಮರುಸ್ಥಾಪನೆ, ಸೇಬು ಬೆಳೆಗಾರರ ಸಮಸ್ಯೆಗಳು ಮತ್ತು ನಿರುದ್ಯೋಗ ಬಿಕ್ಕಟ್ಟು ಸೇರಿದಂತೆ ಜಮ್ಮು ಮತ್ತು ಕಾಶ್ಮೀರದ ಜನರು ಎದುರಿಸುತ್ತಿರುವ ನಿರ್ಣಾಯಕ ಸಮಸ್ಯೆಗಳನ್ನು ಸಂಸತ್ತಿನಲ್ಲಿ ಎತ್ತುವುದನ್ನು ಸಿಪಿಐ(ಎಂ) ಮುಂದುವರಿಸುತ್ತದೆ ಎಂದು ತಾರಿಗಾಮಿ ಸಭಿಕರಿಗೆ ಭರವಸೆ ನೀಡಿದರು.

ಜಮ್ಮು ಮತ್ತು ಕಾಶ್ಮೀರದ ಒಂದು ಶಾಂತಿಯುತ ಮತ್ತು ಎಲ್ಲರನ್ನೂ ಒಳಗೊಳ್ಳುವ ಭವಿಷ್ಯದತ್ತ ಮೊದಲ ಹೆಜ್ಜೆಯಾಗಿ ಅದರ ಸಾಂವಿಧಾನಿಕ ಸ್ಥಾನಮಾನ, ರಾಜ್ಯದ ಸ್ಥಾನಮಾನ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮರುಸ್ಥಾಪನೆ ಕೂಡಲೇ ಆಗಬೇಕು ಎಂದು ಮತ್ತೊಮ್ಮೆ ಕರೆ ನೀಡುತ್ತ ಸಮಾವೇಶ ಸಮಾರೋಪಗೊಂಡಿತು.

ಸಾರ್ವತ್ರಿಕ ಪಿಂಚಣಿ ನಮ್ಮ ಬೇಡಿಕೆಯಾಗಬೇಕು..... ಪುಟ 11 ರಿಂದ

(ಕೊರಿಯಾ ಶೇ.55, ಜಪಾನ್ ಶೇ.50, US ಮತ್ತು UK ಶೇ.40 ತೆರಿಗೆ ವಿಧಿಸುತ್ತವೆ).

5 ಕನಿಷ್ಠ ಕ್ರಮಗಳು

ಸರ್ಕಾರವು ಈ ಕೆಳಗಿನ 5 ಕನಿಷ್ಠ ಕ್ರಮಗಳನ್ನು ಕೈಗೊಳ್ಳಬೇಕು.

* ಗ್ರಾಮೀಣ ಮತ್ತು ನಗರ ಬಡವರಿಗೆ ಕನಿಷ್ಠ 100 ದಿನಗಳ ಕೆಲಸ ಒದಗಿಸುವುದು.
* ಶಿಕ್ಷಣಕ್ಕಾಗಿ GDP ಯ ಕನಿಷ್ಠ ಶೇ.6 ಖರ್ಚು ಮಾಡುವುದು.
* ಆರೋಗ್ಯಕ್ಕಾಗಿ GDP ಯ ಕನಿಷ್ಠ ಶೇ.4 ರಿಂದ 5 ಖರ್ಚು ಮಾಡುವುದು.
* ಎಲ್ಲರಿಗೂ ಕನಿಷ್ಠ 3000 ರೂಪಾಯಿಗಳ ಸೂಚ್ಯಂಕ-ಸಂಯೋಜಿತ ಪಿಂಚಣಿ ಒದಗಿಸುವುದು.
* ಎಲ್ಲರಿಗೂ ತಿಂಗಳಿಗೆ 10 ಕೆಜಿ ಅಕ್ಕಿ/ಗೋಧಿ ಒದಗಿಸುವುದು.

ಐಎಲ್‌ಒ (ಅಂತರ್‌ರಾಷ್ಟ್ರೀಯ ಶ್ರಮ ಸಂಘಟನೆ) 1952 ರಿಂದಲೂ APL/BPL ಭೇದವಿಲ್ಲದೆ ಎಲ್ಲಾ ವರ್ಗದ ಜನರಿಗೆ 9 ವಿಧಗಳ ಸಾಮಾಜಿಕ ಭದ್ರತೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಹೇಳುತ್ತಿದೆ, ಆದರೆ ಭಾರತ ಸರ್ಕಾರ ಇದನ್ನು ಔಪಚಾರಿಕವಾಗಿ ಸ್ವೀಕರಿಸಲು ನಿರಾಕರಿಸಿದೆ.

ಇಂತಹ ಪರಿಸ್ಥಿತಿಯಲ್ಲಿ ನಾವು ಈ ಕೆಳಗಿನವುಗಳಿಗಾಗಿ ಬೇಡಿಕೆ ಇಡಬೇಕು ಮತ್ತು ಹೋರಾಡಬೇಕು:

* ಆಹಾರ ಭದ್ರತಾ ಕಾಯಿದೆ, MNREGA ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಂತೆ ರಾಷ್ಟ್ರೀಯ ವಯಸ್ಸಾದವರ ಹಕ್ಕುಗಳ ಕಾಯಿದೆ ರೂಪಿಸಬೇಕು.
* ಸಾರ್ವತ್ರಿಕ ಸೂಚ್ಯಂಕ-ಸಂಯೋಜಿತ ಪಿಂಚಣಿ (APL/BPL ಭೇದವಿಲ್ಲದೆ) ಒಂದು ಹಕ್ಕು ಆಗಬೇಕು.
* ವಯಸ್ಸಾದವರನ್ನು ಘನತೆಯಿಂದ ಬದುಕಲು ಸಕ್ರಿಯಗೊಳಿಸಲು ಸರ್ಕಾರದಿಂದ ಸಂಪನ್ಮೂಲಗಳನ್ನು ಪೂರೈಸಬೇಕು, ಮಾರುಕಟ್ಟೆ /ಷೇರು ವಿನಿಮಯದ ಮೂಲಕವಲ್ಲ..
* ಎಲ್ಲಾ ವಯಸ್ಸಾದ ಜನರಿಗೆ ಉಚಿತ ಆರೋಗ್ಯ, ಉಪಶಾಮಕ ಮತ್ತು ಮಾನಸಿಕ ಆರೈಕೆಯನ್ನು ಖಾತರಿಪಡಿಸುವುದು.



ಎಐ ಮತ್ತು ಶ್ರಮಿಕ ವರ್ಗ: ಭವಿಷ್ಯದ ಸವಾಲುಗಳು; ಸಂಘಟನಾತ್ಮಕ ಸಾಧ್ಯತೆಗಳು:

ಪ್ರಶಾಂತ್ ಹುಲ್ಕೋಡು

“ಎಲ್ಲರಿಗೂ ಉದ್ಯೋಗ ಮತ್ತು ಉತ್ಪನ್ನಗಳು ಸಮಾನ ಹಕ್ಕುಗಳಾಗಿರುವ ಸಮಾಜದಲ್ಲಿ ಎಐ (ಕೃತಕ ಬುದ್ಧಿಮತ್ತೆ) ಖಂಡಿತವಾಗಿಯೂ ಸಮಸ್ಯೆ ಅಲ್ಲ. ಉದ್ಯಮ ಎಂದಾಗ, ಉತ್ಪಾದಕ ಶಕ್ತಿಗಳ ಬೆಳವಣಿಗೆ ಮಾತ್ರವೇ ಮುಂಬರುವ ದಿನಗಳಲ್ಲಿ ಪ್ರಮುಖ ಅಂಶವಾಗಿ ಉಳಿದುಕೊಳ್ಳುವುದಿಲ್ಲ. ಭವಿಷ್ಯದ ಹೊಸ ಸವಾಲುಗಳನ್ನು ಎದುರಿಸಲು ಹೊಸ ಹಾದಿಗಳನ್ನು ಹುಡುಕಿಕೊಳ್ಳಬೇಕಿದೆ. ತಂತ್ರಜ್ಞಾನದ ಈ ಬೆಳವಣಿಗೆ ಎದುರಿಸಲು ಸಾವಿರಾರು ದಾರಿಗಳಿರಬಹುದು, ಆದರೆ ವರ್ಗ ಸಿದ್ಧಾಂತದ ತಳಹದಿ ಮಾತ್ರವೇ ನಮ್ಮನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಲಿದೆ. ಪ್ರತಿ ಉದ್ಯಮಗಳಲ್ಲೂ ಎಐನ ಪರಿಣಾಮಗಳ ಕುರಿತು ಪ್ರತ್ಯೇಕ ಅಧ್ಯಯನಗಳ ಅಗತ್ಯವಿದೆ. ಶ್ರಮಜೀವಿಗಳ ಮೇಲಾಗುವ ಪರಿಣಾಮಗಳಿಂದ ಹಿಡಿದು, ವೃತ್ತಿಯಲ್ಲಿ ಬರುವ ಬದಲಾವಣೆಗಳನ್ನು, ಕಾರ್ಮಿಕ ಹಾಗೂ ಉದ್ದಿಮೆದಾರರ ನಡುವಿನ ಸಂಬಂಧಗಳನ್ನು ವಿಶ್ಲೇಷಣೆಗೆ ಒಳಪಡಸಬೇಕಿದೆ. ಎಐ ಕ್ರಾಂತಿಯ ಹಿನ್ನೆಲೆಯಲ್ಲಿ ಒಡಮೂಡಿರುವ ಹೊಸ ಕೌಶಲ್ಯಗಳನ್ನು ನಾವು ಒಳಗೊಳ್ಳುವ ಮೂಲಕ, ವೈಜ್ಞಾನಿಕ ರೀತಿಯನ್ನು ಹೊಸ ತಂತ್ರಜ್ಞಾನ ಬಳಸಿಕೊಂಡು, ಸಾಮಾಜಿಕ ಬದಲಾವಣೆಗೆ ದುಡಿಯುವುದು ನಮ್ಮಂತಹ ಸೌದ್ಧಾಂತಿಕ ಬದ್ಧತೆ ಹೊಂದಿರುವ ಕಾರ್ಮಿಕ ಸಂಘಟನೆಗಳ ಕರ್ತವ್ಯ ಕೂಡ.”

2024ರ ಮೇ ತಿಂಗಳ ಕೊನೆಯ ವಾರದಲ್ಲಿ ಹರಿಯಾಣದ ಸೂರಜ್‌ಕುಂಡ್ ನಲ್ಲಿ ನಡೆದ ಸಿಐಟಿಯುನ ಜನರಲ್ ಕೌನ್ಸಿಲ್ ಮೀಟಿಂಗ್ ನಲ್ಲಿ ಎಐ ಕುರಿತು ಮಂಡಿಸಲಾದ ಟಿಪ್ಪಣಿ ಹೀಗೆ ಕೊನೆಗೊಳ್ಳುತ್ತದೆ. ಭಾರತದ ಕಾರ್ಮಿಕ ಸಂಘಟನೆಗಳ ಪೈಕಿ ಪ್ರಮುಖವಾಗಿರುವ ಸಿಐಟಿಯುನ ಈ ನಡೆ ಸ್ವಾಗತಾರ್ಹ ಮತ್ತು ಸಿದ್ಧಾಂತ ಚಲನಶೀಲವಾಗಿದೆ ಎಂಬುದಕ್ಕೆ ಸಾಕ್ಷಿ. 1970ರಲ್ಲಿ ಆರಂಭವಾದ ಸಿಐಟಿಯುನಲ್ಲಿ ಸುಮಾರು 62 ಲಕ್ಷ ಸದಸ್ಯರಿದ್ದರು ಎನ್ನುತ್ತವೆ ವರದಿಗಳು. ದೇಶದ ಹಲವು ಉದ್ಯಮಗಳಲ್ಲಿ ದುಡಿಯುತ್ತಿರುವ ಶ್ರಮಿಕ ವರ್ಗದ ಸಂಘಟನೆಯಲ್ಲಿ ತೊಡಗಿರುವ ಸಂಘಟನೆಯೊಂದು ತಂತ್ರಜ್ಞಾನದ ಆವಿಷ್ಕಾರದಿಂದಾಗಿ ಉಂಟಾಗಿರುವ ಹೊಸ ಸಾಮಾಜಿಕ ಚಲನೆಯನ್ನು ಗುರುತಿಸುವುದು ಕಾಲದ ಅನಿವಾರ್ಯತೆ ಕೂಡ.

ಶ್ರಮಿಕ ಶಕ್ತಿ ಹಿಂದೆ ಬೀಳದಂತೆ ತಡೆಯುವುದು:

ಈ ಹಿನ್ನೆಲೆಯಲ್ಲಿ, ಎಐ ಕುರಿತು ಜನರಲ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಸಲ್ಲಿಕೆಯಾದ 7 ಪುಟಗಳ ಈ ಟಿಪ್ಪಣಿ ಗಮನ ಸೆಳೆಯುತ್ತದೆ. ಎಐನಿಂದಾಗಿ ಬದಲಾಗುತ್ತಿರುವ ಉದ್ಯಮಗಳಲ್ಲಿ ಶ್ರಮಿಕ ಶಕ್ತಿ ಹಿಂದೆ ಬೀಳದಂತೆ ತಡೆಯುವುದು ಟಿಪ್ಪಣಿಯ ಆದ್ಯತೆಯಾಗಿದೆ. ಹೇಗೆ ಜಾಗತಿಕ ಶಕ್ತಿಗಳ ಪೈಕಿ ಅಮೆರಿಕಾ ಮತ್ತು ಚೈನಾ ಎಐ ವಿಚಾರದಲ್ಲಿ ಪೈಪೋಟಿ ನಡೆಸುತ್ತಿವೆ ಎಂಬ ಭೂಮಿಕೆಯನ್ನು ಟಿಪ್ಪಣಿ ಕೊಡಮಾಡುತ್ತದೆ. ಭಾರತದ ಶ್ರಮಿಕ ವರ್ಗದ ಹಿತಾಸಕ್ತಿಯನ್ನು ಕಾಪಾಡಲು ಉದ್ಯಮಗಳ ಒಳಗೆ ಬದಲಾಗುವ ಮಾನವ ಶ್ರಮದ ಪರಿಕಲ್ಪನೆಯನ್ನು ಪರಿಶೀಲಿಸಲು ಮುಂದಾಗುತ್ತದೆ. ಎಐನ ಒಂದು ಅಂಗವಾದ ರೋಬಾಟಿಕ್ಸ್ ನಿಂದ ಉದ್ಯಮಗಳಲ್ಲಿ ಬರುವ ಮಾನವರಹಿತ ಉತ್ಪಾದನಾ ಸರಪಳಿಯನ್ನು ಟಿಪ್ಪಣಿ ಗಮನಿಸುತ್ತದೆ. ಜಾಗತಿಕವಾಗಿ ಉದ್ಯಮಗಳಲ್ಲಿ ಶ್ರಮದ ವಿಭಜನೆಗಳು, ಲಾಭದ ಹಂಚಿಕೆಗಳಲ್ಲಿನ ರೂಪಾಂತರಗಳು ಹೇಗೆಲ್ಲಾ ಆಗಬಹುದು ಎಂಬುದರ ಅರಿವು ನೀಡುವ ಟಿಪ್ಪಣಿ, ಸದ್ಯ ಭಾರತದಲ್ಲಿ ಶ್ರಮಜೀವಿಗಳಿಗೆ ಅಗತ್ಯ ಕೌಶಲ್ಯ ನೀಡುವ ಕಡೆಗೆ ಚಿಂತನೆ ಹರಿಸಿದೆ. ಜತೆಗೆ, ಉದ್ಯಮವಾರು ಎಐ ಪರಿಣಾಮಗಳ ಕುರಿತು ಅಧ್ಯಯನಕ್ಕೂ ಕರೆ ನೀಡುತ್ತದೆ ಈ ಟಿಪ್ಪಣಿ. ಒಟ್ಟಾರೆ, ಎಐ ಕುರಿತು ಅಗತ್ಯವಾಗಿದ್ದ ಚರ್ಚೆಯೊಂದನ್ನು ಕಾರ್ಮಿಕ ಸಂಘಟನೆಯಾಗಿ ಸಿಐಟಿಯು ಆರಂಭಿಸಿದೆ ಎಂಬುದು ಮುಖ್ಯ.

ಆಪ್ ಆಧಾರಿತ ಸೇವೆಗಳು ಎಐ ತಂತ್ರಜ್ಞಾನವೇ!

ಹಾಗೆ ನೋಡಿದರೆ, ಸಿಐಟಿಯು ಕಾರ್ಯಚರಣೆ ನಡೆಸುವ ಆಟೋ ಚಾಲಕರ ನಡುವೆಯೇ ಎಐ ದೊಡ್ಡಮಟ್ಟಿಗೆ ಬದಲಾವಣೆಯನ್ನು ಈಗಾಗಲೇ ತಂದಾಗಿದೆ. ಹಿಂದೆ ಇದ್ದ ಸಾರ್ವಜನಿಕ ಪ್ರಯಾಣದ ಪರಿಕಲ್ಪನೆಯಲ್ಲಿ ಆಪ್ ಆಧಾರಿತ ಸೇವೆಗಳು ತಂದ ಬದಲಾವಣೆ ಸಾಂಸ್ಥಿಕವಾಗಿರುವುದು. ಪ್ರಯಾಣಿಕರನ್ನು ಮತ್ತು ಚಾಲಕರನ್ನು ಬೆಸೆಯುವ ಈ ಆಪ್‌ಗಳು, ಮಾರ್ಗವನ್ನು ತೋರಿಸುತ್ತವೆ, ಆರ್ಥಿಕ ಲೆಕ್ಕಾಚಾರಗಳಲ್ಲೂ ಆಯಾ ಹೊತ್ತಿಗೆ ಕೊಡಮಾಡುತ್ತವೆ. ಈ ಎಲ್ಲಾ ಕೆಲಸಗಳನ್ನು ಸದರಿ ಆಪ್‌ಗಳ ಹಿನ್ನೆಲೆಯಲ್ಲಿ ನಿರ್ವಹಿಸುತ್ತಿರುವುದು ಎಐ ತಂತ್ರಜ್ಞಾನವೇ!

ಸಹಕಾರಿ ಮಾದರಿಯಲ್ಲೋ, ಸಂಘಟನಾ ಸ್ವರೂಪದಲ್ಲೋ...

ಡಿಜಿಟಲೀಕರಣದ ಭಾಗವೇ ಅಗಿರುವ, ವೈಜ್ಞಾನಿಕ ಪ್ರಗತಿಯ ಹಿನ್ನೆಲೆಯಲ್ಲಿ ಮೂಡಿ ಬಂದಿರುವ ಎಐ ತಂತ್ರಜ್ಞಾನವನ್ನು ‘ಕಬ್ಬಿಣದ ಕಡಲೆ’ ಅಂದುಕೊಳ್ಳಬೇಕಿಲ್ಲ. ಈವರೆಗೆ ಬೆಳೆದಿರುವ ಕಂಪ್ಯೂಟರ್ ಹಾಗೂ ಮೊಬೈಲ್ ಯಂತ್ರಗಳ ಬಳಕೆಯನ್ನು ಇನ್ನಷ್ಟು ಸುಲಭವಾಗಿಸುವ ನಿಟ್ಟಿನಲ್ಲಿ ಎಐ ತಂತ್ರಜ್ಞಾನ ಬೆಳೆಯುತ್ತಿದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ನಿರಂತರ ಬದಲಾಗುವ ಸಮಾಜದಲ್ಲಿ ಮಾನಸಿಕವಾಗಿ ಶ್ರಮವನ್ನು ಕಡಿತಗೊಳಿಸಿ, ಮನುಷ್ಯನ ನಿತ್ಯಬದುಕನ್ನು ಸುಲಭವಾಗಿಸುವ ಕೆಲಸವನ್ನು ಈ ತಂತ್ರಜ್ಞಾನ ಈಗಾಗಲೇ ಮಾಡುತ್ತಿದೆ. (ದೈಹಿಕ ಶ್ರಮಕ್ಕೆ ಪೈಪೋಟಿ ನೀಡುವ ರೋಬಾಟಿಕ್ಸ್ ಮತ್ತಿತರ ಎಐ ವಿಭಾಗಗಳ ಕುರಿತು ಬೇರೆಯದೇ ಲೇಖನದ ಅಗತ್ಯವಿದೆ). ಅದಕ್ಕೆ ಆಟೋರಿಕ್ಷಾ ಎಂಬ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಬಂದಿರುವ ಬದಲಾವಣೆ ಒಂದು ಉದಾಹರಣೆಯಾಗಿ ತೆಗೆದುಕೊಳ್ಳೋಣ. ಸರಿಸುಮಾರು 15 ವರ್ಷಗಳ ಹಿಂದೆ ಜಗತ್ತಿನ ಹಲವು ನಗರಗಳಲ್ಲಿ ಸಾರ್ವಜನಿಕ ಪ್ರಯಾಣ ವ್ಯವಸ್ಥೆಗೆ ಡಿಜಿಟಲ್ ಆಪ್‌ಗಳ ಪ್ರವೇಶವಾಯಿತು. 2011ರ ವೇಳೆಗೆ ಬೆಂಗಳೂರಿನಲ್ಲಿ ಓಲಾ, ಉಬರ್‌ಗಳು ಶುರುವಾದವು. ಆರಂಭದಲ್ಲಿ ದೊಡ್ಡಮೊತ್ತದ ಬಂಡವಾಳ ಹೂಡಿಕೆಯ ಮೂಲಕವೇ ಈ ಉದ್ಯಮಗಳನ್ನು ಕಂಪನಿಗಳು ಸೃಷ್ಟಿಸಿದವು. ಹೇಗೆ ಎಲ್ಲಾ ಉದ್ಯಮಗಳು ಲಾಭಕೋರತೆ ಬೆಳೆಸಿಕೊಳ್ಳುತ್ತವೆಯೋ, ಹಾಗೆಯೇ ಈ ಕಂಪನಿಗಳೂ ಕೂಡ ಒಂದು ದಶಕ ಕಳೆಯುವ ಹೊತ್ತಿಗೆ ಶ್ರಮದ ಹಂಚಿಕೆಯಲ್ಲಿ ಹೆಚ್ಚಿನ ಪಾಲನ್ನು ತಾವೇ ಬಯಸಲು ಶುರುಮಾಡಿದವು. ಇದು ಪ್ರಯಾಣಿಕರಿಗೂ, ಚಾಲಕರಿಗೂ ದುಬಾರಿ ಅನ್ನಿಸತೊಡಗಿತು. ಇದೀಗ ಆಪ್‌ನ ಮಾಲೀಕತ್ವವನ್ನು ಸಹಕಾರಿ ಮಾದರಿಯಲ್ಲೋ, ಸಂಘಟನಾ ಸ್ವರೂಪದಲ್ಲಿಯೋ ಹೊಂದಲು ಸಾಧ್ಯವಾದರೆ, ಆ ಉದ್ಯಮದಿಂದ ಬರುವ ಲಾಭದ ವಿಭಜನೆಗೆ ಹೊಸ ಸ್ವರೂಪವನ್ನೂ ನೀಡಬಹುದು. ಚಾಲಕರ ಸಂಘಟನೆ ಬೆಳೆಯಲು ಹೊಸ ಸಾಧ್ಯತೆಯೂ ಸೃಷ್ಟಿಯಾಗಬಹುದು.

ಎಐ ಬಳಕೆ ಕುರಿತು ವೈಜ್ಞಾನಿಕ ಅಧ್ಯಯನದ ಅಗತ್ಯ ಇದೆ:

ಎಐ ಬಳಕೆಯ ಕುರಿತು ಇಂತಹ ಕೆಲವು ಪ್ರಾಯೋಗಿಕ ಅಂಶಗಳ ಮೂಲಕವೇ ಈ ಕಾಲಘಟ್ಟಕ್ಕೆ ಅನುಗುಣವಾಗಿ ಸಿದ್ಧಾಂತವನ್ನೂ ಅಪ್‌ಡೇಟ್ ಮಾಡಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಸಿಐಟಿಯು ಟಿಪ್ಪಣಿ ಉಲ್ಲೇಖಿಸಿದಂತೆ, ಪ್ರತಿ ಉದ್ಯಮದ ಎಐ ಬಳಕೆ ಕುರಿತು ವೈಜ್ಞಾನಿಕವಾದ ಅಧ್ಯಯನವೊಂದರ ಅಗತ್ಯ ಇದೆ. ಎಐ ಬಳಕೆಯಿಂದ ನಾನಾ ಉದ್ಯಮಗಳು ಹಾಗೂ ಉದ್ಯೋಗದ ಸ್ವರೂಪದಲ್ಲಿನ ಬದಲಾವಣೆಗಳ ಬಗ್ಗೆ ಸಮಗ್ರ ಒಳನೋಟವನ್ನು ಕಂಡುಕೊಳ್ಳಬೇಕಿದೆ. ಜತೆಗೆ, ಎಐ ಬಳಕೆಯಿಂದ ಎದುರಾಗಬಹುದಾದ ಉದ್ಯೋಗ ಕಡಿತ, ಹೊಸ ಉದ್ಯೋಗಗಳ ಸೃಷ್ಟಿಯಾಗದೆ ಇರುವ ಸಾಧ್ಯತೆಗಳಿವೆ. ಈ ಬಗ್ಗೆ ಸರಕಾರಗಳು ಸೂಕ್ತ ಹೆಜ್ಜೆ ಇಡುವಂತೆ ಧ್ವನಿ ಎತ್ತುವ ಕೆಲಸವೂ ಆಗಬೇಕಿದೆ. ಸರಕಾರ, ಉದ್ಯಮ ಮಾಲೀಕರು ಎಐ ಬಳಕೆಗೂ ಮುನ್ನ ಶ್ರಮಜೀವಿ ವರ್ಗದ ಜತೆಗೆ ಮಾಹಿತಿ ವಿನಿಮಯ ಮಾಡಿಕೊಳ್ಳುವ, ಚರ್ಚಿಸುವ ವ್ಯವಸ್ಥೆಯನ್ನು ಜಾರಿಗೆ ತರಬೇಕಿದೆ. ಎಐ ವಿಚಾರದಲ್ಲಿ ಬರುವ ಕಾನೂನುಗಳಲ್ಲಿಯೂ ಶ್ರಮಿಕ ವರ್ಗದ ಸಲಹೆಗಳಿಗೆ ಜಾಗ ಇರುವಂತೆ, ಲಾಭದಲ್ಲಿ ಒಂದು ಪಾಲು ಇರುವಂತೆ ಕಾಳಜಿವಹಿಸಬೇಕಿದೆ. ಎಐ ಸೇವೆಗಳಿಂದ ಸೃಷ್ಟಿಯಾಗಿರುವ ಹೊಸ ತಲೆಮಾರಿನ ‘ಗಿಗ್ ವರ್ಕರ್ಸ್’ ಎಂದು ಕರೆಯುವ ವರ್ಗವನ್ನು ಸಂಘಟಿಸುವ, ಅವರಿಗೆ ವರ್ಗ ಸಂಘರ್ಷದ ಒಳನೋಟಗಳನ್ನು ಕೊಡುವ ಮೂಲಕ ಬದಲಾದ ಸನ್ನಿವೇಶದಲ್ಲಿ ದುಡಿಯುವ ವರ್ಗದ ಮೈತ್ರಿಯನ್ನು ಕಟ್ಟುತ್ತಿರುವ ಕೆಲಸ ಇನ್ನಷ್ಟು ಚುರುಕು ಪಡೆಯಬೇಕಿದೆ.



NEW No. MAG(3)/NPP/205/2021-2022
JANASHAKTHI KANNADA VARA PATRIKE June 16-22, 2025 Price: Rs. 10/- Date of Publication: 13 June 2025 RNI No. KARKAN/2006/17926 Posted on 18-06-2025
Posted at BG PSO, BG - 560026 **Posted at Periodical Rate** - Rs. 2





ನಾಟಕ ವಿಮರ್ಶೆ

ಸಮಕಾಲೀನ ರಾಜಕಾರಣದ ಅಶ್ವತ್ಥಾಮ ನಾಟ್‌ಔಟ್ ಜಿಜ್ಞಾಸೆಗೆ ರಂಗರೂಪ

ವಾಸುದೇವ ಉಚ್ಚಿಲ

ಯಕ್ಷಗಾನ ವೀಕ್ಷಕರಿಗೆ ಅಶ್ವತ್ಥಾಮನ ಕಥೆ ಅಪರಿಚಿತವೇನಲ್ಲ. ಕನ್ನಡ ಕಾವ್ಯ ಸಾಹಿತ್ಯದಲ್ಲೂ ಕಥೆ ಗೊತ್ತಿದ್ದದ್ದೇ. ಆತನ ವಿಕ್ಷಪ್ತತೆಯ ಎಳೆ ಹಿಡಿದುಕೊಂಡೇ ಯಕ್ಷಗಾನ, ನಾಟಕದ ಕಲಾವಿದರು ವಿವಿಧ ನೆಲೆಗಳಲ್ಲಿ ಅಶ್ವತ್ಥಾಮನನ್ನು ನಿರೂಪಿಸಿದ ಉದಾಹರಣೆಗಳು ನಮ್ಮೆದುರಿಗಿವೆ.

ಈ ಹಿನ್ನೆಲೆಯಲ್ಲಿ ಮೋಹನಚಂದ್ರ (ಮೋಚ) ಅವರು ಬರೆದು ನಿರ್ದೇಶಿಸಿದ, ಮಂಗಳೂರಿನ 'ಆಯನ' ನಾಟಕದ ಮನೆಯವರು ಆಡಿದ ಅಶ್ವತ್ಥಾಮ ನಾಟ್‌ಔಟ್ ನಾಟಕದ ಪ್ರದರ್ಶನವು ಮಂಗಳೂರಿನ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಎಪ್ರಿಲ್ 8ರಂದು ನಡೆಯಿತು.

"ಅಶ್ವತ್ಥಾಮ ನಾಟ್‌ಔಟ್ 'ನಾಟಕದ ಪ್ರದರ್ಶನ ಸೀದಾ ಸೀದಾ ಪುರಾಣದ ಪರಿಕ್ಷೇತ್ರದಲ್ಲೇ ನಡೆಯುವುದಿಲ್ಲ. ಅದು ಈ ಕಾಲದ ಮನೋರೋಗಿಗಳ ಆಸ್ಪತ್ರೆಯ ಕೊಠಡಿಯ ಆವರಣದಲ್ಲಿ ನಡೆಯುವಂಥದ್ದು. ಇಲ್ಲಿ ಬರುವುದು ಒಬ್ಬ ಮನೋರೋಗಿ, ಒಬ್ಬ ನರ್ಸ್ ಮತ್ತು ಒಬ್ಬ ಮನೋವೈದ್ಯ. ಮನೋರೋಗಿ ತಾನು ತನ್ನನ್ನು ಅಶ್ವತ್ಥಾಮ ಎಂದು ತಿಳಿದುಕೊಂಡಿರುತ್ತಾನೆ. ಈತನ ಬಳಿಬಂದ ನರ್ಸ್ (ಪ್ರಹರಿ)ನ್ನು ದ್ವಾಪರದ ಶಕುನಿ ಎಂದು ಭಾವಿಸುತ್ತಾನೆ. ಮನೋವೈದ್ಯ ಡಾಕ್ಟರ್‌ನನ್ನು ಕೃಷ್ಣ ಎಂದೂ ಭಾವಿಸುತ್ತಾನೆ. ರೋಗಿಯನ್ನು ಅರ್ಥಮಾಡಿಕೊಳ್ಳಲು ನರ್ಸ್ ಮತ್ತು ಡಾಕ್ಟರ್ ತಾವೂ ಶಕುನಿ ಹಾಗೂ ಕೃಷ್ಣರಾಗಿ ನಟಿಸಲು ಪ್ರಾರಂಭಿಸುತ್ತಾರೆ. ಆಸ್ಪತ್ರೆಯ ಒಳಾವರಣದ ಸನ್ನಿವೇಶವು ಮಹಾಭಾರತ ಪುರಾಣದ ಸನ್ನಿವೇಶವಾಗಿ ಮಾರ್ಪಾಡಾಗುತ್ತದೆ.

ವಿಸ್ತಾರವಾದ ಎರಡನೆ ದೃಶ್ಯದಲ್ಲಿ ಅಶ್ವತ್ಥಾಮ, ಶಕುನಿ ಮತ್ತು ಕೃಷ್ಣ ಪಾತ್ರಗಳು ಮುಖಾಮುಖಿಯಾಗುತ್ತವೆ. ಮಹಾಭಾರತ ಕಾಲದ ಸಂದರ್ಭದಲ್ಲಿ ತಾವು ಮಾಡಿದ ಕೃತ್ಯಗಳ ಬಗ್ಗೆ ಒಂದೋ ಮತ್ತೊಬ್ಬರಲ್ಲಿ ಸಮರ್ಥಿಸಿಕೊಳ್ಳುತ್ತಾರೆ ಇಲ್ಲವೇ ಅವರಿಬ್ಬರ ಕೃತ್ಯಗಳ ಬಗ್ಗೆ ಟೀಕೆ ಮಾಡುತ್ತಾರೆ. ಈ ಟೀಕೆ, ವಿಮರ್ಶೆಗಳ ಹಿನ್ನೆಲೆಯಲ್ಲಿ ಮಹಾಭಾರತದ ಹಲವಾರು ಘಟನೆಗಳು ವಿಶ್ಲೇಷಣೆಗೊಳಪಡುತ್ತಾ ಹೋಗುತ್ತವೆ. ಪ್ರಧಾನವಾಗಿ ಅವೆಲ್ಲವೂ ಭೂಮಿ ಮತ್ತು ಅಧಿಕಾರವನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಯತ್ನಗಳಾಗಿ ಗುರುತಿಸಲ್ಪಡುತ್ತವೆ. ಆ ಗಣನೆಯಲ್ಲಿ ಭೀಷ್ಮನದ್ದೂ ಅಧಿಕಾರ ತನ್ನಲ್ಲಿರಿಸುವ ವರಸೆ, ತಾನು ಕುರುಡನಾಗಿದ್ದರೂ ಧೃತರಾಷ್ಟ್ರನದೂ ಅಧಿಕಾರ ಭದ್ರಪಡಿಸುವ ವರಸೆ. ಈ ಹಿನ್ನೆಲೆಯಲ್ಲಿ ನೂರು ಮಕ್ಕಳೂ ಧೃತರಾಷ್ಟ್ರನವು ಎನ್ನುವ ಸುಳ್ಳುಗಳು. ಗಾಂಧಾರಿ ಪಿಂಡವೊಂದನ್ನು ಹಿಸುಕಿ ನೂರು ಮಾಡಿದಳೆಂಬ ಸುಳ್ಳು. ಅತಿಕಾಮಿಯಾದ ಧೃತರಾಷ್ಟ್ರನು ಗಾಂಧಾರಿಯ ದಾಸಿಯರಲ್ಲಿ ಪಡೆದ ಮಕ್ಕಳು ನೂರಾರು ಕೌರವರು ಎಂದು ಈ ನಾಟಕ ನಿರೂಪಿಸಿ, ನಮ್ಮ ವಿವೇಚನೆಯ ಸಮ್ಮತಿ ಪಡೆದುಕೊಳ್ಳುತ್ತಿದೆ.

ಲೌಕಿಕಾತೀತವಾದ ಬೇರೆ ಒಂದೆರಡು ವಿದ್ಯಮಾನಗಳನ್ನು ಲೌಕಿಕದ ವ್ಯಾಪ್ತಿಗೆ ತಂದು ನಿರೂಪಿಸುವ ಒಂದೆರಡು ಘಟನೆಗಳು ಇಲ್ಲಿವೆ. ದ್ರೌಪದಿಯ ಅಕ್ಷಯಾಂಬರವೂ ಅವುಗಳಲ್ಲೊಂದು. ದ್ರೌಪದಿಯ ಮಾನಭಂಗವಾಗುವ ಹೊತ್ತಿನಲ್ಲಿ ಕೃಷ್ಣನ ಕೋರಿಕೆಯಂತೆ ಗಾಂಧಾರಿಯು ತನ್ನ ನೂರು ಮಂದಿ ಸೊಸೆಯಂದಿರಿಗೆ ಸೂಚಿಸಿದ ಮೇರೆಗೆ, ಉಪ್ಪರಿಗೆಯಿಂದ ಆ ನೂರು ಮಂದಿ ರಾಶಿ ರಾಶಿ ತಮ್ಮ ಮೇಲುದವನ್ನು ದ್ರೌಪದಿಯ ಮೇಲಕ್ಕೆ ಎಸೆಯುತ್ತಿದ್ದಾಗ, ದುಶ್ಯಾಸನ ದ್ರೌಪದಿಯ ಮಾನಭಂಗ ಮಾಡಲಾಗದೆ ಹೋದ ಎಂಬ ನಿರೂಪಣೆ ಈ ಮೂರು ಪಾತ್ರಗಳ ಚರ್ಚೆಯಲ್ಲಿ ಮೂಡುತ್ತದೆ. ತನ್ನನ್ನು ತಾನು ದೈವಾಂಶಸಂಭೂತನೆಂದು ಜನ ಭಾವಿಸಬೇಕೆಂಬ ಗ್ರಹಿಕೆಯನ್ನು ಕೃಷ್ಣನೇ ಬೆಳೆಸಿದನೆಂದು ಮತ್ತಿಬ್ಬರು ಆರೋಪಿಸುತ್ತಾರೆ. ಅಧಿಕಾರ ಬಲಪಡಿಸಲು ತಾನು ದೈವ ಪುರುಷನೆಂಬ ಪ್ರಚಾರವು ಇವತ್ತಿಗೂ ಅಗತ್ಯ ಎನ್ನುತ್ತದೆ ಅವರ ಚರ್ಚೆಗಳು.

> **ಮೂರು ಪಾತ್ರಗಳನ್ನು ರಂಗದಲ್ಲಿರಿಸಿ, ಮಹಾಭಾರತ ಕಥೆಯಲ್ಲಿ ಕಂಡುಬರುವ ಕ್ರೌರ್ಯ, ಹಿಂಸೆ, ಯುದ್ಧದ ಭೀಕರತೆಯನ್ನೂ, ಸಾವಿನ ಅನಿವಾರ್ಯತೆಯನ್ನು ಅರಿತೂ ಮನುಷ್ಯ ತಾನು ಚಿರಂಜೀವಿ ಎಂದು ಭ್ರಮಿಸಿ ಲೋಕಕಂಟಕನಾಗುವುದನ್ನು, ನಾಟಕವು ಹೇಳುವ ಪ್ರಯತ್ನ ಮಾಡುತ್ತದೆ.**

ಯುದ್ಧದಲ್ಲಿ ಯಾದವರ ಸಖ್ಯವನ್ನು ಯಾಕೆ ಕೌರವರೂ, ಪಾಂಡವರೂ ಬಯಸಿದರು? ಗೊಲ್ಲರಾದ ಯಾದವರಲ್ಲಿ ಹೇರಳವಾದ ಗೋಸಂಪತ್ತಿತ್ತು. ಆರ್ಥಿಕವಾಗಿ ಅವರು ಕುರುಗಳಿಗಿಂತಲೂ ಬಲಿಷ್ಟರಾಗಿದ್ದರು. ದೂರದಲ್ಲಿರುವ ಹಾಲುಮತದ ವಿರಾಟನ ಸಹಾಯ ಪಡೆಯುವುದಕ್ಕಿಂತಲೂ, ಸಮೀಪದ ಮಥುರೆಯ ಆಸುಪಾಸಿನಲ್ಲಿದ್ದ ಯಾದವರ ಹಣಬಲ ಹಾಗೂ ಮಾನವಬಲ ಪಾಂಡವ ಕೌರವರಿಬ್ಬರಿಗೂ ಅಗತ್ಯವಾಗಿತ್ತು ಎಂದು ಚರ್ಚೆ ಸಾಗುತ್ತದೆ.

ಮಹಾಭಾರತದಂಥ ಪ್ರಾಚೀನ ಕತೆಗಳಲ್ಲಿ ಕಾಲ್ಪನಿಕವಾಗಿ ಕಾಣುವ ಅಥವಾ ಅಲೌಕಿಕವೆನಿಸಬಹುದಾದ ಘಟನೆಗಳನ್ನು ವಾಸ್ತವಿಕಗೊಳಿಸುವ ಹಾಗೂ ಲೌಕಿಕಗೊಳಿಸುವ ಕೆಲಸಗಳನ್ನು ಪುರಾಣಗಳನ್ನಾಧರಿಸಿ ಬರೆಯುವ ಆಧುನಿಕ ಸಾಹಿತಿಗಳು ಮಾಡಲೇಬೇಕೇ ಎಂಬುದು ಒಂದು ಚರ್ಚಾಸ್ಪದ ವಿಷಯ.

ಆದರೆ ಶಕುನಿ ಮತ್ತು ಅಶ್ವತ್ಥಾಮರದ್ದು ಪ್ರತೀಕಾರದ ಕೃತ್ಯಗಳು. ಶಕುನಿಯ ಬಗ್ಗೆ ಸಾಮಾನ್ಯವಾಗಿ ತಿಳಿದಿರದ ಹಿನ್ನೆಲೆಯನ್ನು ಈ ನಾಟಕ ಹೇಳುತ್ತಿದೆ. ಗಾಂಧಾರ ರಾಜನ ಪುತ್ರಿಯಾದ ಗಾಂಧಾರಿ ಮೂಲ ನಕ್ಷತ್ರದಲ್ಲಿ ಜನಿಸಿದವಳಾಗಿದ್ದು, ಅವಳಿಗೆ ಮೊದಲ ವಿವಾಹದಲ್ಲಿ ಪತಿಯಾದವನು ಮೂರು ದಿನಗಳಲ್ಲಿ ಮರಣ ಹೊಂದುವನು ಎಂಬ ಮಾತಿತ್ತಂತೆ. ಮೊದಲ ಪತಿಯು ಮರಣ ಹೊಂದಿದ ಬಳಿಕ ಕುರುವಂಶದ ಧೃತರಾಷ್ಟ್ರನಿಗೆ ಗಾಂಧಾರಿಯನ್ನು ಮದುವೆ ಮಾಡಲಾಯಿತು. ಶಕುನಿಯೂ ಸೇರಿ ನೂರು ಮಂದಿ ಗಾಂಧಾರಿಯ ಸೋದರರಾದ ಗಾಂಧಾರ ರಾಜಪುತ್ರರನ್ನು ಹಸ್ತಿನಾವತಿಗೆ ಆಹ್ವಾನಿಸಿದ ಧೃತರಾಷ್ಟ್ರ ಅವರನ್ನು ನಗರದ ಹೊರಗಡೆ ಬಂಧನದಲ್ಲಿಟ್ಟು ಅನ್ನಾಹಾರ ಕೊಡದೆ ಕೊಲ್ಲಿಸುತ್ತಾನೆ. ಆ ಬಂಧನದಿಂದ ಹೇಗೋ ತಪ್ಪಿಸಿಕೊಂಡು ಬಂದು ತನ್ನ ಸೋದರಿ ಗಾಂಧಾರಿಯ ಆಶ್ರಯ ಪಡೆದ ಶಕುನಿ, ಕೌರವರನ್ನು ಚೆನ್ನಾಗಿಟ್ಟುಕೊಂಡೇ ಕುರುವಂಶದ ವಿನಾಶಕ್ಕಾಗಿ ಪ್ರಯತ್ನಿಸಿದೆ ಎನ್ನುತ್ತಾನೆ ಈ ನಾಟಕದ ಶಕುನಿ. ಹಾಗಾಗಿ ಶಕುನಿಯದ್ದು ಒಂದು ಪ್ರತೀಕಾರದ ಕತೆ.

ಚಿರಂಜೀವಿತ್ವದ ವರವನ್ನು ತಂದೆ ದ್ರೋಣರಿಂದ ಪಡೆದ ಅಶ್ವತ್ಥಾಮನ ಪ್ರತೀಕಾರದ ಕತೆ ಭಯಾನಕವೂ, ದಾರುಣವೂ ಆದುದು. ದ್ರೋಣನಾಗಲಿ, ಅಶ್ವತ್ಥಾಮನಾಗಲಿ ಅಧಿಕಾರಸ್ಥ ಕೌರವರ ಸಾಮೀಪ್ಯ ಹೊಂದಿ ಸಕಲ ಸೌಭಾಗ್ಯ ಲಾಭಗಳನ್ನು ಹೊಂದುವುದು ಇವತ್ತು ನಡೆಯುವ ವಿದ್ಯಮಾನಗಳಿಗೆ ಹೋಲುವಂತದ್ದೇ ಆಗಿದೆ. ಚಿರಂಚೀವಿಯಾಗಿರುವುದರಿಂದ ತಾನೇನು ಕುಕೃತ್ಯ ಮಾಡಿದರೂ ಸಾವಂತೂ ಬರುವುದಿಲ್ಲ. ಅಲ್ಲದೆ ಪೋಷಕರ ಬೆಂಬಲವೂ ಇದ್ದೇ ಇರುತ್ತದೆ. ಕಳೆದ ಐವತ್ತು ವರ್ಷಗಳ ಆಧುನಿಕ ಭಾರತದ ಇತಿಹಾಸದಲ್ಲಿ ಇಂಥ ಹಲವಾರು ವಿದ್ಯಮಾನಗಳನ್ನು ನಾವು ನೋಡಿರುತ್ತೇವೆ. ಯುದ್ಧ ನಿಯಮವನ್ನು ಮುರಿದು, ರಾತ್ರಿ ಹೊತ್ತಲ್ಲಿ ಮಲಗಿದ್ದ ಅಮಾಯಕ ಬಾಲಕರಾದ ಉಪಪಾಂಡವರ ತಲೆಗಳನ್ನು ಕತ್ತರಿಸಿದ್ದು ನ್ಯಾಯಬಾಹಿರವೆಂದು ಕೃಷ್ಣನೂ, ಶಕುನಿಯೂ ತಿಳಿಸಿ, ಅಶ್ವತ್ಥಾಮ ಅದಕ್ಕಾಗಿ ನ್ಯಾಯ ವಿಚಾರಣೆಯನ್ನು ಎದುರಿಸಬೇಕಾಗುತ್ತದೆಂದೂ ಸೂಚಿಸುತ್ತಾರೆ.

ಮೂರನೆಯ ಹಾಗೂ ಕೊನೆಯ ದೃಶ್ಯವು ನ್ಯಾಯ ವಿಚಾರಣೆಯ ಪ್ರಸಂಗ. ಇಲ್ಲಿ ನ್ಯಾಯವಾದಿಗಳಾಗಿ ನರ್ಸ್ ಮತ್ತು ಡಾಕ್ಟರ್ ಇದ್ದಾರೆ. ನ್ಯಾಯವಾದಿಗಳ ಕೋಟು ಧರಿಸಿದ್ದಾರೆ. ನ್ಯಾಯಾಧೀಶ ಯಾರೆಂದು ಕೊಳ್ಳುವಾಗ ಅಶ್ವತ್ಥಾಮನೇ ನ್ಯಾಯಾಧೀಶನಾಗಿ ಪ್ರತ್ಯಕ್ಷನಾಗುತ್ತಾನೆ. ಕೋರ್ಟ್ ಸನ್ನಿವೇಶವನ್ನು ಅಣಕಿಸುವಂತಹ ಈ ದೃಶ್ಯದಲ್ಲಿ ಆರೋಪಿ (ನಿಜವಾಗಿ ಅಪರಾಧಿ) ಅಶ್ವತ್ಥಾಮನೇ ನ್ಯಾಯಾಧೀಶನಾಗುತ್ತಾನೆ. ನ್ಯಾಯಾಧೀಶರು ಭ್ರಷ್ಟರಾಗಿರುವುದು, ನ್ಯಾಯಾಧೀಶರೇ ತಮ್ಮ ಮೇಲಿನ ಆರೋಪದ ಬಗ್ಗೆ ವಿಚಾರಣೆ ನಡೆಸುವುದು ಈ ಮೊದಲಾದ ಈ ಕಾಲದ ದೇಶದ ವಿದ್ಯಮಾನಗಳು ಇಲ್ಲಿ ಪ್ರಸ್ತಾಪವಾಗುತ್ತವೆ. ಕೊನೆಗೂ ವಿಚಾರಣೆ ಆರಂಭವಾದಾಗ, ಉಪಪಾಂಡವರ ತಲೆಗಳನ್ನು ಕಡಿಯುವ ಮೊದಲೇ ತಾನು ತನ್ನಪ್ಪ ದ್ರೋಣನನ್ನು ಅವಮಾನಿಸಿದ ಆತನ ಬಾಲ್ಯದ ಗೆಳೆಯ ದ್ರುಪದನ ಸಂತತಿಯನ್ನೇ ಹೇಗೆ ಪ್ರತೀಕಾರವಾಗಿ ಕೊಂದುಬಿಟ್ಟೆ ಎಂದು ಅಶ್ವತ್ಥಾಮ ನಿರೂಪಿಸುತ್ತಾನೆ. ದ್ರುಪದನ ಮಕ್ಕಳಾದ ದೃಷ್ಟದ್ಯುಮ್ನ, ಶಿಖಂಡಿಯರನ್ನೂ ಆ ಬಳಿಕ ಅವರ ಸೋದರಿ ದ್ರೌಪದಿಯ ಮಕ್ಕಳಾದ ಉಪಪಾಂಡವರನ್ನೂ ಕೊಂದು ಅಶ್ವತ್ಥಾಮ ತನ್ನ ರಕ್ತಪಿಪಾಸುತನವನ್ನು ವ್ಯಕ್ತಪಡಿಸುತ್ತಾನೆ. ಅಧಿಕಾರದ ಸಾಮೀಪ್ಯದಿಂದ

ಪುಟ 12 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**